



ಗಾಂಧೀಜಿ

ನಾನು ಕಂಡಂತೆ

ದಿವಾಕರ



ಗಾಂಧೀಜಿ — ನಾನು ಕಂಡಂತೆ

ರಂಗನಾಥ ದಿವಾಕರ

ಸರದಾರ ವಲ್ಲಭಭಾಯಿ ಪಟೇಲರ ಮುನ್ನುಡಿ ಸಹಿತ

ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ

ಮುದ್ರಕರು :
ಶ್ರೀ. ಹ. ರಾ. ಮೊಹರೆ
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಬೆಲೆ : ೧-೪-೦

ಪ್ರಕಾಶಕರು :
ಶ್ರೀ. ರಂಗನಾಥ ರಾಮಚಂದ್ರ ದಿವಾಕರ
ಅಧ್ಯಾತ್ಮ ಕಾರ್ಯಾಲಯ,
ಹುಬ್ಬಳ್ಳಿ

ಪರಿವಿಡಿ

ಮುನ್ನುಡಿ

ಶ್ರೀ ದಿವಾಕರರು ಕಾಂಗ್ರೆಸ್ಸಿನ ಒಬ್ಬ ನಿಷ್ಠಾವಂತ ಆಜೀವ ಅನುಯಾಯಿಗಳು, ಭಕ್ತರು. ಗಾಂಧೀಜಿಯವರ ಹಲವು ಅತ್ಯಂತ ಸಲಿಗೆಯ ಶಬ್ದ ಚಿತ್ರಗಳನ್ನು ತಮ್ಮ 'ಗ್ಲಿಂಪ್ಸೆಸ್ ಆಫ್ ಗಾಂಧೀಜಿ' ಎಂಬ ಪುಸ್ತಕದಲ್ಲಿ ರೇಖಿಸಿರುವರು. ದೂರ ದೂರದಲ್ಲಿರುವ ವಿನಮ್ರ ಕಾರ್ಯಕರ್ತರಿಗೆ ಸಹ ಗಾಂಧೀಜಿಯವರು ಎಷ್ಟು ನಿಕಟವರ್ತಿ ಎನಿಸುತಿದ್ದರು ಎಂಬುದನ್ನು ಚೆನ್ನಾಗಿ ಬಣ್ಣಿಸಿರುವರು. ಪ್ರತ್ಯಕ್ಷ ವ್ಯವಹಾರದೃಷ್ಟಿಯಿಂದ ಹಾಗೂ ತಮ್ಮ ಅನುಭವದ ದೃಷ್ಟಿಯಿಂದ ಗಾಂಧೀಜಿಯವರ ಅವತಾರಕಾರ್ಯವನ್ನು ಹಾಗೂ ಅವರ ಸಂದೇಶವನ್ನು ಅವರು ಅರುಹಲು ಇಲ್ಲಿ ಯತ್ನಿಸಿರುವರು. ಅನೇಕ ಸಾರೆ ಹಾಗೂ ವಿವಿಧ ಸಂದರ್ಭಗಳಲ್ಲಿ ಪ್ರತ್ಯಕ್ಷ ಇಲ್ಲವೆ ಪತ್ರವ್ಯವಹಾರದ ಮೂಲಕ ತಮಗೆ ಬಂದ ಗಾಂಧೀಜಿಯವರ ಸಂಬಂಧವನ್ನು ಅವರು ವರ್ಣಿಸಿರುವರು. ಅದು ವಾಚಕರಿಗೆ ಅತ್ಯಂತ ಮನೋವೇಧಕವೆನಿಸದೆ ಇರಲಾರದು. ಅಪರಿಚಿತರಿಗೆ ಸಹ ಅವರು ತಮ್ಮವರೆ ಎಂದೆನಿಸುವಂತೆ ವರ್ತಿಸುವ ವಿಲಕ್ಷಣವಾದ ಸ್ವಾಭಾವಿಕ ಶಕ್ತಿ ಗಾಂಧೀಜಿಯವರಲ್ಲಿತ್ತು. ಅವರ ಅಂತಃಕರಣವು ತಮ್ಮೆಡೆಗೆ ಹರಿದು ಬರುವ ಲಕ್ಷಾಂತರ ಹಳ್ಳಹೊಳೆಗಳನ್ನು ಆತ್ಮಸಾತ್ ಮಾಡಿಕೊಳ್ಳುವ ವಿಶಾಲ ಸಾಗರದಂತೆ ಇತ್ತು. ಅವರ ಹೃದಯರೂಪಿ ಪ್ರೇಮಸಾಗರವು ಪ್ರತಿಯೊಬ್ಬನ ಸಂಬಂಧದೊಡನೆ ಅಷ್ಟೇ ಉತ್ಸಾಹದಿಂದ ಉಕ್ಕುತಿತ್ತು.

ಅನೇಕ ಏರಿಳಿತಗಳಿಗೆ ಒಳಗಾದ ಹಿಂದುಸ್ತಾನದ ಇತಿಹಾಸದಲ್ಲಿ ೧೯೪೮ರ ಜಾನೇವರಿ ಮೂವತ್ತನೆ ತಾರೀಖು ಒಂದು ಅತ್ಯಂತ ಅಶುಭ ಕರಿ ಕಾಲವೆಂದು ಸ್ಮರಣೆಯಲ್ಲಿ ಉಳಿಯುವುದು. ಆದರೆ ಗಾಂಧೀಜಿಯವರ ಮಟ್ಟಿಗೆ ಅದು ಅವರ ಜೀವನಮಂದಿರದ ಮೇಲೆ ಅತ್ಯುಚ್ಚ ಕಳಸವಿಟ್ಟ ದಿನವು. ಅವರು

ಆಜೀವ ಉಪದೇಶಿಸುತ್ತ ಬಂದ ಪಾಠ ಹಾಗೂ ಅವರ ಅವತಾರಕಾರ್ಯ ಇವುಗಳ ದೃಷ್ಟಿಯಿಂದ ಇದಕ್ಕೂ ಯೋಗ್ಯವಾದ ಸಾವನ್ನು ಅವರು ಬಯಸಿರಲಾರರು. ಆ ಕೊಲೆಗಡಕನು ಗಾಂಧೀಜಿಯವರ ಕೋಮಲ ಹಾಗೂ ಜೀರ್ಣ ಶರೀರದಲ್ಲಿ ಒಂದರಹಿಂದೊಂದು ಗುಂಡುಗಳನ್ನಿಕ್ಕಿದನು. ತನ್ನ ಹುಚ್ಚುಚ್ಚ ಕನಸನ್ನು ನನಸಾಗಿ ಮಾಡುವುದಕ್ಕೆ ಅಡ್ಡಬರುತಿರುವ ಶಕ್ತಿಯೊಂದನ್ನು ಈ ಜಗತ್ತಿನಿಂದ ಇಲ್ಲದಂತೆ ಮಾಡುತಿರುವೆನೆಂದು ಅವನು ಭಾವಿಸಿದ್ದನು. ಆದರೆ ತನ್ನ ಕೃತ್ಯದಿಂದ ಗಾಂಧೀಜಿಯವರ ಜೀವನೋದ್ದೇಶಕ್ಕೆ ಅವನು ದೈವೀ ಮುದ್ರೆಯನ್ನೊತ್ತುತಿದ್ದನೆಂಬ ಮಾತು ಅವನಿಗೇನು ಗೊತ್ತು ?

ಹುತಾತ್ಮರಾದ ಗಾಂಧೀಜಿಯವರ ಪ್ರಥಮ ಶ್ರಾದ್ಧದಿನ ಆ ಮಹಾ ಗುರುಗಳ ಒಬ್ಬ ನಿಷ್ಠಾವಂತ ಭಕ್ತನು ಈ ಒಂದು ತನ್ನ ಕಾಣಿಕೆಯನ್ನು ಅರ್ಪಿಸುತಿರುವನು. ಈ ಮೂಲಕ ಒಂದು ಮಹತ್ತರವಾದ ಮಾತನ್ನು ವಾಚಕರು ಕಲಿತುಕೊಳ್ಳುವಂತಿದೆ. ಪರಮಾತ್ಮನಲ್ಲಿ ಹಾಗೂ ತನ್ನ ಪವಿತ್ರ ಜೀವನೋದ್ದೇಶಗಳಲ್ಲಿ ಅಚಲ ಶ್ರದ್ಧೆಯುಳ್ಳ, ಅತ್ಯುಚ್ಚ ಧ್ಯೇಯವನ್ನಿಟ್ಟುಕೊಂಡ ದಿವ್ಯ ಭವ್ಯ ಸ್ಫೂರ್ತಿಯಿಂದ ಪ್ರೇರಿತವಾದ ಆತ್ಮಜ್ಯೋತಿಯನ್ನು ಯಾವದೇ ಪಾರ್ಥಿವ ಶಕ್ತಿಯು ಹತ್ತಿಕ್ಕುವದು ಸಾಧ್ಯವಿಲ್ಲ, ತ್ರಿಕಾಲದಲ್ಲಿಯೂ ಸಾಧ್ಯವಿಲ್ಲ.

೧೮-೧-೪೯ **ವಲ್ಲಭಭಾಯಿ ಪಟೇಲ**

ಪ್ರಸ್ತಾವನೆ

ನಮ್ಮನ್ನಗಲಿ ಹೋದ ಹುತಾತ್ಮರ ಕೆಲವೊಂದು ಶಬ್ದಚಿತ್ರಗಳನ್ನು ಇಲ್ಲಿ ನಾನು ಕೊಡಬೇಕೆಂದಿರುವೆ. ಈಗ ತಾನೆ ಆ 'ನೀತಿಮೇರುವು' ನಮ್ಮ ಈ ಪಾರ್ಥಿವ ಜಗತ್ತಿನಲ್ಲಿ ನಮ್ಮೆಲ್ಲರೊಡನೆ ವಾಸವಾಗಿ ಒಡನಾಡುತಿತ್ತು. ಕೋಟ್ಯಂತರ ಜನರನ್ನು ಸತ್ಯ ನ್ಯಾಯ ನೀತಿಪಥದಿಂದ ನಡೆಯಲು ಪ್ರೇರೇಪಿಸಿ ಗಾಂಧಿ ಮಹಾತ್ಮರು ಆ ಎಲ್ಲರಿಗೂ ಅವರವರ ಅಂತಃಕರಣದಲ್ಲಿಯ ವಿವೇಕಮೂರ್ತಿಯಂತೆ ಕಂಗೊಳಿಸಿದರು.

ಅವರ ಶಕ್ತಿ ಶಬ್ದಗಳಲ್ಲಿರಲಿಲ್ಲ, ಕ್ರಿಯೆಯಲ್ಲಿತ್ತು. ಕ್ರಿಯೆಯಲ್ಲಿ ಶುದ್ಧಿ ಹಾಗೂ ಉತ್ಕಟತೆ ತುಂಬಿದ್ದರಿಂದ ಅವರ ಶಬ್ದ ಮತ್ತಷ್ಟು ಪ್ರಭಾವಶಾಲಿಯಾಗಿತ್ತು. ಅವರು ದೇವತೆಗಳ ಮಟ್ಟವನ್ನು ಮುಟ್ಟಿದ್ದರೂ ತಮ್ಮ ಮಾನವತೆಯನ್ನು ಎಳ್ಳಷ್ಟೂ ಮರೆತಿರಲಿಲ್ಲ. ತಾವು ಯಾರೆಂಬುದರರಿವು ಅವರಿಗೆ ಪೂರಾ ಇದ್ದರೂ ಅವರ ನಮ್ರತೆ ಅವರ್ಣನೀಯವಾಗಿತ್ತು. ಹಿಂದೀ ಜನರನ್ನು ಈ ವರೆಗೆ ಅವರಷ್ಟು ಯಾರೂ ಪ್ರಭಾವಾನ್ವಿತರನ್ನಾಗಿ ಮಾಡಿರಲಿಲ್ಲ. ಅವರು ತಮಗಿಂತ ಬಹಳ ದೊಡ್ಡವರೆಂದು ಅವರನ್ನು ಜನರು ಮಹಾತ್ಮರೆಂದು ಪೂಜಿಸುತಿದ್ದರು. ಆದರೆ ಅದೇ ಕಾಲಕ್ಕೆ ಅವರು ಎಲ್ಲರಿಗೂ ಅತ್ಯಂತ ಸಮೀಪದವರಿರುವದರಿಂದ ಬಾಪೂ ಎಂದು ಅವರನ್ನು ಪ್ರೀತಿಸುತಿದ್ದರು.

ತಮ್ಮ ಪೂರ್ವ ವಯಸ್ಸಿನಿಂದಲೆ ಅವರು ತಮ್ಮ ಜೀವನದ ಧ್ಯೇಯವನ್ನು ಅರಿತುಕೊಂಡಿದ್ದರು. ಅಹಿಂಸಾತತ್ವದಲ್ಲಿ ಅವರೊಂದು ಹೊಸ ಅರ್ಥವನ್ನು ಕಂಡುಹಿಡಿದು ನಾನಾರೂಪದಿಂದ ಮಾನವನ ಮನಸನ್ನು ಕೆಡಿಸುವ ಕಲಿಯೊಡನೆ ಹೋರಾಡಲು ಅವರು ಸತ್ಯಾಗ್ರಹ ಶಸ್ತ್ರವನ್ನು ಸಜ್ಜುಗೊಳಿಸಿದರು. ಅಹಿಂಸೆಯ ಮೂಲಕ ಸತ್ಯದ ಸತತ ಶೋಧ, ಪ್ರೇಮ, ಸೇವೆ, ತ್ಯಾಗ, ಇವುಗಳ ಮೂಲಕ ಕಲಿಯೊಡನೆ ನಿತ್ಯ ಯುದ್ಧ, ಇವೇ ಅವರ

ಸತ್ಯಾಗ್ರಹದ ಸಾರಗರ್ಭವು. ವೈಯಕ್ತಿಕ ಸುಖದಿಂದ, ಮುಕ್ತಿಯಿಂದ ಅವರಿಗೆ ಸಮಾಧಾನವಿರಲಿಲ್ಲ. ಸಮಾಜದ ಸಮಸ್ಯೆಗಳನ್ನು ಬಿಡಿಸಿ ಎಲ್ಲರಿಗೂ ಸುಖಸಮಾಧಾನ ಹಾಗೂ ಮುಕ್ತಿ ದೊರೆಯುವಂತೆ ಮಾಡುವುದರಲ್ಲಿ ಅವರು ನಿಮಗ್ನರಿದ್ದರು. ಸಾಮಾಜಿಕ, ಆರ್ಥಿಕ, ರಾಜನೈತಿಕ ಮುಂತಾದ ಎಲ್ಲ ಕ್ಷೇತ್ರಗಳಿಗೂ ಸತ್ಯಾಗ್ರಹತತ್ವವನ್ನನ್ವಯಿಸುವುದೆ ಅವರ ಪ್ರಯತ್ನವಾಗಿತ್ತು. ಅಹಿಂಸಾಶಕ್ತಿಯನ್ನು ಸಂಘಟಿಸುವುದರಲ್ಲಿ ಅವರು ಅತ್ಯಂತ ಶ್ರದ್ಧೆಯುಳ್ಳವರಾಗಿದ್ದರು. ಅಹಿಂಸೆ ಮತ್ತು ಪ್ರೇಮ ಇವುಗಳ ಶಕ್ತಿ ಹಾಗೂ ಮಹತ್ವ ಇವುಗಳಲ್ಲಿದ್ದ ಅವರ ಅಪಾರ ಶ್ರದ್ಧೆಯು ಒಂದು ಕ್ಷಣಹೊತ್ತು ಸಹ ಕಡಿಮೆಯಾಗಲಿಲ್ಲ ಅಥವಾ ಕದಲಲಿಲ್ಲ. ಅವರು ಯಾವಾಗಲೂ ಅಂತರ್ವಾಣಿಗೆ ಕಿವಿಗೊಟ್ಟು ನಡೆದರು, ವಿವೇಕ ಜ್ಯೋತಿಯ ಬೆಳಕಿನಿಂದ ಮುಂದೆ ಸಾಗಿದರು. ಸತ್ಯ ಅಥವಾ ದೇವರಲ್ಲಿದ್ದ ಅವರ ಶ್ರದ್ಧೆಯ ಮೂಲಕ ಅವರು ಯಾವಾಗಲೂ ಧೃತಿಗುಂದದೆ ಹೆಜ್ಜೆಯನ್ನಿಡುತಿದ್ದರು.

ಗಾಂಧೀಜಿಯವರು ಸ್ವಂತದ ಬಗ್ಗೆ ಎಷ್ಟೋ ಬರೆದಿರುವರು. ಆಧುನಿಕ ಹಿಂದುಸ್ತಾನದ ನಿರ್ಮಾತರವರು ಎಂದು ಹೇಳುವದು ತಪ್ಪಾಗಲಾರದು. ಅವರೊಡನೆ ನನ್ನ ನಿಕಟಸಂಬಂಧವು ಬಂದುದು ನನ್ನ ಸುದೈವ. ನಾನು ಬದುಕಿರುವಾಗಲೆ ಹಾಗೂ ನನ್ನ ಸ್ಮರಣಶಕ್ತಿ ಮಾಸದಿರುವಾಗಲೆ ಆ ಮಹಾಮಹಿಮನನ್ನು ಕುರಿತು ಹಲವು ಸಂಸ್ಮರಣೀಯ ಪ್ರಸಂಗಗಳನ್ನು ಬರೆಯುವದು ಯೋಗ್ಯವೆಂದು ಬಗೆದೆನು. ಹೀಗೆ ಮಾಡುವುದರಿಂದ ನನ್ನ ಜೀವನದಲ್ಲಿಯ ಆ ಮಹತ್ವದ ಕ್ಷಣಗಳನ್ನು ನಾನು ಪುನಃ ನೆನೆಸುವೆನು. ಆ ತೇಜ ಮತ್ತು ಪ್ರೇಮಗಳ ಮಾನವಮೂರ್ತಿಯಾದ ಮಹಾತ್ಮರ ಸಹವಾಸದ ಆನಂದವನ್ನು ಪುನಃ ಉಪಭೋಗಿಸುವೆನು.

ನವದಿಲ್ಲಿ
೩೦-೧-೪೯

ರಂಗನಾಥ ದಿವಾಕರ

ಗಾಂಧೀಜಿ—ನಾನು ಕಂಡಂತೆ

೧. ಅಯ್ಯೋ ಆ ದುರಂತ !

ಛೇ, ಹೀಗಾಗುವುದುಂಟೆ? ಆ ಸಂಗತಿ ಮೊದಲು ನನಗೆ ಅಶಕ್ಯಪ್ರಾಯ ವೆನಿಸಿತು. ಒಂದು ಕ್ಷಣ ನನ್ನ ಕಿವಿಕಣ್ಣುಗಳ ಮೇಲೆ ಸಹ ನನ್ನ ವಿಶ್ವಾಸ ಕೂಡಲಿಲ್ಲ. ಆದರೇನು, ಪ್ರತ್ಯಕ್ಷ ಗಾಂಧೀಜಿಯವರ ಮೃತದೇಹವನ್ನು ನೋಡಿ ಬೆಚ್ಚಿಬಿದ್ದೆನು. ಮುಖದ ಮೇಲೆ ಇನ್ನೂ ಸ್ಮಿತಹಾಸ್ಯದ ಛಾಯೆ ಯಿತ್ತು. ಹಣೆ ಮಿನುಗುತಿತ್ತು. ತುಟಿ ಬಿಚ್ಚಿ ಅವರು ಪುನಃ ಒಮ್ಮೆ ಮಾತಾಡಬಹುದೇನೋ ಎಂಬ ಆಶೆ ಒಂದರ್ಧಕ್ಷಣ ತಲೆದೋರಿತು. ಆದರೆ ಅದೆಲ್ಲ ವ್ಯರ್ಥ, ಆಭಾಸಮಾತ್ರ. ಯಮರಾಜನು ತನ್ನ ವರ್ಚಸ್ಸನ್ನು ಅಲ್ಲಿ ಪೂರ್ಣ ಸ್ಥಾಪಿಸಿಬಿಟ್ಟಿದ್ದನು. ದೇಹದೊಳಗಿನ ಜ್ಯೋತಿ ಹೊರಟುಹೋಗಿತ್ತು. ದೇಗುಲದಲ್ಲಿಯ ನಂದಾದೀಪ ಆರಿತ್ತು. ಜೀವನದ ಆಶೆ ಆದಿನ್ನೆಲ್ಲಿಯದು?

ನಾನು ಆ ದಿನ ದಿಲ್ಲಿಯಲ್ಲೆ ಇದ್ದೆನು. ಸಂಜೆ ಅಯ್ದೂವರೆಯಾಗಿರ ಬಹುದು. ನೆರೆಯಲ್ಲಿರುವ ನನ್ನ ಸ್ನೇಹಿತರೊಬ್ಬರು ನನ್ನತ್ತ ಧಾವಿಸಿ ಬಂದರು. ಅವರ ಮುಖ ಬಾಡಿ ಬತ್ತಿತ್ತು. ಧ್ವನಿ ಇಳಿದು ಹೋಗಿತ್ತು. ಗಾಬರಿಗೊಂಡು ಅವರು, 'ಗಾಂಧೀಜಿಯವರಿಗೆ ಗುಂಡಿಕ್ಕಿದ್ದಾರಂತೆ,' ಎಂದು ನಿಟ್ಟುಸಿರು ಬಿಟ್ಟರು. ಕೂಡಲೆ ನಾನು ಬಿರ್ಲಾಭವನಕ್ಕೆ ಫೋನು ಮಾಡಿದೆ. ಅದು ಹತ್ತಲಿಲ್ಲ. ಬಳಿಕ ಕಾಂಗ್ರೆಸ್ ಕಚೇರಿಯನ್ನು ಕೇಳಿದೆ. ಅವರಿಗೆ ಯಾವ ವರ್ತಮಾನವೂ ಇರಲಿಲ್ಲ. ಅಸೋಸಿಯೇಟೆಡ್ ಪ್ರೆಸ್ಸಿನವ ರನ್ನು ವಿಚಾರಿಸಿದೆ. ಸುದ್ದಿ ನಿಜ, ಎಂದರವರು. ಗಾಂಧೀಜಿ ಈಗ ಹೇಗಿರುವರು ಎಂದು ಪುನಃ ಪ್ರಶ್ನಿಸಿದೆ. 'ಸರಿಯಾಗಿಲ್ಲ, ಹೆಚ್ಚಿನ ಸುದ್ದಿಗಾಗಿ ಆತುರದಿಂದ ಕಾದಿರುವೆ,' ಎಂದು ಫೋನನ್ನು ಕೆಳಗಿಟ್ಟುಬಿಟ್ಟರು.

ನಾನು ಹೌಹಾರಿ ಕೂಡಲೆ ಹಲವು ಮಿತ್ರರೊಡನೆ ಬಿರ್ಲಾಭವನಕ್ಕೆ ತೆರಳಿದೆನು. ಅಷ್ಟರಲ್ಲಿ ಆ ಭವನದ ಸುತ್ತಲೂ ಒಂದು ಸಾಗರದಂತೆ ಜನ ಸಮೂಹವು ನೆರೆದಿತ್ತು. ಮುನ್ನುಗ್ಗುತ್ತ ಹೇಗಾದರೂ ಮಾಡಿ ನಾನು ನೇರ ವಾಗಿ ಗಾಂಧೀಜಿಯವರ ಮೃತದೇಹವಿದ್ದಲ್ಲಿಗೆ ಸಾಗಿದೆ. ಅದಿಬದಿಗೆ ಜನ ಸಮ್ಮರ್ದವು ಕಿಕ್ಕಿರಿದಿದ್ದರೂ ನಾನು ಹಾಗೆಯೆ ನಡೆದೆ. ಒಂದೇ ಒಂದು ಘನ ದುಃಖದ ಕರಿಛಾಯೆ ಅಲ್ಲಿ ಮುಸುಕಿತ್ತು. ಗಾಂಧೀಜಿಯವರ ಕೋಣೆಯನ್ನು ನಾನು ಪ್ರವೇಶಿಸಿದೆ. ಶುಭ್ರ ಖಾದಿಯಿಂದ ಆಚ್ಛಾದಿತವಾದ ಆ ನಿರ್ಮಲಾತ್ಮನ ದೇಹ ಅಲ್ಲಿ ನಿಸ್ತಬ್ಧವಾಗಿ ಪವಡಿಸಿತ್ತು. ಸುತ್ತಲೂ ಶಿಷ್ಯ-ಶಿಷ್ಯೆಯರು ದುಃಖಭರಿತ ಗಾಂಭೀರ್ಯದಿಂದ ಗೀತಾಪಾಠವನ್ನು ಹೇಳುತಿದ್ದರು. ನಾನು ಗಕ್ಕನೆ ಅಲ್ಲಿಯೆ ಕುಳಿತುಬಿಟ್ಟೆ.

ಅವರು ಹೇಳುತ್ತಿದ್ದುದು ೧೧ನೆ ಅಧ್ಯಾಯ. ವಿರಾಟಪುರುಷನ ವರ್ಣನೆ. ಅದು ನನಗೆ ಒಳ್ಳೆ ಸಮಯೋಚಿತವೆನಿಸಿತು. ಪಂಚಭೂತಾತ್ಮಕವಾದ ಒಂದು ಕಿರಿ ದೇಹದಲ್ಲಿ ಈ ವರೆಗೆ ಹುದುಗಿಕೊಂಡಿದ್ದ ಒಂದು ಜೀವಾತ್ಮವು ಈ ದಿನ ಸರ್ವವ್ಯಾಪಿ ಪರಮಾತ್ಮನಲ್ಲಿ ಪೂರ್ಣ ಲೀನವಾಗಿಬಿಟ್ಟಿತು. ವಿರಾಟ ಪುರುಷನೆಂದರೆ ಆ ಅವ್ಯಕ್ತ ಪರಮಾತ್ಮನ ಪುಣ್ಯರೂಪ. ಕಣ್ಣಿಗೆ ಕಾಣುವ, ಕಿವಿಗೆ ಕೇಳುವ, ಮೈಗೆ ಮುಟ್ಟುವ, ಬುದ್ಧಿಗೆ ತೋಚುವ ವ್ಯಕ್ತಸ್ವರೂಪ. ನಾನು ಅಲ್ಲಿ ಹೋದ ಕ್ಷಣಕ್ಕೆ ನಡೆದ ಪಾಠವೆಂದರೆ,

> ಪಶ್ಯಾಮಿ ದೇವಾಂಸ್ತವ ದೇವ ದೇಹೇ
> ಸರ್ವಾಂಸ್ತಥಾ ಭೂತವಿಶೇಷಸಂಘಾನ್
> ಬ್ರಹ್ಮಾಣಮೀಶಂ ಕಮಲಾಸನಸ್ಥಂ
> ಋಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥

ಇತ್ಯಾದಿ.

ನಾನು ಅಲ್ಲಿ ಎಷ್ಟು ವೇಳೆ ಕುಳಿತೆನೆಂಬುದನ್ನು ಹೇಳಲಾರೆ. ಕೆಲ ಹೊತ್ತಿನ ನಂತರ, ಇದೆಲ್ಲ ಹೇಗೆ ನಡೆಯಿತು, ಎಂಬ ಬಗ್ಗೆ ಮನಸಿನಲ್ಲಿ ಬಲ ವಾದ ಕುತೂಹಲ ಉಂಟಾಯಿತು. ಅಲ್ಲಿಂದ ಎದ್ದು ಬಿರ್ಲಾಭವನದಲ್ಲಿ ನೆರೆದ ಅನೇಕಾನೇಕ ಮಿತ್ರರನ್ನೂ ಪರಿಚಿತರನ್ನೂ ಒಂದೊಂದೆ ಮಾತನ್ನು ಕೇಳ ಲಾರಂಭಿಸಿದೆ. ಹೆಚ್ಚು ಹೇಳುವ ಕೇಳುವ ಸಮಯವದಲ್ಲ. ಎಲ್ಲರೂ

ಮೂಕಭಾವದಿಂದ ಇದ್ದುಕೊಂಡು ತುಟಿ-ನಾಲಿಗೆಗಳಿಗಿಂತ ಕಣ್ಣುಗಳಿಂದಲೆ ಪರಸ್ಪರ ಮಾತನಾಡುತಿದ್ದರು, ಹೃದಯದ ಹಲುಬನ್ನು ಹೇಳಿಕೊಳ್ಳು ತಿದ್ದರು, ಜೀವನಿಗೆ ಆದ ನೋವನ್ನು ಸುರುತಿದ್ದರು. ಇಡೀ ಜನತೆಗೆ, ಜಗಕ್ಕೆ ಆದ ದುಃಖವನ್ನೆ ಒಂದು ಖೇದಾಂಕಿತ ಮುಗ್ಧವ್ಯಾಖ್ಯಾನದಿಂದ ಅವರೆಲ್ಲರೂ ತೋಡಿಕೊಳ್ಳುತಿದ್ದರು, ಎಂದು ಹೇಳಬಹುದು.

ಆಗಬಾರದ್ದು ಆಯಿತಲ್ಲ, ಎಂಬ ಸಖೇದಾಶ್ಚರ್ಯದೊಡನೆ ಇದನ್ನು ತಪ್ಪಿಸ ಬಹುದಾಗಿತ್ತೊ ಎಂಬ ವಿಚಾರವು ತಲೆದೋರಿತು. ಬ್ರಹ್ಮಲಿಖಿತವನ್ನು ಯಾರೂ ತಪ್ಪಿಸಲಾರರು, ಎಂಬ ಮಾತು ಕ್ಷಣಹೊತ್ತು ಮರೆಯಿತು. ಮತ್ತೆ ಮಾನವ ಪ್ರಯತ್ನವು ಇಷ್ಟೊಂದು ದುರ್ಬಲವೆ, ಎಂದೆನಿಸಿತು.

ಹತ್ತೇ ದಿನಗಳ ಪೂರ್ವದಲ್ಲಿ ಅಲ್ಲಿಯೆ ಒಂದು ಬಾಂಬಿನ ಸ್ಫೋಟವಾಗಿ ನಮ್ಮೆಲ್ಲರಿಗೂ ಒಂದು ಸೂಚನೆಯಾಗಿರಲಿಲ್ಲವೆ? ಅಂದಿನಿಂದ ಗಾಂಧೀಜಿ ಯವರ ಜೀವವನ್ನು ಹೆಚ್ಚು ಭದ್ರವಾಗಿ ಸಂರಕ್ಷಿಸಲು ನಾವು ಪ್ರಯತ್ನಪಡ ಬಹುದಾಗಿತ್ತಲ್ಲವೆ? ಆ ಕಲಿದೂತನು ತನ್ನ ಘಾತಕ ಶಸ್ತ್ರವನ್ನು ಎತ್ತಿದಾಗ ಅವನ ಹತ್ತಿರದವರು ಅದನ್ನು ನೋಡಬಹುದಾಗಿತ್ತಲ್ಲವೆ? ಗಾಂಧೀಪರಿವಾರ ದವರು ಆ ಕ್ಷಣ ಬಂದು ಢಾಲಿನಂತೆ ಅವರೆದುರು ನಿಲ್ಲಬಹುದಾಗಿತ್ತಲ್ಲವೆ?

ಆದರೇನು, ವಿಷಕಾಲ ಸಂದುಹೋದ ಬಳಿಕ ಇದೆಲ್ಲ ಮಾನವನ ಮನಸು ಕಟ್ಟುವ ಕಲ್ಪನೆ. ಪರಮಾತ್ಮನಲ್ಲದೆ ತಮಗೆ ಇನ್ನಾವ ಸಂರಕ್ಷಣೆಯೂ ಬೇಡ. ಅವನ ಹರಿಬ ನನ್ನಿಂದ ನಡೆವವರೆಗೆ ನಾನು ಸಾಯಲಾರೆ, ಆ ಹರಿಬ ಮುಗಿದ ಬಳಿಕ ನಾನು ಬದುಕಲಾರೆ, ಎಂದು ಅನೇಕ ಸಾರೆ ಗಾಂಧೀಜಿಯವರು ನುಡಿ ದಿದ್ದರು. ಆ ವೃತ್ತಿಯಿಂದಲೆ ಅವರು ನಡೆದುಕೊಳ್ಳುತಿದ್ದರು. ಆದುದರಿಂದ ಯಾವ ಕೃತ್ರಿಮ ಸಂರಕ್ಷಣೆಯನ್ನೂ ಅವರು ಸಹಿಸುತಿರಲಿಲ್ಲ, ಅದಕ್ಕೆ ಒಪ್ಪು ತಿರಲಿಲ್ಲ. ಆಗ ಕೂಡ ಒಪ್ಪಲಿಲ್ಲ.

ಅದೇ ದಿನ ಸಂಜೆ ಸರದಾರರು ಗಾಂಧೀಜಿಯವರೊಡನೆ ಒಂದು ಗಂಟೆ ಕಾಲ ಮಹತ್ವದ ಮಾತುಗಳನ್ನಾಡಿ ಬಿರ್ಲಾಭವನದಿಂದ ತೆರಳಿದ್ದರು. ಅಯ್ದು ಹೊಡೆದು ಅಯ್ದು ನಿಮಿಷಗಳಾಗಿರಬಹುದು. ಸರದಾರರು ಮನೆಯತ್ತ ಸಾಗಿದರು, ಗಾಂಧೀಜಿಯವರು ಪ್ರಾರ್ಥನೆಯ ಬೈಲಿಗೆ ಹೊರಟರು. ಎಂದಿನಂತೆ ತಮ್ಮ ಮೊಮ್ಮಕ್ಕಳಾದ ಆವಾ ಹಾಗೂ ಮನು ಇವರಿಬ್ಬರ ಹೆಗಲ ಮೇಲೆ

ಕೈಯಿಟ್ಟು ಗಾಂಧೀಜಿಯವರು ದ್ರುತಗತಿಯಿಂದ ನಡೆದರು. ಸುಮಾರು ಅಯ್ನೂರು ಜನರು ಅಲ್ಲಿ ಕುಳಿತಿರಬಹುದು. ಗಾಂಧೀಜಿಯವರು ತಮ್ಮ ಆಸನ ದತ್ತ ಸಾಗಿದೊಡನೆ ಜನರು ಹೋಳಾಗಿ ಅವರಿಗೆ ದಾರೀ ಬಿಟ್ಟರು.

ಅವರು ನಾಲ್ಕು ಹೆಜ್ಜೆ ಹೋಗಿರಬಹುದು. ಅಷ್ಟರಲ್ಲಿ ಆ ಕಲಿದೂತನು ರಿವಾಲ್ವರನ್ನು ತೆಗೆದು ಆ ಅಜಾತಶತ್ರುವಿನ ಹಣ್ಣು ದೇಹದಲ್ಲಿ ಮೂರು ಗುಂಡುಗಳನ್ನು ಇಕ್ಕಿದನು. ಆ ಕೊಲೆಗಡಕನತ್ತ ಅತ್ಯಂತ ಕಾರುಣ್ಯದಿಂದ ಒಮ್ಮೆ ನೋಡಿ, ಹೇ ರಾಮ, ಎಂದು ಗಾಂಧೀಜಿಯವರು ಅಲ್ಲಿಯೆ ಕುಸಿದು ಬಿದ್ದರು. ಎಪ್ಪತ್ತೆಂಟು ವರುಷದ ಆ ಸುರಕ್ಷಿತ, ಶಿಸ್ತಿಗೆ ಒಳಗಾದ, ಆತ್ಮನ ಕರೆಗೆ ಕೂಡಲೆ ಓಗೊಡುವ ಪಾರ್ಥಿವ ದೇಹ ಒಂದು ಮಾಂಸದ ಮುದ್ದೆಯಂತೆ ನೆಲಕ್ಕೆ ಬಿದ್ದುಬಿಟ್ಟಿತು.

ದೇಹವನ್ನು ಅವರ ಕೋಣೆಗೆ ಒಯ್ಯಲಾಯಿತು: ಆದರೇನು, ಒಂದರ್ಧ ಗಂಟೆಯಲ್ಲಿ ಜೀವವು ಪೂರಾ ಹೋಗಿಬಿಟ್ಟಿತು.

ಪ್ರಾರ್ಥನಾಭೂಮಿಯಲ್ಲಿ ಸ್ವಾಭಾವಿಕವಾಗಿಯೆ ಗೊಂದಲವೆದ್ದಿತು. ಕೊಲೆಗಡಕನು ಕೂಡಲೆ ಹಿಡಿಯಲ್ಪಟ್ಟನು ಹಾಗೂ ಜನರು ಅತ್ತಿತ್ತ ಚದರಿ ಹೋದರು. ಆದರೆ ಮುಂದೆ ಸ್ವಲ್ಪ ಕಾಲದಲ್ಲಿಯೆ ಇಡೀ ದಿಲ್ಲಿಯ ದಶದಿಕ್ಕು ಗಳಿಂದ ಬಿರ್ಲಾಭವನಕ್ಕೆ ಜನಸಂದೋಹವು ಧುಮುಕಿತು. ಅದು ಒಳನುಗ್ಗ ಲಾರಂಭಿಸಿತು. ತಡೆಯುವದೆ ಕಠಿನವಾಯಿತು. ಪಂಡಿತ ಜವಾಹರಲಾಲರು ನಾಲ್ಕು ಮಾತು ಹೇಳಿ ಸ್ವಲ್ಪ ತಡೆದರು. ಕೊನೆಗೆ ಅಟ್ಟದ ಮೇಲೆ ಇಟ್ಟ ಗಾಂಧೀಜಿಯವರ ಮೃತದೇಹದರ್ಶನದ ನಂತರವೆ ಜನರು ಸಮಾಧಾನಪಟ್ಟು ತೆರಳಲಾರಂಭಿಸಿದರು. ಲಕ್ಷಾಂತರ ಜನರ ಆ ದಿನದ ಮೂಕವುನ್ನಣೆಯೆ ಎಲ್ಲಕ್ಕೂ ಹೆಚ್ಚು ಮಾತಾಡುವಂತಿದ್ದಿತು. ?

ಸರದಾರರು ಅಲ್ಲಿದ್ದರು. ಬಂದವರಲ್ಲಿ ಅವರೇ ಪ್ರಥಮರು. ಎಲ್ಲ ಮಂತ್ರಿ ಮಂಡಳದೊಡನೆ ಪಂಡಿತ ಜವಾಹರಲಾಲರು ಕೂಡಲೆ ಬಂದರು. ಮೌಂಟ ಬೇಟನ್ ದಂಪತಿಗಳು ಹಾಜರ ಇದ್ದರು. ಆ ಗದ್ದಲದೊಳಗಿಂದ ನುಸುಳಿ ಯಾರಾರು ಒಳಗೆ ಸೇರುವುದು ಸಾಧ್ಯವೊ ಅವರೆಲ್ಲರೂ ಒಳಗೆ ಬಂದಿದ್ದರು. ಗಾಂಧೀಜಿಯವರ ಕಿರಿಮಗನಾದ ದೇವದಾಸನು ದುಃಖಮೂರ್ತಿಯಂತೆ ಕಂಗೊಳಿಸುತಿದ್ದನು. ಆಪ್ತಕಾರ್ಯದರ್ಶಿಗಳಾದ ಪ್ಯಾರೆಲಾಲರು ಅಲ್ಲಿದ್ದರು.

ಮೆಲ್ಲನೆ ಅಂತ್ಯವಿಧಿಯ ಕಾಲ, ಸ್ಥಲ, ಕಾರ್ಯಕ್ರಮ ಮುಂತಾದವುಗಳನ್ನು ಕುರಿತು ಮಾತು ನಡೆದವು. ಅವೆಲ್ಲ ನಿಶ್ಚಯವಾದ ಬಳಿಕ ಜನಸಂಮರ್ದವು ಕಡಿಮೆಯಾದ ನಂತರ ರಾತ್ರಿ ಹನ್ನೊಂದರ ಸುಮಾರಕ್ಕೆ ನಾನು ಮನೆಯತ್ತ ಸಾಗಿದೆನು.

ಆ ಕತ್ತಲೆಯೊಳಗೆ ನಾನು ಮುಂದರಿದೆನು. ನಡುನಡುವೆ ಬೀದಿಯ ದೀಪಗಳು ಗಿಡಗಳ ಬದಿಯಿಂದ ಬೆಳಕಿನ ಸೆಳಕುಗಳನ್ನು ಬೀರುತ್ತ ಮಾರ್ಗ ವನ್ನು ಸ್ಪಷ್ಟಗೊಳಿಸುತಿದ್ದವು. ಆಗ ನನ್ನಷ್ಟಕ್ಕೆ ನಾನೆ, ಇದೇನು, ದೇವರ ಲೆಕ್ಕ ವಿಲಕ್ಷಣವಿದ್ದಂತೆ ತೋರುತ್ತದಲ್ಲ? ಒಳಿತು ಕೆಡಕುಗಳ ಪಂದ್ಯಾಟದಲ್ಲಿ ಒಮ್ಮೊಮ್ಮೆ ಕೆಡಕೇ ಮೇಲಾಗುವಂತೆ ಭಾಸವಾಗುವುದಲ್ಲ! ತನ್ನಲ್ಲಿಯ ಉತ್ತಮರನ್ನು ಬಲಿ ಕೊಡದೆ ಮಾನವಕುಲವು ಮುಂದಡಿಯಿಡಲಾರದೆ? ಧರ್ಮಜೀವನದ ಪರಿಣತಿಯು ಹುತಾತ್ಮನಾಗುವುದರಲ್ಲಿಯೆ ಇದೆಯೆ? ಸತ್ಯ ನಿಷ್ಠರ ಬಲಿದಾನದಿಂದಲೆ ಸತ್ಯ ಜೀವಿಸಬಲ್ಲದೆ? ಇನ್ನಾವ ಮಾರ್ಗವಿಲ್ಲವೆ? ಶರೀರದಿಂದ ಅಗಲಿದಾಗಲೆ ಆತ್ಮಸ್ವಾತಂತ್ರ್ಯದ ಅನುಭವವೆ? ತತ್ಪೂರ್ವದಲ್ಲಿ ಅದು ಆಗಲಾರದೆ?

ಅಥವಾ ವೃಕ್ಷ ಹುಟ್ಟಿ ಬಾಳಬೇಕಾದರೆ ಬೀಜ ಬೀತು ಹೋಗಲೇಬೇಕು. ಮಗು ಹುಟ್ಟಬೇಕಾದರೆ ತಾಯಿ ಪ್ರಾಣಸಂಕಟಕ್ಕೀಡಾಗಲೇಬೇಕು. ಇದು ವಿಧಿನಿಯಮ. ಪೀಡಾಮರಣಕ್ಕೆ ಗುರಿಯಾದರೂ ಸಾಧುಸಂತರು ನಗು ನಗುತ ಜೀವತೊರೆವುದರ ರಹಸ್ಯವು ಇದರಲ್ಲಿಯೇ ಇದೆ. ಹುತಾತ್ಮನು ಗಲ್ಲಿ-ಗೇರುವಾಗ ಕೂಡ ಆನಂದಪಡುವುದರ ಗುಟ್ಟು ಇದರಲ್ಲಿಯೇ ಇದೆ. ಧರ್ಮ ವೃಕ್ಷವು ಹುತಾತ್ಮರ ನೆತ್ತರದಿಂದಲೆ ಬೆಳೆವುದೆಂದು ಹೇಳಿದುದು ಸತ್ಯವು.

ಈ ಲೆಕ್ಕ ನಿಜವಾಗಿ ವಿಲಕ್ಷಣವಾದುದು; ಆದರೆ ಇದು ಇದ್ದುದು ಹೀಗೆಯೆ.

ಇನ್ನು ಈ ದಿವ್ಯ ಹುತಾತ್ಮನು ಮರಣವನ್ನು ಅದಾವ ದೃಷ್ಟಿಯಿಂದ ನೋಡುತಿದ್ದನು, ಅದಾವ ವೃತ್ತಿಯಿಂದ ತನ್ನ ಮೇಲೆ ಕೈಯೆತ್ತಿದವರನ್ನು ಕಾಣುತಿದ್ದನು; ಇದನ್ನು ಸ್ವಲ್ಪ ನೋಡುವ.

ಗಾಂಧೀಜಿಯವರು ಎಷ್ಟೋ ಸಾರೆ ಮರಣದೊಡನೆ ಆಟವಾಡುತಿದ್ದರು. ತಮ್ಮ ಜೀವವನ್ನು ಅದೆಷ್ಟೋ ಸಾರೆ ಅವರು ಪಣಕ್ಕೆ ಹಚ್ಚಿದರು. ಅವರ

ಪ್ರಸಿದ್ಧ ಹದಿನಾಲ್ಕು ಉಪವಾಸಗಳಲ್ಲಿ ಮೂರಕ್ಕಿಂತ ಹೆಚ್ಚು ಮೂರು ವಾರದ-ವಿದ್ದುವು, ಮೂರು ಆಮರಣ ಉಪವಾಸಗಳಿದ್ದುವು. ಜೀವನ ಮರಣಗಳ ಹೊಸ್ತಿಲಲ್ಲಿ ಅವರು ಸಮವಾದ ಆನಂದದಿಂದ ವಾಸಮಾಡುತಿದ್ದರು, ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವರು ಏಕಕಾಲಕ್ಕೆ ಇಹಪರಗಳ ನಾಗರಿಕರು.

ತಾವು ತಮ್ಮವರ ಕೈಯಿಂದ ಸಾಯಬಹುದೆಂಬ ಕಲ್ಪನೆ ಕೂಡ ಅವರಿಗೆ ತೀರ ಪರಿಚಿತವಿತ್ತು. ಅವರನ್ನು ಕೊಲ್ಲುವ ಈ ಕೊನೆಯ ಪ್ರಯತ್ನವೇನೂ ಆ ಬಗೆಯ ಪ್ರಥಮ ಪ್ರಯತ್ನವಲ್ಲ. ದಕ್ಷಿಣ ಆಫ್ರಿಕೆಯಲ್ಲಿ ಒಬ್ಬ ಪಠಾಣ ಅನುಯಾಯಿಯು ತಪ್ಪು ತಿಳಿವಳಿಕೆಯ ಮೂಲಕ ಒಮ್ಮೆ ಅವರನ್ನು ಸಾಯು ವಂತೆ ಹೊಡೆದಿದ್ದನು. ಏನೋ ಸುದೈವದಿಂದ ಉಳಕೊಂಡರು. ಆದರೆ ಅವನ ವಿರುದ್ಧ ಖಟ್ಲೇ ಮಾಡಲು, ಅದೇಕೆ ಸಾಕ್ಷಿ ಹೇಳಲು ಸಹ ಅವರು ನಿರಾಕರಿಸಿದರು! ಅವರು ಹಿಂದೂ ಧರ್ಮವನ್ನು ಕೆಡಿಸುತಿರುವರು ಎಂಬ ಭ್ರಾಮಕ ಕಲ್ಪನೆಯಿಂದ, ಅವರ ಹರಿಜನ ಸಂಚಾರದ ಕಾಲಕ್ಕೆ ೧೯೩೩-೩೪ ರಲ್ಲಿ ಪುಣೆಯಲ್ಲಿ ಅವರ ಮೇಲೆ ಒಂದು ಬಾಂಬು ಎಸೆಯಲಾಗಿತ್ತು. ಇದೇ ಹೋದ ೧೯೪೮ ರ ಜಾನೆವಾರಿ ೨೦ನೆಯ ದಿನ ಪ್ರಾರ್ಥನೆಯ ಕಾಲಕ್ಕೆ ಒಂದು ಬಾಂಬಿನ ಸ್ಫೋಟವಾಯಿತು. ಅವರು ಹಾಗೆಯೆ ತಮ್ಮ ಪ್ರಾರ್ಥನೆಯನ್ನು ಸಾಗಿಸಿದರು.

ಮರುದಿನ ಪ್ರಾರ್ಥನೆಯ ಕಾಲಕ್ಕೆ ಅವರು ಆ ಸಂದರ್ಭವನ್ನೆತ್ತಿ, ' ಆ ಬಾಂಬು ನನಗಾಗಿ ಇತ್ತು, ಎಂಬುದನ್ನು ನಾನು ಪ್ರಾರ್ಥನೆ ಮುಗಿಯುವ ವರೆಗೆ ಅರಿತಿರಲಿಲ್ಲ. ಆದರೆ ನನ್ನ ನಿಜವಾದ ಸತ್ವಪರೀಕ್ಷೆ ಯಾತರಲ್ಲಿದೆ ಎಂದರೆ, ಅಂಥ ಬಾಂಬಿನಿಂದ ನಾನು ಸಾಯಬೇಕು. ಹಾಗೆ ಸಾಯುವಾಗ ಕೂಡ ನಾನು ನಸು ನಗುತಿರಬೇಕು. ಕೊಲೆಗಡಕನ ಬಗ್ಗೆ ದುಷ್ಟ ವಿಚಾರ ವನ್ನು ಸಹ ಮನಸಿನಲ್ಲಿ ತಾರದೆ ಸಾಯಬೇಕು ' ಎಂದರು! ಆ ಬಾಂಬು ಒಗೆದವನು ತಪ್ಪು ದಾರಿ ಹಿಡಿದ ಒಬ್ಬ ಯುವಕನು. ಅವನನ್ನು ಪ್ರಾರ್ಥನೆ ಪ್ರೇಮಗಳಿಂದ ಒಲಿಸಿಕೊಳ್ಳಬೇಕೆ ಹೊರತು ದ್ವೇಷಿಸಬಾರದು, ಎಂದು ಅವರು ಹೇಳಿದರು. ಅವನನ್ನು ಪೀಡಿಸಕೂಡದು ಎಂದು ಅವರು ಸೆರೆಹಿಡಿದ ಪೋಲೀಸ ಅಧಿಕಾರಿಗಳಿಗೆ ಹೇಳಿಕೊಂಡರು!

ಶ್ಯಾಮಲಭಟ್ಟ ಎಂಬ ಗುಜರಾಥಿ ಕವಿಯ ಒಂದು ಪದ್ಯವನ್ನೋದಿ

ಅವರು, ಕೆಡಕಿಗೆ ಪ್ರತಿಯಾಗಿ ಒಳಿತನ್ನು ಮಾಡಬೇಕು, ದ್ವೇಷಕ್ಕೆ ಪ್ರತಿಯಾಗಿ ಪ್ರೇಮವನ್ನು ಮುಯ್ಯಾಗಿ ಕೊಡಬೇಕು, ಎಂದು ಮೊದಲಿನಿಂದ ಹೇಳುತಿದ್ದರು. ಈ ತತ್ವವೆ ಅವರ ಜೀವನದ ಉಸಿರಾಗಿ ಬಿಟ್ಟಿತು.

'ಶತ್ರುವಿಗೆ ಹಾವು ಕಚ್ಚಿದರೆ ಆ ಗಾಯಕ್ಕೆ ನಾಲಿಗೆಯನ್ನಿಕ್ಕಿ ವಿಷವನ್ನು ಹೀರಿ ಸಹ ನನ್ನ ಶತ್ರುವನ್ನು ಬದುಕಿಸುವೆ,' ಎಂದು ಅವರು ಈ ಸಂದರ್ಭದಲ್ಲಿ ಅನ್ನುತಿದ್ದರು.

ಈ ಬಗೆಯ ನಿತಾಂತ ಮಹಾ ಸಾಧುವರ್ಯನು ಆ ಕಾಳ ಕರಾಳ ದುರಂತ ಸಾಯಂಕಾಲದಲ್ಲಿ ಓರ್ವ ಕರುಣಾಶೂನ್ಯ ತಲೆತಿರುಕ ಕಟುಕನ ಗುಂಡಿಗೀಡಾದನು. ಆ ತಲೆತಿರುಕನಾದರೂ ಅವರ ದೇಶದವನೆ, ಅವರ ಧರ್ಮದವನೆ. ಇದೇನು ವಿಲಕ್ಷಣ ದೇವರ ಆಟ !

ಗಾಂಧೀಜಿಯವರನ್ನು ನಾನು ಕೊನೆಯದಾಗಿ ನೋಡಿದ್ದು ೨೮-೧-೪೮ನೆಯ ದಿನ ಮುಂಜಾನೆ ಹತ್ತು ಘಂಟೆಗೆ. ಆ ದಿನ ಕಾಂಗ್ರೆಸ್ಸಿನ ಘಟನಾ ಸಮಿತಿಯ ಸದಸ್ಯರು ಅವರನ್ನು ಕಂಡು ಅವರೊಡನೆ ಹಲವು ವಿಷಯಗಳನ್ನು ಚರ್ಚಿಸಿದರು. ನಾವು ಸುಮಾರು ಒಂದು ಗಂಟೆ ಕಾಲ ಅವರೊಡನೆ ಇದ್ದೆವು. ಆದರೆ ಆ ಬಗ್ಗೆ ಮುಂದೆ ಬರೆಯುವೆ.

ಅವರ ಜೀವನದ ಕೊನೆಯ ಪ್ರಕರಣದ ಬಗ್ಗೆ ಈಗ ಬರೆಯುವುದು ಸಾಕು. ಇನ್ನು ಅವರನ್ನು ನಾನು ಪ್ರಥಮ ಕಂಡದ್ದನ್ನು ಬಣ್ಣಿಸುವೆ.

೨. ರಾಜನಿಷ್ಠ ಗಾಂಧೀಜಿ

ಅದು ಮೇ ತಿಂಗಳು, ೧೯೧೮ ನೇ ಇಸವಿ. ಮುಂಬೈ ಪ್ರಾಂತಿಕ ರಾಜಕೀಯ ಸಮ್ಮೇಲನ ಆ ಸಾರೆ ವಿಜಾಪುರದಲ್ಲಿ ಕೂಡತಕ್ಕದ್ದಿತ್ತು. ಸರದಾರ ಪಟೇಲರ ಅಣ್ಣಂದಿರಾದ ಶ್ರೀ. ವಿಠ್ಠಲಭಾಯಿಯವರು ಅಧ್ಯಕ್ಷರು. ಅದೇ ಕಾಲಕ್ಕೆ ಅಸ್ಪೃಶ್ಯತಾನಿವಾರಣೆಯ ಬಗ್ಗೆಯೂ ಒಂದು ಸಮ್ಮೇಲನ ಅಲ್ಲಿಯೆ ನೆರೆಯುವುದಿತ್ತು. ಸ್ವಾಗತಾಧ್ಯಕ್ಷರಾದ ಶ್ರೀ. ಕೌಜಲಗಿ ಶ್ರೀನಿವಾಸರಾಯರು, ಎರಡೂ ಸಮ್ಮೇಲನಗಳಿಗೂ ಬರಬೇಕೆಂದು, ಗಾಂಧೀಜಿಯವರನ್ನು ಆಮಂತ್ರಿಸಿದ್ದರು. ಮಾತಾಡಲು ಒತ್ತಾಯ ಮಾಡಕೂಡದು ಎಂಬ ಕರಾರಿನ ಮೇಲೆ ಗಾಂಧೀಜಿಯವರು ಬರಲೊಪ್ಪಿದ್ದರು.

ದಕ್ಷಿಣಾಫ್ರಿಕೆಯಲ್ಲಿ ವಸತಿ ಮಾಡಿಕೊಂಡಿದ್ದ ಹಿಂದೀಯರ ಹಕ್ಕು ಬಾಧ್ಯತೆಗಳಿಗಾಗಿ ಸತ್ಯಾಗ್ರಹ ಹೂಡಿ ಅದರಲ್ಲಿ ಯಶಸ್ಸನ್ನು ಸಂಪಾದಿಸಿ ಗಾಂಧೀಜಿಯವರು ೧೯೧೫ ರಲ್ಲಿ ದೇಶಕ್ಕೆ ಮರಳಿದ್ದರು. ಆದರೆ ಹಿಂದುಸ್ತಾನದಲ್ಲಿ ಅವರನ್ನಾಗಲಿ, ಅವರ ಕಾರ್ಯಪದ್ಧತಿಯನ್ನಾಗಲಿ ಅರಿತವರು ಆಗ ವಿರಳ. ಅವರಿನ್ನೂ ಈ ದೇಶದಲ್ಲಿ ಪ್ರಸಿದ್ಧಿಯನ್ನು ಪಡೆದಿರಲಿಲ್ಲ. ಆ ಕಾಲದ ಅತ್ಯಂತ ಕುಶಲ ರಾಜಕಾರಣಿಗಳಾದ ಲೋಕಮಾನ್ಯರು ಮಾತ್ರ ಗಾಂಧೀಜಿಯವರ ಆಳವನ್ನರಿತು, ‘ಇವರು ನಮ್ಮೆಲ್ಲರನ್ನೂ ಮೀರಬಹುದು,’ ಎಂದು ತಮ್ಮ ಗೆಳೆಯರನೇಕರ ಮುಂದೆ ಹೇಳಿದ್ದರು. ಗಾಂಧೀಜಿಯವರು ಹಿಂದುಸ್ತಾನದಲ್ಲಿ ಮೊಟ್ಟಮೊದಲು ಸತ್ಯಾಗ್ರಹ ಶಸ್ತ್ರದ ಪ್ರಯೋಗವನ್ನು ಮಾಡಿದ್ದು ಬಿಹಾರ ಪ್ರಾಂತದ ಚಂಪಾರಣ ಜಿಲ್ಲೆಯಲ್ಲಿ. ನೀಲಿಯ ಆಂಗ್ಲ ತೋಟಗಾರರ ಶೋಷಣೆಯಿಂದ ಹಿಂದೀ ರೈತರನ್ನು ಯಶಸ್ವೀರೀತಿಯಿಂದ ಗಾಂಧೀಜಿಯವರು ಮುಕ್ತಗೊಳಿಸಿದ್ದು ಅಲ್ಲಿಯೆ.

ಅದೇ ವರುಷ ನಾನು ಎಮ್. ಎ. ಪಾಸಾಗಿದ್ದೆ. ಆ ವಿಜಾಪುರ ಸಮ್ಮೇಲನದಲ್ಲಿ ಒಬ್ಬ ಸ್ವಯಂಸೇವಕನಾಗಿದ್ದೆ. ಊರ ಹೊರಗಿರುವ ಒಂದು ಬಂಗ್ಲೆಯಲ್ಲಿ ಅಧ್ಯಕ್ಷರ ಪಾಳ್ಯವಿತ್ತು. ಅಲ್ಲಿ ನನ್ನನ್ನು ಯೋಜಿಸಿದ್ದರು.

ಆಗ ಗಾಂಧೀಜಿಯವರು ಕಾಠೇವಾಡದ ಬಣಜಿಗರಂತೆ ದೊಡ್ಡ ಪಾವುಡ ವನ್ನು ಸುತ್ತುತಿದ್ದರು. ಎಂದಿನಂತೆ ಮೂರನೆ ವರ್ಗದ ಡಬ್ಬಿಯಲ್ಲಿ ಅವರ ಪ್ರವಾಸ. ಯಾವಾಗಲೂ ಅವರು ಹಾಗೆಯೆ. ಅವರೊಡನೆ ಆಗ ಒಬ್ಬನೇ ಸ್ವಯಂಸೇವಕನಿದ್ದನು. ಈಚೆಗೆ ಅವರ ಗುರುಗಳೆನಿಸಿರುವ ಶ್ರೀ. ಗೋಖಲೆ ಯವರು ತೀರಿಹೋದುದರಿಂದ ಗಾಂಧೀಜಿಯವರು ಬರಿಗಾಲಿನಿಂದಲೆ ನಡೆಯುತಿದ್ದರು. ತಮ್ಮೊಡನೆ ಹುರಿದ ನೆಲಗಡಲೆ, ಬೆಲ್ಲ, ಉತ್ತತ್ತಿ, ಇವು ಗಳನ್ನು ಅವರು ಹೋದಲ್ಲಿ ಒಯ್ಯುತಿದ್ದರು. ಅವಶ್ಯವಿದ್ದಾಗ ಆ ಆಹಾರ ವನ್ನು ಸೇವಿಸುತಿದ್ದರು. ತಮ್ಮ ಬಟ್ಟೆಗಳನ್ನು ಅವರು ತಾವೇ ತೊಳೆಯು ತಿದ್ದರು. ವೇಳೆಯ ಅಭಾವವಿದ್ದಾಗ ಮಾತ್ರ ಸ್ವಯಂಸೇವಕನಿಗೆ ಅವರ ಬಟ್ಟೆ ತೊಳೆಯುವ ಮಾನವು ದೊರೆಯುತಿತ್ತು. ಸ್ನಾನ, ಫಲಾಹಾರ, ನಿಯುಕ್ತ ಕೆಲಸ ಇವುಗಳನ್ನು ಅವರು ಕಾಲಕ್ಕೆ ಸರಿಯಾಗಿ ಮಾಡಿಬಿಡು ತಿದ್ದರು. ಆ ಬಗ್ಗೆ ಅವರಿಗಾರೂ ಸೂಚನೆ ಕೊಡಬೇಕಾಗುತಿರಲಿಲ್ಲ. ಗಡಿಯಾ-ರವು ಆಗ ಕೂಡ ಅವರ ಮೇಲೆ ಅಧಿಕಾರ ನಡೆಸುವ ನಿರಂಕುಶ ಏಕಮೇವ ಸತ್ತಾಧಾರಿ. ಅದರ ಆಜ್ಞೆ ಅವರಿಗೆ ಶಿರಸಾವಂದ್ಯ. ಯಾರ ಕರೆ ಇಲ್ಲವೆ ವಾಹನ ಬರಲಿ ಬಿಡಲಿ, ಅವುಗಳನ್ನಪೇಕ್ಷಿಸದೆ ಅವರು ಕಾಲಕ್ಕೆ ಸರಿಯಾಗಿ ನಿಯುಕ್ತ ಸ್ಥಳಕ್ಕೆ ಕಾಲುನಡಿಗೆಯಿಂದ ಹೊರಟುಹೋಗುತಿದ್ದರು.

ಸಮ್ಮೇಲನದ ಪ್ರಥಮ ದಿನವೇ ಸ್ವಾಗತಾಧ್ಯಕ್ಷರೇನೊ ಸ್ವಯಂಸೇವಕರ ಅಪಮಾನ ಮಾಡಿದರೆಂಬ ಭಾವನೆಯಿಂದ ಅವರ ಮುಖ್ಯಸ್ಥನು ಸಂಪು ಹೂಡಬೇಕೆಂದು ಆಜ್ಞಾಪಿಸಿದನು. ಸೇವಕನಾದ ನನಗೊಂದು ಅದು ಸಮಸ್ಯೆಯೆ ಆಯಿತು. ಆ ಮೇಲಧಿಕಾರಿಯ ಹುಕುಮನ್ನು ಕೇಳಬೇಕೋ ಅಥವಾ ನನ್ನ ಆತಿಥ್ಯಕ್ಕೆ ಒಳಗಾದ ಶ್ರೇಷ್ಠ ಅತಿಥಿಗಳತ್ತ ಲಕ್ಷಗೊಡಬೇಕೊ? ಸಂಪಿನಲ್ಲಿ ಸೇರಬೇಕೆಂದು ನಾನು ನಿಶ್ಚಯಿಸಿದೆನು. ಆದರೆ ಅತಿಥಿ ಗಳಿಗೆ ವಿಶೇಷ ಅನನುಕೂಲವಾಗದಂತೆ ಅವರ ಊಟ ಉಡಿಗೆ ಆದಬಳಿಕ ಹಾಗು ಒಂದು ತಾಸಿನ ನೋಟೀಸು ಕೊಟ್ಟ ಬಳಿಕ ಸೇರಬೇಕೆಂದೆನು.

ನಾನು ಈ ಬಗ್ಗೆ ಗಾಂಧೀಜಿಯವರತ್ತ ಕ್ಷಮಾಪಣೆ ಬೇಡಲು ಹೋದೆನು. ವಿಶ್ವಾಸಪಾತ್ರರಲ್ಲದ ನಿಮ್ಮಂತಹ ಸ್ವಯಂಸೇವಕರು ನನಗೇಕೆ ಬೇಕು, ಎಂದು ಅವರು ನಗುತ್ತಲೆ ಹೇಳಿದರು. ನಾನೇ ನನ್ನ ಸ್ವಂತ ಸ್ವಯಂ-

ಸೇವಕನು, ಎಂದರವರು! ಖಂಡಿತವಾಗಿ ಅವರು ಹಾಗೆಯೆ ಇದ್ದರು. ಇತರರಂತೆ ಅವರು ಕಿಂಚಿತ್ತೂ ಪರಾವಲಂಬಿಗಳಾಗಿರಲಿಲ್ಲ.

ಸೈನ್ಯಭರತಿಯ ವಿಷಯದಲ್ಲಿ ಬ್ರಿಟಿಶ್ ಸರಕಾರಕ್ಕೆ ಹಿಂದೀ ಮುಖಂಡರು ಸಹಾಯುಮಾಡಬೇಕೊ ಬಾರದೊ ಎಂಬ ಪ್ರಶ್ನೆ ಆ ರಾಜಕೀಯ ಸಮ್ಮೇಲನದೆದುರಿಗೆ ಇತ್ತು. ಯುದ್ಧ ಮುಗಿದೊಡನೆ ಸ್ವರಾಜ್ಯವನ್ನು ಕೊಡಮಾಡಿದರೆ ಮಾತ್ರ ಸರಕಾರಕ್ಕೆ ಸಹಾಯುಮಾಡಬೇಕೆಂದು ಲೋಕಮಾನ್ಯ ತಿಲಕರು, ಶ್ರೀ. ಪಟೇಲರು ಹಾಗೂ ಇತರ ಉಗ್ರಪಕ್ಷದ ಮುಖಂಡರು ವಾದಿಸುತಿದ್ದರು. ಗಾಂಧೀಜಿಯುವರೊಬ್ಬರೆ ಈ ಮಾತಿಗೆ ವಿರೋಧಿಗಳು. ಯಾವ ಕರಾರೂ ಇಲ್ಲದೆ ಯುದ್ಧದಲ್ಲಿ ಸಹಾಯುವನ್ನೀಯುಬೇಕೆಂಬುದೆ ಅವರ ಅಭಿಪ್ರಾಯು. ಗಾಂಧೀಜಿಯುವರ ರಾಜನಿಷ್ಠೆ ಇನ್ನೂ ಅಷ್ಟು ದೃಢವಾಗಿತ್ತು. ಅದು ಸಡಿಲಾದುದು ಜಾಲಿಯಾನವಾಲಾ ದುರಂತದ ನಂತರ. ವ್ಹಾಯಿಸರಾಯುರು ಕರೆದ ಒಂದು ಯುದ್ಧ ಸಮ್ಮೇಲನಕ್ಕೂ ಅವರು ಹೋಗಿದ್ದರು ಹಾಗೂ ಸೈನ್ಯಭರತಿಯ ಕೆಲಸದಲ್ಲಿ ಸಹಕಾರವನ್ನು ಬೆಂಬಲಿಸಿದ್ದರು.

ಅಧ್ಯಕ್ಷರ ಪಾಳ್ಯದಲ್ಲಿ ಈ ಸಂದರ್ಭದಲ್ಲಿ ದೊಡ್ಡ ಚರ್ಚೆ ನಡೆಯಿತು. ಗಾಂಧೀಜಿಯುವರು ಬಾಯಿಗಿಂತ ಕಿವಿಯನ್ನೆ ಹೆಚ್ಚು ತೆರೆದಿಟ್ಟಿದ್ದರು. ಅವರನ್ನು ಒಲಿಸಿಕೊಳ್ಳಲು ಹಲವಾರು ಮುಖಂಡರು ಯತ್ನಿಸಿದರು, ಆದರೆ ಅವರು ಎಳ್ಳಷ್ಟು ಸಹ ಕದಲಲಿಲ್ಲ.

ಬ್ರಿಟಿಶರು ಯುದ್ಧದಲ್ಲಿ ಗೆದ್ದರೆ ಮತ್ತಷ್ಟು ಜುಲುಮೆಖೋರರಾಗುವರೆಂದು ಕೆಲವು ಸ್ನೇಹಿತರು ಕೊನೆಗೆ ಗಾಂಧೀಜಿಯುವರಿಗೆ ಹೇಳಿದರು. ಬ್ರಿಟಿಶರಿಗೆ ಸಹಾಯು ಮಾಡಬೇಕೆಂಬ ಭಾರ ದಾಸ್ಯದಿಂದ ಜರ್ಜರಿತರಾದ ಹಿಂದೀಯುರ ಮೇಲೆ ಅದೇನು ಕಾರಣ? ಈಗ ನಾವು ಭರತಿ ಮಾಡಿದ ಸೈನಿಕರನ್ನೆ ನಾಳೆ ಬ್ರಿಟಿಶರು ನಮ್ಮ ಮೇಲೆ ಬೀಳಲು ಉಪಯೋಗಿಸಬಹುದು, ಎಂಬುದೆ ಅವರ ಪ್ರತಿಪಾದನೆ. ಗಾಂಧೀಜಿಯುವರು ಎಲ್ಲವನ್ನೂ ಬಹಳ ಶಾಂತರೀತಿ ಕೇಳಿಕೊಂಡರು. 'ನಾವು ಸಾಮ್ರಾಜ್ಯದ ಸಂರಕ್ಷಣೆ ಪಡೆಯುತಲಿದ್ದೇವೆ. ಆದುದರಿಂದ ನಾವು ಅದಕ್ಕೆ ಸಹಾಯು ಮಾಡಲೇಬೇಕು. ಸಾಮ್ರಾಜ್ಯದ ರಕ್ಷಣೆ ಹಾಗೂ ನಾವು ಪಡೆಯುಬೇಕಾದ ಸ್ವರಾಜ್ಯ ಇವೆರಡೂ ಪ್ರತ್ಯೇಕ ವಿಷಯುಗಳು. ನಮ್ಮ ನ್ಯಾಯ್ಯವಾದ ಹಕ್ಕುಪಡೆಯುುವ ಉದ್ದೇಶದಿಂದ

ಕೂಡ ನಾವು ನಮ್ಮ ವಿರೋಧಿಗಳ ಅಡಚಣಿಗಳ ದುರ್ಲಾಭ ಪಡೆಯ ಕೂಡದು' ಇಷ್ಟು ಹೇಳಿ, ಕೊನೆಗೆ ಒಳ್ಳೆ ಗಟ್ಟಿಯಾದ ಧ್ವನಿಯಿಂದ ಗಾಂಧೀಜಿ ಅಂದದ್ದು, 'ನಾವು ಭರತಿ ಮಾಡಬಹುದಾದ ಸೈನಿಕರನ್ನು ನಮ್ಮ ಮೇಲೆ ಬೀಳಲು ಉಪಯೋಗಿಸುವರೆಂಬ ಭಯ ನಿಮಗಿದೆ. ಆದರೆ ನಾನು ನಿಮಗೆ ಖಂಡಿತವಾಗಿ ಹೇಳುವದೇನಂದರೆ, ಯುದ್ಧದ ತರುವಾಯ ಬ್ರಿಟಿಶರು ಯೋಗ್ಯವಾಗಿ ನಡಕೊಳ್ಳದಿದ್ದರೆ ಈ ಸೈನಿಕರಲ್ಲಿ ಪ್ರತಿಯೊಬ್ಬನನ್ನು ನಾನು ಬಂಡಾಯ ಹೂಡಲು ಮನವೊಲಿಸಬಲ್ಲೆ.' ಇಷ್ಟಕ್ಕೆ ಮಾತು ಮುಗಿಯಿತು. ಗಾಂಧೀಜಿಯವರ ಮನಸನ್ನು ತಿರುಗಿಸುವದು ಅಸಾಧ್ಯ, ಎಂಬುದು ಎಲ್ಲರಿಗೂ ಗೊತ್ತಾಯಿತು.

ಅಸ್ಪೃಶ್ಯತಾನಿವಾರಣೆಯ ಸಮ್ಮೇಲನದಲ್ಲಿ ಅಧ್ಯಕ್ಷರ ಭಾಷಣದ ನಂತರ ಗಾಂಧೀಜಿಯವರಿಗೆ ಮಾತಾಡಲು ಆಮಂತ್ರಿಸಲಾಯಿತು. ಕಿಕ್ಕಿರಿದು ನೆರೆದ ಆ ಜನಸಮೂಹವನ್ನು ನೋಡುತ್ತ ಅವರು ವ್ಯಾಸಪೀಠವನ್ನು ಸಾವಕಾಶ ವಾಗಿ ಏರಿದರು. ಸುತ್ತಲೂ ದೃಷ್ಟಿಯನ್ನಿಟ್ಟು, 'ಇಲ್ಲಿ ಯಾರಾದರೂ ಅಸ್ಪೃಶ್ಯರು ಉಂಟೇ ?' ಎಂದು ಪ್ರಶ್ನಿಸಿದರು. ಇದು ಒಳ್ಳೇ ಸೂಚಕ ಪ್ರಶ್ನೆ ಯಾಗಿತ್ತು. ಒಬ್ಬರೂ ಕೈಯೆತ್ತಲಿಲ್ಲ. ಅಸ್ಪೃಶ್ಯರಿಲ್ಲದ ಈ ಸಭೆಯಲ್ಲಿ ನಾನು ಮಾತಾಡಲಾರೆ, ಎಂದು ಕೂಡಲೆ ಸಾರಿಬಿಟ್ಟರು !

ಈ ಮಾತಿನಿಂದ ಸಮ್ಮೇಲನದ ಸಂಚಾಲಕಮಂಡಲಿಗೂ ನೆರೆದ ಜನ ರಿಗೂ ಒಳ್ಳೆ ಪೆಟ್ಟು ಬಿತ್ತು. ಆದರೆ ನಿಜವಾದ ಪ್ರಚಾರ ಅವರ ಮಾತಿಗಿಂತ ಈ ಮೌನದಿಂದಲೆ ಹೆಚ್ಚು ಆಯಿತು.

೩. ಬಂಡಾಯಗಾರ ಗಾಂಧಿ

ಗಾಂಧೀಜಿಯವರು ತಮ್ಮ ಹೊಸ ಶಸ್ತ್ರವಾದ ಸತ್ಯಾಗ್ರಹವನ್ನು ಹಿಂದುಸ್ತಾನದಲ್ಲಿ ಮೊದಲನೆ ಸಾರೆ ೧೯೧೯ರ ಎಪ್ರಿಲದಲ್ಲಿ ರಾಷ್ಟ್ರವ್ಯಾಪಕವಾಗಿ ಉಪಯೋಗಿಸಿದರು. ರೌಲೆಟ್ ಆ್ಯಕ್ಟಿನ ಪ್ರತಿಭಟನೆಗಾಗಿ ಅದನ್ನು ಹೂಡಿದರು. ಮುದ್ರಣ ಕಾಯಿದೆಯಂಥ ದಬ್ಬಾಳಿಕೆಯ ಕಾಯಿದೆಗಳನ್ನು ಉಲ್ಲಂಘಿಸಬೇಕೆಂದು ಅವರು ಜನರಿಗೆ ಕರೆಕೊಟ್ಟರು. ಹಿಂದುಸ್ತಾನದ ತುಂಬ ಲಕ್ಷಾಂತರ ಜನರು ಆರನೆ ಎಪ್ರಿಲ್ ದಿನ ಹರತಾಳವನ್ನಾಚರಿಸಿ ಸಭೆ ಸೇರಿದರು. ಶಾಂತರೀತಿಯಿಂದ ತಮ್ಮ ಮತಪ್ರದರ್ಶನ ಮಾಡಿದರು. ಇಡೀ ಒಂದು ವಾರವು ಪ್ರತಿಭಟನೆಗಾಗಿ ಮೀಸಲಿಡಲಾಗಿತ್ತು. ಲೋಕಮಾನ್ಯರು ಆಗ ಇಂಗ್ಲಂಡಿನಲ್ಲಿದ್ದರು. ಮಾನಭಂಗಕ್ಕಾಗಿ ವ್ಹೆಲಂಟಾಯಿನ್ ಚಿರೋಲರ ವಿರುದ್ಧ ಅವರು ಅಲ್ಲಿ ದಾವೆ ಹೂಡಿದ್ದರು. ಆದರೆ ಅಲ್ಲಿಂದ, ಗಾಂಧೀಜಿಯವರಿಗೆ ಬೆಂಬಲ ಕೊಡಿರೆಂದು, ಅವರು ತಮ್ಮ ಸ್ನೇಹಿತರಿಗೆ ಬರೆದಿದ್ದರು.

ಶಾಸನಬದ್ಧ ಚಳವಳಿಯ ಹಳೇ ಯುಗವು ಮುಗಿದು ದುಷ್ಟ ಕಟ್ಟಳೆಗಳ ನಿರ್ಭಯ, ಶಾಂತ ಹಾಗೂ ಜಾಹೀರ ಭಂಗ ಮಾಡುವ ಕಾಲವು ಬಂದು ಬಿಟ್ಟಿತ್ತು. ಹೀಗೆ ಕಾಯಿದೇಭಂಗ ಮಾಡುವಾಗ ಬರುವ ಅನುವು ಆಪತ್ತುಗಳನೆಲ್ಲ ಆನಂದದಿಂದ ಸ್ವಾಗತಿಸಲು ಜನರು ಸಿದ್ಧರಾಗತೊಡಗಿದ್ದರು.

ಈ ಬಗೆಯ ಕಾಯಿದೇಭಂಗದ ಪರಿಣಾಮವಾಗಿ ಅಮೃತಸರದಲ್ಲಿ ಜಾಲಿಯನವಾಲಾ ದುರಂತ ಸಂಭವಿಸಿತು. ಅಲ್ಲಿ ಸಾವಿರಾರು ನಿಃಶಸ್ತ್ರ ನಾಗರಿಕರು ಶಾಂತವಾಗಿ ಸಭೆ ಸೇರಿರಲು ಬ್ರಿಟಿಶ್ ಸೈನಿಕರು ಅವರ ಮೇಲೆ ಬಿದ್ದು ತಮ್ಮಲ್ಲಿರುವ ಮದ್ದು ಗುಂಡು ತೀರುವ ವರೆಗೆ ತುಬಾಕಿಗಳನ್ನು ಹಾರಿಸಿ ಅತೀವ ಅಮಾನುಷ ಕ್ರೂರತನದಿಂದ ನೂರಾರು ನಿರಪರಾಧಿಗಳನ್ನು ಕೊಲೆಗೀಡು ಮಾಡಿದರು !

ಗಾಂಧೀಜಿಯವರು ತಲ್ಲಣಗೊಂಡು ಶಾಂತಿಮಯ ಬಂಡಾಯಕ್ಕೆ ಪ್ರವೃತ್ತರಾದರು. ಇಂಥ ದುರಂತವನ್ನು ನಡೆಸಿ ಪಶ್ಚಾತ್ತಾಪದ ಸುದ್ದಿ ಸಹ ಇಲ್ಲದೆ

ಸ್ವೇಚ್ಛೆಯಿಂದ ಮೆರೆದಾಡುವ ಸಾಮ್ರಾಜ್ಯವು ಒಂದರೆಕ್ಷಣ ಕೂಡ ಬಾಳಲು ಯೋಗ್ಯವಲ್ಲ, ಎಂದವರ ಅಭಿಪ್ರಾಯವಾಯಿತು. ತನ್ನ ಪ್ರಜೆಗಳ ನಿಷ್ಠೆಯನ್ನು ಪಡೆಯಲು ಅದಕ್ಕೆ ನೈತಿಕ ಬಾಧ್ಯತೆಯೆ ಇಲ್ಲ, ಎಂದು ಅವರು ಸಾರಿದರು. ಅಂದ ಬಳಿಕ ಪ್ರಜೆಗಳು ಅದಕ್ಕೆ ರಾಜನಿಷ್ಠರಾಗಿ ಉಳಿಯುವ ಬಗೆ ಯಾವುದು? ಅದೇಕೆ ಉಳಿಯಬೇಕು?

೧೯೨೦ ರ ಆಗಸ್ಟ ತಿಂಗಳ ಮೊದಲನೆ ತಾರೀಖಿಗೆ ಗಾಂಧೀಜಿಯವರು ಸರಕಾರದೊಡನೆ ಅಸಹಕಾರಮಾಡುವ ಕೊನೆಯ ನಿರ್ಣಯವನ್ನು ಮಾಡಿ ಬಿಟ್ಟರು. ಹಿಂದುಸ್ತಾನದ ಎಲ್ಲಕ್ಕೂ ಪ್ರಬಲವಾದ ಶಾಸನಬದ್ಧ ಚಳವಳಿಗಾರರೂ ಹಿಂದೀಯರ 'ಅಸಂತೋಷದ ಜನಕರೂ' ಆದ ಲೋಕಮಾನ್ಯರು ದಿವಂಗತರಾದುದೂ ಅದೇ ದಿನವೆ.

ತಿಲಕರು ಮುಂಬೈ ಸರದಾರಗೃಹದಲ್ಲಿ ತೀರಿಕೊಂಡರು. ಅವರ ಸ್ಮಶಾನ ಯಾತ್ರೆಗೆಂದು ಸಾವಿರಾರು ಜನರು ಕೆಳಗೆ ಬೀದಿಗಳಲ್ಲಿ ಗುಂಪಾಗಿ ನೆರೆದಿದ್ದರು. ಅವರು ಬ್ರಾಹ್ಮಣರಿದ್ದುದರಿಂದ ಅವರ ಅನೇಕ ಮಿತ್ರರು, ಬ್ರಾಹ್ಮಣರೇ ಅವರ ಶವವನ್ನು ಹೊರಬೇಕೆಂದಿದ್ದರು. ಗಾಂಧೀಜಿಯವರು ಹುಟ್ಟಾ ಬಣಜಿಗರು. ಅವರು ಶವವನ್ನೆತ್ತಲು ಮುಂದೆ ಬಂದು ಮಣಿದರು. ಯಾರೋ ಒಬ್ಬರು ಅವರನ್ನು ತಡೆಯಲನುವಾದರು. ಒಂದು ಕ್ಷಣ ಗಾಂಧೀಜಿ ನಿಡಿದಾಗಿ ಬೆಪ್ಪನೆ ನಿಂತರು. ಆದರೆ ಒಂದೇ ಕ್ಷಣ. ಮರುಕ್ಷಣವೆ ಎಲ್ಲ ಪರಿಸ್ಥಿತಿಯನ್ನು ಆಕಲನ ಮಾಡಿ ಅವರು ನಿಡುಗಣ್ಣಿನಿಂದ ಸುತ್ತಲೂ ನೋಡಿ, ಸಾರ್ವಜನಿಕ ಜೀವಿಗಳಾದ ತಿಲಕರಂಥವರಿಗೆ ಜಾತಿನಿರ್ಬಂಧವೆಲ್ಲಿಯದು? ಎಂದರು. ಆಯಿತು. ಅವರು ಹೆಗಲು ಕೊಟ್ಟರು. ಯಾರೂ ಅವರನ್ನು ತಡೆಯಲಾರದೆ ಹೋದರು. ಮುಂದೆ ಮುಸಲ್ಮಾನ ಬಾಂಧವರು ಕೂಡ ಹೊತ್ತರು. ಯಾತ್ರೆಯು ಚೌಪಾಟಿಯತ್ತ ಸಾಗಿತು. ಮಳೆ ಸುರಿಯುತಿತ್ತು. ಆದರೂ ಇಡೀ ಮುಂಬಾಪುರಿಯು ಅಲ್ಲಿ ನುಗ್ಗಿತು ಎಂದು ಹೇಳಬಹುದು. ಈಗ ಆ ಸ್ಥಳದಲ್ಲಿ ಲೋಕಮಾನ್ಯರ ಒಂದು ದೊಡ್ಡ ಕಂಚಿನ ಪುತ್ಥಳಿ ನಿಂತಿದೆ. ಅದೇ ಆ ದಿನದ ಹಾಗೂ ಪ್ರಸಂಗದ ಚಿರ ಕುರುಹು.

ಬ್ರಿಟಿಶರ ರಾಜ್ಯಯಂತ್ರವನ್ನು ಮುಕ್ಕಾಲುವಾಸಿ ಹಿಂದೀಯರೆ ನಡೆಸುತಿದ್ದರೆಂಬುದನ್ನು ಗಾಂಧೀಜಿಯವರು ನೋಡಿಕೊಂಡಿದ್ದರು. ಸಪ್ಪಳಿಲ್ಲದೆ

ಅವರೆಲ್ಲರೂ ಅಸಹಕಾರ ಮಾಡಿದರೆ ಆ ಯಂತ್ರವು ತಕ್ಷಣ ನಿಲ್ಲುವುದೆಂಬು ದನ್ನು ಅವರು ಅರಿತಿದ್ದರು. ಅದನ್ನು ಸಾಧಿಸುವುದಕ್ಕಾಗಿ ಅವರು ಹಾದಿ ಯನ್ನು ಹುಡುಕತೊಡಗಿದರು. ೧೯೨೦ ರ ಸಪ್ಟೆಂಬರ ತಿಂಗಳಲ್ಲಿ ಕಾಂಗ್ರೆಸ್ಸಿನ ವಿಶೇಷಾಧಿವೇಶನವೊಂದು ಕೂಡಿತು. ಅದು ಗಾಂಧೀಜಿಯವರ ಅಹಿಂಸಾ ಮಯ ಅಸಹಕಾರದ ಕಾರ್ಯಕ್ರಮವನ್ನು ಕೈಗೊಂಡಿತು.

ಗಾಂಧೀಜಿಯವರು ಕೇವಲ ಹೋರಾಡಿಗರಲ್ಲ. ಅವರ ವಿಧಾಯಕ ಶಕ್ತಿಯೂ ಅಷ್ಟೇ ತೇಜಸ್ವಿಯಾದುದು. ಶಾಲೆ, ಕಾಲೇಜು, ಕೋರ್ಟುಕಚೇರಿ, ಪರದೇಶೀ ಬಟ್ಟೆ ಮುಂತಾದವುಗಳನ್ನು ಬಹಿಷ್ಕರಿಸುವ ನಿಷೇಧಕ ಅಸಹಕಾರದ ಕಾರ್ಯಕ್ರಮವಲ್ಲದೆ ಅವರು ಜನರೆದುರು ಒಂದು ದೊಡ್ಡ ವಿಧಾಯಕ ಕಾರ್ಯಕ್ರಮವನ್ನು ಇಟ್ಟರು. ರಾಷ್ಟ್ರೀಯ ಶಾಲೆಗಳ ಸ್ಥಾಪನೆ, ಒಂದು ಕೋಟಿ ರಾಟಗಳ ಪ್ರಸಾರ, ಒಂದು ಕೋಟಿ ರೂಪಾಯಿ ತಿಲಕ-ಸ್ವರಾಜ್ಯ ನಿಧಿಸಂಗ್ರಹ, ಒಂದು ಕೋಟಿ ಕಾಂಗ್ರೆಸ್ ಸಭಾಸದರನ್ನು ಮಾಡಿ ಆ ಸಂಸ್ಥೆಯನ್ನು ಬಲಪಡಿಸುವುದು, ಇತ್ಯಾದಿ ಚಟುವಟಿಕೆಗಳನ್ನು ಅವರು ಕೈಕೊಂಡರು. ಇಡೀ ಹಿಂದುಸ್ತಾನದಲ್ಲಿ ವಿದ್ಯುದ್ವೇಗದಿಂದ ಸಂಚರಿಸುವ ಕೆಲಸವನ್ನು ಮುಂದರಿಸಿದರು. ಈ ಕಾರ್ಯಕ್ರಮವನ್ನು ಪೂರೈಸಿದರೆ ಒಂದೇ ವರುಷದಲ್ಲಿ ಸ್ವರಾಜ್ಯವು ನಿಮ್ಮ ಕೈಸೇರುವುದೆಂದು ಅವರು ಹಿಂದೀಯರಿಗೆ ಆಶ್ವಾಸನವಿತ್ತರು.

೧೯೨೦ ರ ಅಕ್ಟೋಬರ ತಿಂಗಳಲ್ಲಿ ಅವರು ಧಾರವಾಡಕ್ಕೆ ಬಂದರು. ಬರಿಗಾಲು, ಉಟ್ಟದ್ದೊಂದು ಧೋತರ, ಮೈಯಲ್ಲಿ ಒಂದು ಪೈರಣ, ಇಷ್ಟೇ ಉಡುಪು. ತಲೆಯ ಮೇಲಿನ ದೊಡ್ಡ ಮುಂಡಾಸ ಹೋಗಿ ಅದರ ಸ್ಥಳದಲ್ಲಿ ಈಗೊಂದು ಬಿಳೀ ಟೊಪ್ಪಿಗೆ ಬಂದಿತ್ತು. ಅದೇ ಗಾಂಧೀ ಟೊಪ್ಪಿಗೆ ಎಂದು ಪ್ರಸಿದ್ಧಿವೆತ್ತು ಈಗ ಪಂಡಿತ ಜವಾಹರಲಾಲರನ್ನು ಮೊದಲುಮಾಡಿ ಎಲ್ಲರ ತಲೆಯ ಮೇಲೂ ವಿರಾಜಿಸುತಿದೆ. ಆ ದಿನ ಊರಲ್ಲಿ ಒಂದು ಜಾಹೀರ ಸಭೆ ನಡೆಯಿತು. ಆಗ ಹಲವೊಂದು ತಲೆತಿರುಕರು ಒಂದೆರಡು ಕಲ್ಲೆಸೆದರು. ಪಾಪ, ಒಬ್ಬನ ತಲೆಗೆ ಪೆಟ್ಟು ಬಿದ್ದು ರಕ್ತ ಚಿಮ್ಮಿತು. ಆದರೆ ಗಾಂಧೀಜಿ ಯವರು ಶಾಂತರೀತಿ ತಮ್ಮ ಭಾಷಣವನ್ನು ಹಾಗೆಯೆ ನಡೆಸಿದರು. ಶ್ರೋತೃ ಸಮಾಜವು ಕೂಡ ವಿಶೇಷ ಕದಲದೆ ಅವರ ಮಾತುಗಳನ್ನು ಲಕ್ಷಗೊಟ್ಟು

ಕೇಳುತ್ತಲೆ ಇತ್ತು. ಅವರ ವಕ್ತೃತ್ವವು ಭಾವನೋದ್ದೀಪಿತವೂ ಇರಲಿಲ್ಲ; ಅಲಂಕಾರಿಕ ಭಾಷೆಯಿಂದಲೂ ಕೂಡಿರಲಿಲ್ಲ. ವಿಶೇಷ ರಭಸವಿಲ್ಲದೆ ಅವರು. ತಮ್ಮ ಶಾಂತಿಸಂದೇಶವನ್ನು ಒಂದೇ ಅಳತೆಯಿಂದ ಬೀರುತ್ತ ಇದ್ದರು. ಅವರ ಮಾತಿನ ಪರಿಣಾಮವು ಜನರ ಮೇಲೆ ಆಗಲು ಅನೇಕ ಕಾರಣಗಳಿದ್ದವು. ಅವರು ಅಂತಃಕರಣದ ಭಾಷೆಯನ್ನು ಮಾತಾಡುತಿದ್ದರು. ಅವರ ದೇಶಭಕ್ತಿ ಅತ್ಯುತ್ಕಟವಾಗಿತ್ತು. ಜನರ ಮೇಲಿನ ಅವರ ಪ್ರೇಮ ಅತಿ ಆಳವಾದುದು. ಅವರ ಅಂತಃಕರಣ ತೀರ ನಿರ್ಮಲ. ಅವರ ವಿನಯವಿನಮ್ರತೆಗಳು ಅತುಲ ವಾದವುಗಳು. ಕಠೋರ ಸತ್ಯದ ನಿರ್ಭಯ ಉಪಾಸಕರವರು. ಅವರ ಶೀಲಕ್ಕೆ ಸಾಟಿಯಿಲ್ಲ. ಇವೆಲ್ಲಕ್ಕೂ ಕಳಸವಿಟ್ಟಂತೆ ಅವರ ಜೀವನವು ಆಚಾರಪ್ರಧಾನವು. ನಡೆಗೆ ನುಡಿಗಿಂತ ಮೇಲುಸ್ಥಾನ ಅವರ ಜೀವನಕ್ರಮದಲ್ಲಿ. ಯಥಾರ್ಥ ಕರ್ಮಯೋಗಿಗಳವರು.

ಸಭೆ ಮುಗಿದೊಡನೆ ಒಂದು ಗಂಟೆ ಕಾಲ ಅವರು ಬ್ರಾಹ್ಮಣೇತರ ಮುಖಂಡರೊಡನೆ ಖಾಸಗಿ ಮಾತುಕಥೆ ನಡೆಸಿದರು. ಏನು ನಡೆಯಿತು ಇದು ಗೊತ್ತಿಲ್ಲ. ಆದರೆ, ಬ್ರಾಹ್ಮಣರು ಏನೇ ಮಾಡಿದ್ದರೂ ರಾಷ್ಟ್ರೀಯ ಚಳವಳಿಯಿಂದ ಬ್ರಾಹ್ಮಣೇತರರು ಸಿಡಿದು ನಿಲ್ಲುವದು ಸಮರ್ಥನೀಯವಲ್ಲ, ಎಂದು ಅವರ ಸ್ಪಷ್ಟವಾದ ಅಭಿಪ್ರಾಯವಿತ್ತು.

ಮಾರನೆ ದಿನ ಅವರು ಹುಬ್ಬಳ್ಳಿಗೆ ಬಂದರು. ಅಲ್ಲಿ ನನಗೂ ಅವರಿಗೂ ಹೆಚ್ಚು ಸಂಬಂಧ ಬಂದಿತು. ನಾವು ಕೆಲವರು ಹುಬ್ಬಳ್ಳಿಯಲ್ಲಿ ಒಂದು ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸಬೇಕೆಂದಿದ್ದೆವು. ಆ ಶಾಲೆಯಲ್ಲಿ ನಾನು ಕೆಲಸ ಮಾಡಬೇಕೆಂದು ನನ್ನ ಮಿತ್ರರ ಆಗ್ರಹ. ಒಂದು ಅನೌಪಚಾರಿಕ ಸಭೆ ನಡೆಯಿತು. ಆಗ ನನ್ನನ್ನು ಕರೆದು, ಕೂಡಲೆ ಏಕೆ ನಿರ್ಧರಿಸುವದಿಲ್ಲ, ಎಂದು ಗಾಂಧೀಜಿ ನನ್ನನ್ನು ಕೇಳಿದರು. ಆತ್ಮ ಗಟ್ಟಿಯಿದ್ದರೂ ಮನಸ್ಸು ಇನ್ನೂ ಗಟ್ಟಿಯಾಗಲೊಲ್ಲದು, ಎಂದು ಉತ್ತರ ಕೊಟ್ಟೆನು. ಇನ್ನೇನು ಹೇಳಲಿ ? ಆದರೆ ಅವರ ಬಿನ್ನಹವು ಆಜ್ಞಾರೂಪವೆ ಇತ್ತೆನ್ನಬಹುದು. ನಾನು ಆಗ ವಚನಕೊಡದಿದ್ದರೂ ಮುಂದೆ ಹಲವೇ ದಿನಗಳಲ್ಲಿ ಧಾರವಾಡದಲ್ಲಿ ರಾಷ್ಟ್ರೀಯ ಶಾಲೆಯೊಂದನ್ನು ನಾವು ಸ್ಥಾಪಿಸಿದೆವು ಹಾಗೂ ನಾನೊಬ್ಬ ಅದರ ಸಂಸ್ಥಾಪಕನೂ ಶಿಕ್ಷಕನೂ ಆದೆನು.

ಗಾಂಧೀಜಿಯುವರು ಮುಂದೆ ಬೇರೆ ಊರುಗಳಿಗೆ ತೆರಳಿದರು. ಅವರ ಒಂದೇ ದಿನದ ಭೆಟ್ಟಿಯು ರಾಷ್ಟ್ರೀಯ ದೃಷ್ಟಿಯಿಂದ ತಮಂಧದಲ್ಲಿದ್ದ ಜಡ ಜನಕ್ಕೆ ಹೊಸ ಜೀವನವನ್ನು ಕೊಟ್ಟಿತೆನ್ನಬಹುದು. ಅನೇಕ ವಿದ್ಯಾರ್ಥಿಗಳು ಶಾಲೆ ಕಾಲೇಜುಗಳನ್ನು ಬಿಟ್ಟರು. ಹಲವಾರು ವಕೀಲರು ತಮ್ಮ ವಕೀಲಿ ಯನ್ನು ತ್ಯಜಿಸಿದರು. ಸಾವಿರಾರು ಜನರು ತಿಲಕ-ಸ್ವರಾಜ್ಯ ನಿಧಿಗೆ ಮುಡುಪಿಟ್ಟರು. ಪರದೇಶಿ ಬಟ್ಟೆಗಳ ಹಾಗೂ ಮಾದಕಪದಾರ್ಥಗಳ ಬಹಿಷ್ಕಾರಕ್ಕೆ ಬಲ ಬಂದಿತು. ಹುಬ್ಬಳ್ಳಿ ಹಾಗೂ ಧಾರವಾಡ ಊರುಗಳಲ್ಲಿ ರಾಷ್ಟ್ರೀಯ ಶಾಲೆಗಳ ಸ್ಥಾಪನೆ ಆಯಿತು. ಹೊಸ ರಾಷ್ಟ್ರೀಯ ಜೀವನ ಎಲ್ಲೆಲ್ಲಿಯೂ ಸುಳಿದಾಡತೊಡಗಿತು.

೪. ಯುದ್ಧಪಥದಲ್ಲಿ

೧೯೧೫ ರಲ್ಲಿ ದಕ್ಷಿಣ ಆಫ್ರಿಕೆಯಿಂದ ಮರಳಿದ ನಂತರ ಗಾಂಧೀಜಿಯವರು ಗುಜರಾಥದ ರಾಜಧಾನಿಯಂತಿರುವ ಅಹಮದಾಬಾದಿನಲ್ಲಿ ಸತ್ಯಾಗ್ರಹ ಆಶ್ರಮವನ್ನು ಸ್ಥಾಪಿಸಿದರು. ಊರಿಂದ ಸುಮಾರು ಎರಡು ಮೈಲುಗಳ ದೂರದಲ್ಲಿ ಸಾಬರಮತಿ ನದಿಯ ದಂಡೆಯಮೇಲೆ ಹಲವು ಸಾದಾ ಗುಡಿಸಲುಗಳನ್ನು ಕಟ್ಟಿಕೊಂಡು ಅವರು ಹಲವು ಅನುಯಾಯಿಗಳೊಡನೆ ಇರಲಾರಂಭಿಸಿದರು. ೧೯೨೧ ರಷ್ಟೊತ್ತಿಗೆ ಆ ಆಶ್ರಮವು ಹಿಂದೀ ರಾಜಕಾರಣದ ಕೇಂದ್ರವಾಗಿತ್ತಷ್ಟೇ ಅಲ್ಲದೆ ಅದೊಂದು ಯಾತ್ರಾಸ್ಥಾನವೂ ಆಗಿಬಿಟ್ಟಿತ್ತು.

ಪುರಾಣಾಂತರದಲ್ಲಿ ತ್ಯಾಗಕ್ಕಾಗಿ ಪ್ರಸಿದ್ಧಿವೆತ್ತ ದಧೀಚಿ ಋಷಿಯ ಗುಡಿಯ ಹತ್ತರವೆ ಈ ಆಶ್ರಮವು ಸ್ಥಾಪಿಸಲಾಯಿತು. ಇದೊಂದು ಸುಂದರ ಯೋಗಾಯೋಗವೆ ಸೈ. ಅಸುರರು ಅತಿಶಯ ಬಲಿಷ್ಠರಾಗಿ ಇಂದ್ರನಿಗೆ ಅಸುಗೊಳ್ಳದೆ ಹೋದಾಗ ಇಂದ್ರನು ಈ ದಧೀಚಿಯತ್ತ ಸಹಾಯಕ್ಕಾಗಿ ಹೋದನು. ಅಸುರರನ್ನು ಸೋಲಿಸಬೇಕಾದರೆ ದಧೀಚಿಯ ಒಂದು ಪಕ್ಕಡಿ ಎಲುಬನ್ನು ಕೊಂಡು ಹೊಸ ಶಸ್ತ್ರವನ್ನು ಸಿದ್ಧಪಡಿಸೆಂದು ಇಂದ್ರನಿಗೆ ಹೇಳಲಾಗಿತ್ತು. ಮೊರೆಹೊಕ್ಕ ಇಂದ್ರನ ಬಿನ್ನಹಕ್ಕೆ ಬಾಗಿ ದಧೀಚಿಯು ಉಪವಾಸದ ಮೂಲಕ ತನ್ನ ದೇಹವನ್ನು ತ್ಯಜಿಸಿದನು. ತರುವಾಯ ಇಂದ್ರನು ಅವನ ಎಲುಬಿನಿಂದ ಮಹತ್ತರವಾದ ವಜ್ರಾಯುಧವನ್ನು ರಚಿಸಿ ಅಸುರರನ್ನು ದಶದಿಕ್ಕುಗಳಿಗೆ ಓಡಿಸಿದನು.

ಆ ಗುಡಿಯ ಹತ್ತರ ತಮ್ಮ ಆಶ್ರಮದ ಸ್ಥಳವನ್ನು ಆರಿಸುವಾಗ ಯಾರೋ ಗಾಂಧೀಜಿಯವರಿಗೆ ದಧೀಚಿ ಋಷಿಯ ಈ ಕಥೆಯನ್ನು ಹೇಳಿದರು. ಸ್ವಾಭಾವಿಕವಾಗಿಯೆ ಅವರ ಮನಸಿನ ಮೇಲೆ ಒಳ್ಳೆ ಅಚ್ಚೊತ್ತಿದಂತೆ ಅದರ ಪರಿಣಾಮವಾಯಿತು. ಅದೇ ರೀತಿ ತಮ್ಮ ಅಸುವನ್ನು ಲೋಕಕಲ್ಯಾಣಕ್ಕಾಗಿ ತ್ಯಜಿಸಲು ಗಾಂಧೀಜಿಯವರು ಯಾವಾಗಲೂ ಸಿದ್ಧರು !

೧೯೨೦ ರ ಡಿಸೆಂಬರ ತಿಂಗಳಲ್ಲಿ ನಾಗಪುರ ಕಾಂಗ್ರೆಸ್ ಅಧಿವೇಶನ

ಆದಂದಿನಿಂದ ಒಂದು ವರುಷ ಸತತ ಅಹಿಂಸಾಮಯ ಅಸಹಕಾರವು ಜಾರಿಯಲ್ಲಿತ್ತು. ಸಾವಿರಾರು ಕಾಂಗ್ರೆಸ್ ಭಕ್ತರು, ಮುಖಂಡರು ಸೆರೆಮನೆ ಪಾಲಾಗಿದ್ದರು. ಪಂಜಾಬ ಹಾಗು ಬಂಗಾಲ ಪ್ರಾಂತಗಳಲ್ಲಿಯ ಸ್ವಯಂ ಸೇವಕರ ಸಂಸ್ಥೆಗಳು ಅಕ್ರಮಕೂಟಗಳೆಂದು ಸಾರಲಾಗಿದ್ದುವು. ಕಲಕತ್ತೆ ಯಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಇವರ ಮೇಲಿನ ಬಹಿಷ್ಕಾರವು ಪೂರ್ಣ ಯಶಸ್ವಿ ಯಾಗಿತ್ತು. ಬಂಗಾಲದ ಪ್ರಸಿದ್ಧ ಮುಖಂಡರಾದ ಶ್ರೀ ಚಿತ್ತರಂಜನ ದಾಸರು ಸೆರೆಗೀಡಾಗಿದ್ದರು. ೧೯೨೧ ರ ಡಿಸೆಂಬರ ತಿಂಗಳಲ್ಲಿ ಅಹಮದಾಬಾದದಲ್ಲಿ ಕಾಂಗ್ರೆಸ್ ಅಧಿವೇಶನ ಕೂಡಿದಾಗ ಸೆರೆಯಾಳುಗಳ ಸಂಖ್ಯೆ ನಾಲ್ವತ್ತು ಸಾವಿರಕ್ಕೆ ಮಿಕ್ಕಿತ್ತು.

ನಾವು ಹಲವು ಮಿತ್ರರು ಅಹಮದಾಬಾದಕ್ಕೆ ಒಂದೆರಡು ದಿನ ಮೊದಲೇ ಹೋಗಿದ್ದೆವು. ಅಲ್ಲಿಯ ಆಶ್ರಮವನ್ನೂ ರಾಷ್ಟ್ರೀಯ ಶಾಲೆಯನ್ನೂ ನೋಡ ಬೇಕೆಂಬುದೆ ಉದ್ದೇಶ. ಗಾಂಧೀಜಿಯವರ ಸಾಯಂಪ್ರಾರ್ಥನೆಗೂ ನಾನು ಹೋಗಿದ್ದೆನು. ಅವರ ಪೈರಣ, ಟೊಪ್ಪಿಗೆ, ಧೋತರ ಇವೆಲ್ಲ ಮಾಯವಾಗಿ ಕೇವಲ ಒಂದು ಪಂಜೆಯನ್ನು ಮಾತ್ರ ಅವರು ಉಡಲಾರಂಭಿಸಿದ್ದರು. ಹಿಂದುಸ್ತಾನದಲ್ಲಿಯ ಲಕ್ಷಾಂತರ ಜನರು ಸಾಕಷ್ಟು ಬಟ್ಟೆಯಿಲ್ಲದೆ ತಿರುಗು ತಿರುವಾಗ ತಾವು ಹೆಚ್ಚು ಉಡುತೊಡುವುದು ಪಾಪ, ಎಂದು ಅವರು ಎಣಿಸಿ ದ್ದರು. ಆಂಧ್ರ ಪ್ರಾಂತದಲ್ಲಿ ಸಂಚರಿಸುತಿರುವಾಗ ಅವರು ನೋಡಿದ ಬಡತನದ ಘೋರ ದೃಶ್ಯವು ಅವರನ್ನು ಈ ಪರಿ ವಿಹ್ವಲಗೊಳಿಸಿತು. ಆದುದ ರಿಂದ ಅತ್ಯವಶ್ಯಕವಾದಷ್ಟೆ ಅವರು ಉಡತೊಡಗಿದರು.

ಪ್ರಾರ್ಥನೆಯ ಕಾಲಕ್ಕೆ ಅವರು ನದಿಯತ್ತ ಮೋರೆ ಮಾಡಿ, ಸ್ವಲ್ಪ ಎತ್ತರ ವಾದ ಕಟ್ಟೆಯ ಮೇಲೆ ಕುಳಿತುಕೊಂಡರು. ನಾವೆಲ್ಲ ಮಳಲಿನಲ್ಲಿ ಕುಳಿತೆವು. ಅಲ್ಲಿ ಸುಮಾರು ನೂರಾರು ಜನರಿರಬಹುದು. ಗಂಭೀರವಾದ ಪ್ರಾರ್ಥನೆ, ನಂತರ ಗೀತಾ ನಿತ್ಯಪಾಠ ಇವು ಮುಗಿದ ಬಳಿಕ ಗಾಂಧೀಜಿಯವರು ಆ ದಿನದ ಘಟನೆಗಳ ವಿಷಯವನ್ನೆತ್ತಿದರು. ಬಂಗಾಲದಲ್ಲಿ ಶ್ರೀ ದಾಸರನ್ನೊಳ ಗೊಂಡು ಅನೇಕರನ್ನು ಸೆರೆ ಹಿಡಿಯಲಾಗಿತ್ತು. ಇದು ಅಭಿನಂದನೀಯ ವೆಂದು ಅವರು ಹೇಳಿದರು. ನಮಗೆ ಬೇಕಾದುದೇನು? ಸ್ವಕಷ್ಟಪೂರ್ವಕ ನಮ್ಮ ಸಮಸ್ಯೆಯ ಪರಿಹಾರವಲ್ಲವೆ? ಅಂದಬಳಿಕ ನಮಗೆ ಬೇಕಾದುದೇ

ದೊರೆತಾಗ ವಿಷಾದಕ್ಕೆಡೆಯೆಲ್ಲಿ? ಈಗ ನಾವು ದುಃಖಪಟ್ಟರೆ ಅದರ ಅರ್ಥ ವೇನಾಗುವದು? ನಮಗೆ ಕಷ್ಟಸಹನೆ ಬೇಡ ಎಂದು, ಇಲ್ಲವೆ ನಮ್ಮನ್ನು ಕಷ್ಟಕ್ಕೀಡು ಮಾಡುವವರ ಬಗ್ಗೆ ನಮ್ಮಲ್ಲಿ ದ್ವೇಷವಿದೆ ಎಂದು, ಆಗುವದು. ನಾವಾಗಿ ಆಮಂತ್ರಿಸಿದ ಕಷ್ಟ ನಷ್ಟಗಳನ್ನು ಆನಂದದಿಂದ ಸ್ವಾಗತಿಸಲು ಹಾಗೂ ವಿರೋಧಿಗಳನ್ನು ಕುರಿತು ಯಾವ ದುಷ್ಟಭಾವನೆಯನ್ನೂ ತಾಳದೆ ಎಲ್ಲವನ್ನೂ ಸಹಿಸಲು ನಮಗೆ ಅವರು ಹೇಳಿದರು.

ಆ ವರುಷದ ಕಾಂಗ್ರೆಸ್ಸಿನ ವ್ಯವಸ್ಥೆ ಅತ್ಯಂತ ಸಾದಾ ತರಹದ್ದಿತ್ತು. ಸುಮಾರು ಮೂವತ್ತು ಸಾವಿರ ಜನರು ಕೂಡುವಷ್ಟು ದೊಡ್ಡ ಮಂಟಪವು ಹಾಕಲಾಗಿತ್ತು. ನಡುವೆ ಒಂದು ವೇದಿಕೆ ಹಾಗೂ ಒಂದು ವ್ಯಾಸಪೀಠ ಇವು ವಿರಾಜಿಸುತಿದ್ದವು. ವೇದಿಕೆಯ ಸುತ್ತಲು ಆದಷ್ಟು ಸಮೀಪ ಪ್ರತಿನಿಧಿಗಳು, ಅವರ ಹಿಂದೆ ಪ್ರೇಕ್ಷಕರು ಕೂಡತಕ್ಕದ್ದು, ಹೀಗೆ ವ್ಯವಸ್ಥೆ ಇತ್ತು.

ಒಂದು ವರುಷದ ಅತ್ಯಂತ ತೀವ್ರವಾದ ಅಸಹಕಾರ, ಸ್ವಯಂಸೇವಕರ ಸಂಘಟನೆಯ ಮೇಲೆ ಗದೆ, ಸುಮಾರು ನಾಲ್ವತ್ತು ಸಾವಿರ ಜನರು ಸೆರೆಯಲ್ಲಿ, ದೇಶದಲ್ಲೆಲ್ಲ ಅಲ್ಲೋಲ ಕಲ್ಲೋಲ ಹಾಗು ಅಶಾಂತಿ—ಇದು ಅಹಮುದಾಬಾದ ಕಾಂಗ್ರೆಸ್ಸಿನ ಹಿನ್ನೆಲೆಯಾಗಿತ್ತು. ಮುಂದೇನು, ಇದೇ ಪ್ರಶ್ನೆಯಿತ್ತು.

ಗಾಂಧೀಜಿಯವರ ಮುಖ್ಯ ಗೊತ್ತುವಳಿಗೆ ಮೌಲಾನಾ ಹಸರತ್ ಮೋಹಾನಿಯುವರು ಒಂದು ಉಪಸೂಚನೆ ಕೊಟ್ಟರು. ಪೂರ್ಣ ಸ್ವಾತಂತ್ರ್ಯವೆ ಹಿಂದುಸ್ತಾನದ ಧ್ಯೇಯುವಾಗಬೇಕೆಂದು ಅವರು ಪ್ರತಿಪಾದಿಸಿದರು. ಆದರೆ ಗಾಂಧೀಜಿಯವರು ಆ ಸೂಚನೆಯನ್ನು ಚಿಕ್ಕ ಒಂದು ಭಾಷಣ ಮಾಡಿ ಪ್ರತಿಭಟಿಸಿದರು. ಮೋಹಾನಿಯವರ ಅಂತಃಕರಣ ಸರಿಯಾಗಿದ್ದರೂ ಅವರ ತಲೆ ಸ್ವಲ್ಪ ಸರಿಯಿಲ್ಲ, ಎಂದು ವಿನೋದವಾಗಿ ಹೇಳಿದರು. ಮುಂದಿನ ಒಂದೇ ಒಂದು ಹೆಜ್ಜೆಯಾಚೆ ನಾವು ವಿಚಾರ ಮಾಡುವದು ಬೇಡ, ಎಂಬುದು ಅವರ ಅಭಿಪ್ರಾಯ. ತಾವು ವ್ಯಾವಹಾರಿಕ ವೇದಾಂತಿಗಳು, ಎಂದು ಅವರು ಹೇಳಿದರು. ತಮ್ಮ ತಲೆ ಕಲ್ಪನಾತರಂಗಗಳಲ್ಲಿ ತೇಲಾಡಿದರೂ ತಮ್ಮ ಪಾದ ಗಳು ಸ್ಥಿರಸ್ಥಾವರ. ಭೂಮಿಯ ಮೇಲೆಯೆ ಗಟ್ಟಿಯಾಗಿರುವವು, ಎಂದರ ವರು.

ಗಾಂಧೀಜಿಯವರ ಕರೆಗೆ ಓಗೊಟ್ಟು ಅಸಹಕಾರವನ್ನು ಹೂಡಿದ ಸಾವಿ-

ರಾರು ಜನರನ್ನು ಸರಕಾರದವರು ಸೆರೆಯಲ್ಲಿ ಎಸೆದಿದ್ದರೂ ಗಾಂಧೀಜಿಯವರಿಗೆ ಮಾತ್ರ ಅವರು ಕೈಹಚ್ಚಿರಲಿಲ್ಲ. ಅವರೇ ಅಸಹಕಾರದ ಆದ್ಯ ಪುರಸ್ಕರ್ತರು. ಹೀಗಿದ್ದು ಅವರ ಮೇಲೆ ಸರಕಾರದ ಕೈ ಇರಲಿಲ್ಲ! ಅವರ ಸನಿಯದ ಮುಖ್ಯ ಮುಖ್ಯ ಅನುಯಾಯಿಗಳನ್ನು ಸೆರೆಹಿಡಿದು ಗಾಂಧೀಜಿಯವರ ಕೈಕಾಲುಗಳನ್ನು ಕಡಿದಂತೆ ಮಾಡಬೇಕೆಂದು ಅವರ ಯೋಜನೆ ಇರಲಿಕ್ಕೆ ಸಾಕು. ಆದರೆ ಈ ರೀತಿ ಅವರನ್ನು ನಿಷ್ಪ್ರಭ ಮಾಡುವ ವಿಷಯದಲ್ಲಿ ಸರಕಾರಕ್ಕೆ ಯಾವಾಗಲೂ ಸೋಲೇ ಉಂಟಾಗಿದೆ. ಯಾಕಂದರೆ ಗಾಂಧೀಜಿಯವರ ಶಕ್ತಿ ಜನಸಾಮಾನ್ಯರ ಭಕ್ತಿ ವಿಶ್ವಾಸಗಳಲ್ಲಿತ್ತೆ ಹೊರತು ಅವರ ಪ್ರಚಾರಸಾಧನಗಳಾದ ಕೇವಲ ನಾಲ್ಕು ಬುದ್ಧಿಜೀವಿಗಳಲ್ಲಿರಲಿಲ್ಲ.

ಪಂಜಾಬ ಹಾಗೂ ಬಂಗಾಲ ಪ್ರಾಂತಗಳಲ್ಲಿಯ ಸ್ವಯಂಸೇವಕರನ್ನು ಅಕ್ರಮಗೊಳಿಸಿದ್ದು ಒಂದು ಆವ್ಹಾನವೆಂದು ಗಾಂಧೀಜಿಯವರು ಎಣಿಸಿದರು. ಸವಿನಯ ಕಾಯದೇಭಂಗಕ್ಕಾಗಿ ಒಂದು ಸೈನ್ಯವನ್ನೆ ಸಿದ್ಧಪಡಿಸುವ ಉದ್ದೇಶದಿಂದ ಕನಿಷ್ಠ ೫೦,೦೦೦ ಸ್ವಯಂಸೈನಿಕರನ್ನು ಕೂಡಿಸಬೇಕೆಂದು ಅವರು ಕಾಂಗ್ರೆಸ್ಸಿನೆದುರಿಗೆ ಒಂದು ಗೊತ್ತುವಳಿಯನ್ನು ಮಂಡಿಸಿದರು. 'ನಾವು ಕತ್ತಿಗಳ ಖಣಖಣಾಟದೆದುರು ಗುಂಪುಗಟ್ಟಬೇಕು, ಗುಂಡಿನ ಮಳೆಗರೆವಾಗ ಮುಂದಡಿಯಿಡಬೇಕು,' ಎಂಬ ಕಡುಗಲಿಯ ಪಲ್ಲವಿಯೆ ಅಹಮದಾಬಾದ ಕಾಂಗ್ರೆಸ್ಸಿನಲ್ಲಿ ಗಾಂಧೀಜಿಯವರ ಪಲ್ಲವಿಯಾಗಿತ್ತು.

ಸ್ವಯಂಸೇವಕನ ಪ್ರತಿಜ್ಞೆಯೊಂದನ್ನು ಅವರು ಸಿದ್ಧಪಡಿಸಿದರು. 'ಕಾಯಾ ವಾಚಾ ಮನಸಾ' ಸ್ವಯಂಸೇವಕನು ಅಹಿಂಸಕನಿರಬೇಕು, ಎಂದು ಅದರಲ್ಲಿ ಉಲ್ಲೇಖವಿತ್ತು. ಆದರೆ, ಮನಸಾ ಅಹಿಂಸೆ, ಎಂಬುದು ಪಾಲಿಸಲು ಬಹಳ ಕಠಿಣವಾಗಬಹುದು, ಪ್ರತಿಜ್ಞೆ ಎಂದ ಬಳಿಕ ಅದು ಯಾವಾಗಲೂ ಪ್ರಮಾಣಪೂರ್ವಕವಾಗಿ ಪಾಲಿಸತಕ್ಕದ್ದಾಗಿರಬೇಕು, ಎಂದು ಹಲವು ಜೊತೆಗಾರರು ಅವರಿಗೆ ಹೇಳಿಕೊಂಡರು. ಆಗ ಅವರು ಅದಕ್ಕೆ ಒಪ್ಪಬೇಕಾಯಿತು. ಕೊನೆಗೆ ಸ್ವಯಂಸೇವಕನು 'ಕಾಯಾ ವಾಚಾ' ಅಹಿಂಸಕನಿರಬೇಕು, ಎಂಬ ಶಬ್ದಗಳಷ್ಟೆ ಇಡಲಾದವು.

ರಾಷ್ಟ್ರವನ್ನು ಈ ರೀತಿ ಸಾರ್ವತ್ರಿಕ ಕಾಯದೇಭಂಗಕ್ಕಾಗಿ ಅಣಿ ಮಾಡುತಿರುವಾಗಲೆ ಗಾಂಧೀಜಿಯವರ ಮನಸಿನಲ್ಲಿ ಬಾರಡೋಲಿ ತಾಲೂಕಿನಲ್ಲಿ

ಕರನಿರಾಕರಣೆಯು ಆತ್ಯಂತಿಕ ಉಪಾಯುವನ್ನು ಯೋಜಿಸುವ ವಿಚಾರವು ನಡೆದಿತ್ತು. ಯಾಕಂದರೆ ಅಧಿಕಾರಮದದಿಂದ ಉನ್ಮತ್ತವಾದ ಸರಕಾರದೊಡನೆ ಅತ್ಯುಗ್ರ ಉಪಾಯುಗಳನ್ನು ಕೈಕೊಂಡು ಕೊನೆಯವರೆಗೂ ಹೋರಾಡುವದು ಅವಶ್ಯವೆಂದು ಅವರ ಮನೆವರಿಕೆಯಾಗಿತ್ತು.

ಕಾಂಗ್ರೆಸ್ಸಿನ ಅಧಿವೇಶನ ಮುಗಿದೊಡನೆ ನಾನು ಗಾಂಧೀಜಿಯವರ ಡೇರೆಗೆ ಹೋದೆನು. ಆ ಮೊದಲು ಅವರನ್ನು ಭೆಟ್ಟಿಯಾಗಲು ಅನುವಿರಲಿಲ್ಲ. ಒಂದು ವರುಷದಲ್ಲಿ ನನ್ನ ಜೀವನದಲ್ಲಿ ಅನೇಕ ಸ್ಥಿತ್ಯಂತರಗಳಾಗಿದ್ದುವು. ಧಾರವಾಡ ಗೋಳಿಬಾರಿನ ಖಟ್ಲೆಯಲ್ಲಿ ನಮ್ಮ ಮೇಲೆ ಲೂಟಿ, ಕೊಲೆ, ಕಳವು ಮುಂತಾದ ಸುಳ್ಳು ಆಪಾದನೆಗಳು ಹೊರಿಸಲಾಗಿದ್ದವು! ನನ್ನ ಸಹಕಾರಿಗಳಾದ ೨೩ ಉತ್ತಮ ಕಾಂಗ್ರೆಸ್ ಕಾರ್ಯಕರ್ತರಿಗೆ ಹೆಚ್ಚು ಕಡಿಮೆ ಅವಧಿಯ ಕ್ರೂರ ಶಿಕ್ಷೆಗಳು ವಿಧಿಸಲಾಗಿದ್ದವು. ಕೇವಲ ಪೋಲೀಸರ ಬೆದರಿಕೆಯಿಂದ ತಮ್ಮ ನೆರೆಹೊರೆಯವರ ವಿರುದ್ಧ ಸುಳ್ಳು ಸಾಕ್ಷಿ ಹೇಳಲು ಸಿದ್ಧವಾಗುವುದೆಂದರೆ ಇದೆಂತಹ ಅಧಃಪಾತ! ಇದೆಷ್ಟು ವಿಷಾದದ ಸಂಗತಿ! ಆದರೆ ಅಂತಹ ನೂರಾರು ಜನರು ಆಗ ಸರಕಾರಕ್ಕೆ ದೊರೆತರು. ನಾನೇನೊ ನಿರಪರಾಧಿಯೆಂದು ಬಿಡುಗಡೆ ಹೊಂದಿದೆನು. ಆದರೆ ನಾನು ಕಾಂಗ್ರೆಸ್ಸಿಗೆ ಹೊರಡುವಷ್ಟರಲ್ಲಿ ರಾಜದ್ರೋಹದ ಬಗ್ಗೆ ನನ್ನ ಮೇಲೆ ಮತ್ತೊಂದು ವಾರಂಟು ಹೊರಡಿಸಲಾಗಿತ್ತು!

ವಾರಂಟು ಇದ್ದುದನ್ನು ಗಾಂಧೀಜಿಯವರಿಗೆ ನಾನು ಹೇಳಿದೆನು. ಅವರು ಹೊಟ್ಟೆ ತುಂಬಾ ನಕ್ಕು, ವಾರಂಟು ಹೊರಡುವಷ್ಟು ಸುದೈವಿ ನಾನಿಲ್ಲವಲ್ಲ, ಎಂದರು. ನಮ್ಮನ್ನೆಲ್ಲ ಮೊದಲು ಕಳುಹಿ ಆ ಮೇಲೆ ನೀವು ಹೋಗುವವರು, ಎಂದು ನಾನು ಉತ್ತರವಿತ್ತೆನು! ಅವರು ಮತ್ತಷ್ಟು ನಕ್ಕರು. ಹಾಗೂ ನನಗೆ ಆಶೀರ್ವಾದ ಕೊಟ್ಟರು.

೧೯೨೨ ರ ಜಾನೆವಾರಿ ಎರಡನೆ ವಾರದಲ್ಲಿ ನಾನು ಧಾರವಾಡ ಮುಟ್ಟಿದೆನು. ಹೋದೊಡನೆ ಒಂದು ಜಾಹೀರ ಸಭೆಯಲ್ಲಿ ಮಾತಾಡುವಾಗ ಸೆರೆ ಹಿಡಿಯಲ್ಪಟ್ಟೆನು.

೫. ಸೆರೆಯ ಮರೆಯಲ್ಲಿ

೧೯೩೨ ರ ಪ್ರಾರಂಭದಲ್ಲಿ ಕರ್ನಾಟಕದ ಏಳೆಂಟು ಕಾಂಗ್ರೆಸ್ ಕಾರ್ಯಕರ್ತ ರಾದ ನಾವು ಯರವಡಾ ಸೆರೆಮನೆಯಲ್ಲಿ ರಾಜದ್ರೋಹಕ್ಕಾಗಿ ಬಂಧಿಸಲ್ಪಟ್ಟಿದ್ದೆವು. ನಾವೆಲ್ಲರೂ ಪ್ರತ್ಯೇಕ ಕೋಣೆಗಳಲ್ಲಿ ಇಡಲಾಗಿದ್ದೆವು. ಆ ಭಾಗಕ್ಕೆ 'ಸೆಪರೇಟ' ಎಂಬ ಹೆಸರಿತ್ತು. ಸೆರೆಮನೆಯಲ್ಲಿ ಏನಾದರೂ ಧಾಂದಲೆ ಹಾಕಿದರೆ ಇಲ್ಲವೆ ಸೆರೆಮನೆಯ ಕಟ್ಟಳೆಗಳನ್ನು ಮುರಿದರೆ ಕೈದಿಗಳನ್ನು ಆ ಭಾಗದಲ್ಲಿಡುವ ಪರಿಪಾಠವಿತ್ತು. ಅಲ್ಲಿ ಹನ್ನೊಂದು ಕೋಣೆಗಳ ಅಯ್ದು ಬರಾಕುಗಳಿದ್ದವು. ಆದರೆ ನಾವಾರೂ ಪರಸ್ಪರರೊಡನೆ ಮಾತಾಡದಂತೆ ನಮ್ಮನ್ನು ದೂರದೂರದ ಕೋಣೆಗಳಲ್ಲಿ ಬಂಧಿಸಿದ್ದರು. ನಾವು ಪರಸ್ಪರರಿಗೆ ನಮಸ್ಕಾರ ಕೂಡ ಮಾಡಬಾರದೆಂಬ ನಿರ್ಬಂಧವಿತ್ತು! ಒಮ್ಮೆ ನಾನು ಇನ್ನೊಬ್ಬ ಮಿತ್ರರಿಗೆ ನಮಸ್ಕಾರ ಮಾಡಿದ್ದಕ್ಕೆ ನನ್ನ ಮೇಲೆ 'ಜೇಲ ಖಟ್ಲೆ' ಹಾಕಲಾಯಿತು, ಹಾಗೂ ನನಗೆ ಎಚ್ಚರ ಕೊಡಲಾಯಿತು. 'ಇನ್ನೊಬ್ಬ ರಾಜಕೀಯ ಕೈದಿಯೊಡನೆ ಮಾತಾಡಿದುದು ಕಂಡುಬಂದಿತು' ಎಂದು ನನ್ನ ಹಿಸ್ಟರಿ ತಿಕೇಟಿನಲ್ಲಿ ಬರೆದಿಡಲಾಯಿತು!

ಸಾಮಾನ್ಯವಾಗಿ ಆಗ ಜೇಲು ಸಾಯಂಕಾಲ ಅಯ್ದು ಗಂಟೆಗೆ ಬಂದಾಗುತಿತ್ತು. ಆದರೆ ಒಂದು ದಿನ ನಾಲ್ಕು ಗಂಟೆಗೆ ಒಮ್ಮೆಲೆ ಜೇಲರನು ಬಂದು ರಾಜಕೀಯ ಕೈದಿಗಳೆನಿಸಿದ ನಮ್ಮನ್ನೆಲ್ಲ ಒಂದೇ ಬರಾಕಿನಲ್ಲಿ ಸೇರಿಸಿಬಿಟ್ಟನು! ಅದು ಆ ಭಾಗದ ಅಗಸಿಯಿಂದ ಎಲ್ಲಕ್ಕೂ ದೂರವಿತ್ತು. ನಮಗೆಲ್ಲರಿಗೂ ಆಶ್ಚರ್ಯವೆನಿಸಿತು. ನಾವು ತರ್ಕ ಮಾಡಲಾರಂಭಿಸಿದೆವು.

ಆಗಿನ ಕಾಲದಲ್ಲಿ ಸೆರೆಮನೆಯಲ್ಲಿ ಸುದ್ದಿ ಎಂಬುದು ಅತ್ಯಂತ ಅಪರೂಪ ವಸ್ತು. ಯಾವ ಪತ್ರಿಕೆಗಳಿಗೂ ಪ್ರವೇಶವಿರಲಿಲ್ಲ. ಅತ್ತಿತ್ತಿನಿಂದ ಬಂದ ಹಾರಸುದ್ದಿಗಳ ಹೊರೆಯೆ 'ಜೇಲ ಗ್ಯಾಜೇಟ್' ಎನಿಸುತಿತ್ತು. ಗಾಂಧೀಜಿಯವರು ಸೆರೆಹಿಡಿಯಲಾದರೆಂಬ ಸುದ್ದಿ ಒಂದು ವಾರದ ಮೊದಲಿನ ನಮ್ಮ 'ಗ್ಯಾಜೇಟ್ಟಿನಲ್ಲಿ' ಪ್ರಸಿದ್ಧವಾಗಿತ್ತು. ಆ ಮೇಲೆ ಯಾವ ಸುದ್ದಿಯೂ

ಬಂದಿರಲಿಲ್ಲ. ಅವರ ಮೇಲೆ ಮೊಕದ್ದಮೆ ನಡೆದಿದೆ ಎಂಬ ಮಾತು ಮಾತ್ರ ನಮಗೆ ಗೊತ್ತಾಗಿತ್ತು.

ನಮ್ಮನ್ನು ಮೂಲೆಯ ಬರಾಕಿಗೆ ಒಯ್ದೊಡನೆ, ಬಹುಶಃ ಗಾಂಧೀಜಿಯವರನ್ನು ಆ ಸೆರೆಮನೆಗೆ ತರಬಹುದೆಂದು ನಮ್ಮಲ್ಲಿ ಹಲವರು ಊಹಿಸಿದರು. ಆ ಮಾತು ಸತ್ಯವೆಂದು ಒಬ್ಬ ವಾರ್ಡರನು ನಮಗೆ ತಿಳಿಸಿದನು. ಅದೇ ಸಾಯಂಕಾಲ ಅವರನ್ನು ಅಲ್ಲಿಗೆ ತರಲಾಗುವುದೆಂದೂ ನಮ್ಮ ವಿಭಾಗದ ಬದಿಗೆಯೆ ಅವರನ್ನು ಇಡಲಾಗುವದೆಂದೂ ಅವನು ಅರುಹಿದನು. ಲೋಕಮಾನ್ಯರಂತೆ ಅವರಿಗೂ ಆರು ವರುಷ ಶಿಕ್ಷೆ ವಿಧಿಸಲಾಗಿತ್ತು. ಆದರೆ ಲೋಕಮಾನ್ಯರಂತೆ, ನಾನು ರಾಜದ್ರೋಹಿಯಲ್ಲ, ಎಂದು ಹೇಳದೆ ಗಾಂಧೀಜಿಯವರು, 'ನಾನು ರಾಜದ್ರೋಹಿ. ನೈತಿಕ ಆಧಾರವಿಲ್ಲದ ಸರಕಾರದ ವಿರುದ್ಧ ರಾಜದ್ರೋಹವನ್ನು ಪಸರಿಸುವದೆ ನನ್ನ ಪವಿತ್ರವಾದ ಕರ್ತವ್ಯ', ಎಂದು ಪ್ರತಿಪಾದಿಸಿದರು. ರಾಜಕೀಯ ಪರಿಸ್ಥಿತಿಯಲ್ಲಿಯ ಬದಲಾವಣೆಯ ಸ್ಪಷ್ಟ ದ್ಯೋತಕವದು.

ಹಿಂದುಸ್ತಾನದಲ್ಲಿ ಗಾಂಧೀಜಿ ಸೆರೆಮನೆಗೆ ಹೋದುದು ಇದೇ ಮೊದಲು ಸಾರೆ. ಆದರೆ ಅವರೊಬ್ಬರು ಆದರ್ಶ ಕೈದಿ, ಎಂಬ ಅವರ ಕೀರ್ತಿ ದಕ್ಷಿಣ ಆಫ್ರಿಕೆಯ ಅವರ ಸೆರೆಮನೆಯಲ್ಲಿಯ ವಾಸದ ನಂತರ ಎಲ್ಲೆಲ್ಲಿಯೂ ಪಸರಿಸಿತ್ತು. ಹೀಗೆ ಎನಿಸಿಕೊಳ್ಳುವದರಲ್ಲಿ ಅವರಿಗೊಂದು ಅಭಿಮಾನ. ಸೆರೆಮನೆಯಲ್ಲಿರುವಾಗ ಯಾವ ರೀತಿ ತಮ್ಮ ಅನುಯಾಯಿಗಳು ವರ್ತಿಸಬೇಕೆಂಬ ಬಗ್ಗೆ ಅವರೊಂದು ನಿಯಮಾವಲಿಯನ್ನೆ ಮಾಡಿದ್ದರು. ಸಾಮಾನ್ಯವಾಗಿ ಜೇಲಿನ ಎಲ್ಲ ನಿಯಮಗಳನ್ನು ಅಕ್ಷರಶಃ ಪಾಲಿಸತಕ್ಕದ್ದು. ಅವುಗಳಲ್ಲಿ ಯಾವಾದರೂ ಧರ್ಮಕ್ಕೆ, ಸ್ವಾಭಿಮಾನಕ್ಕೆ, ವಿವೇಕಬುದ್ಧಿಗೆ ಘಾತಕವಾಗುವಂತಹವಿದ್ದರೆ ಮಾತ್ರ ಅವುಗಳನ್ನು ವಿರೋಧಿಸತಕ್ಕದ್ದೆಂದು ಅವರ ಆದೇಶವಿತ್ತು. ಕಷ್ಟ, ಅನನುಕೂಲತೆ, ತಾಪ ಮುಂತಾದುವುಗಳನ್ನು ಶಾಂತರೀತಿಯಿಂದ ಸಹಿಸತಕ್ಕದ್ದೆಂದು ಅವರ ದಂಡಕವಿತ್ತು.

ಮೊಟ್ಟ ಮೊದಲನೆ ದಿನ ಸಾಯಂಕಾಲ ಅವರು ಅಲ್ಲಿಗೆ ತರಲಾದಾಗ ದಿನದ ರೊಟ್ಟಿ ಹಾಗೂ ಒಣಿಗೆ ಅವರನ್ನು ಕಾಯುತಿತ್ತು. ಆದರೆ ಅದು ಅವರ ಪಚನಶಕ್ತಿಯನ್ನು ಮೀರಿದುದು. ಆದುದರಿಂದ ಅವರು ಏನೂ

ತಿನ್ನದಿರುವದೇ ಲೇಸೆಂದರು. ಮಾರನೆ ದಿನದಿಂದ ಅವರಿಗೆ ಅವಶ್ಯವಿರುವ ಸಾದಾ ಆಹಾರವು ಕೊಡಲಾಯಿತು. ಆಡಿನ ಹಾಲು ಸಹ ಪೂರೈಸಲಾದವು.

ನಾವಿದ್ದ ಸ್ಥಲದಿಂದ ಜೇಲಿನ ಕಚೇರಿಗೆ ನಮ್ಮನ್ನು ಒಯ್ಯಬೇಕಾದರೆ ನಾವು ಅವರಿರುವ ಬರಾಕಿನ ಮೇಲಿಂದಲೆ ಹಾಯಬೇಕಾಗುತಿತ್ತು. ಅವರಿರುವ ಕೋಣೆ ನಾವು ಹೋಗಬರುವ ಹಾದಿಯಿಂದ ಸುಮಾರು ೪೦ ಯಾರ್ಡು ಅಂತರದ ಮೇಲೆ ಇತ್ತು. ದೃಷ್ಟಾದೃಷ್ಟಿಯಾದಾಗ ನಾವು ಅವರಿಗೆ ಪ್ರಣಮಿಸುತಿದ್ದೆವು. ಅವರೂ ನಮಗೆ ಪ್ರತಿನಮಸ್ಕಾರ ಮಾಡುತಿದ್ದರು.

ಹಲವೊಂದು ಸಾರೆ ಪುಸ್ತಕಗಳನ್ನು ಕೂಡ ಕೊಡಕೊಂಬುವುದನ್ನು ನಡೆಸುತಿದ್ದೆವು. ಅವರಿಂದ ಬಂದ 'ಅಜ್ಞಾತ ಶಿಷ್ಯನಿಂದ' (ಬಾಯ್ ಅನ್ ಅನ್‌ನೋನ್ ಡಿಸಾಯಿಪಲ್) ಎಂಬ ಕ್ರಾಯಿಸ್ಟನ ಸುಂದರ ಚರಿತ್ರವೊಂದನ್ನು ಓದಿದ್ದು ನನ್ನ ನೆನಪಿಗೆ ಬರುವದು. 'ಕ್ವೇಕರ' ಎಂಬ ಒಂದು ಕ್ರಿಶ್ಚಿಯನ್ ಸಂಪ್ರದಾಯದವರು ನಿಃಶಸ್ತ್ರರಾಗಿ ಅಡವಿಗಳಲ್ಲಿ ರೆಡ್ ಇಂಡಿಯನ್ ಎಂಬ ಕಾಡುಜನರ ಮಧ್ಯದಲ್ಲಿ ಯಾವ ರೀತಿ ಅಹಿಂಸಕ ವೃತ್ತಿಯಿಂದ ವಾಸಿಸುತ್ತಿದ್ದರೆಂಬ ಬಗ್ಗೆ ಒಂದು ಪುಸ್ತಕವನ್ನು ಓದಿದ್ದು ನನ್ನ ನೆನಪಿನಲ್ಲಿದೆ. ಪ್ರೊ. ಭಾನೂ ಇವರಿಂದ ಬರೆಯಲಾದ ಉಪನಿಷತ್ತುಗಳ ಮರಾಠಿ ಭಾಷಾಂತರವನ್ನು ನಾನು ಅವರತ್ತ ಕಳಿಸಿದುದು ಸ್ಮರಣದಲ್ಲಿದೆ.

ಹಲವು ಮಿತ್ರರು ಅವರ ಭೆಟ್ಟಿಗೆ ಮೊದಲನೆ ಸಾರೆ ಬಂದಾಗ ಎಲ್ಲರಂತೆ ಕಬ್ಬಿಣ ಸಲಾಕೆಗಳಾಚೆ ಅವರನ್ನು ನಿಲ್ಲಿಸಲಾಯಿತು. ಇದು ತಮ್ಮ ಸ್ನೇಹಿತರಿಗೆ ಬಹಳ ಅಪಮಾನಕಾರಕವೆಂದು ಗಾಂಧೀಜಿಯವರಿಗೆ ಎನಿಸಿತು. ಆದುದರಿಂದ ಅವರು ಭೆಟ್ಟಿ ಕೊಳ್ಳದೆ, ತಿರುಗಿ ಕೋಣೆಗೆ ಹೋಗುವಾ, ಎಂದು ಜೇಲರನಿಗೆ ಹೇಳಿದರು. ಈ ಬಗೆಯ ಅಪಮಾನಕಾರಕ ಸ್ಥಿತಿಯಲ್ಲಿ ಭೆಟ್ಟಿ ಕೊಳ್ಳುವುದಕ್ಕಿಂತ ಭೆಟ್ಟಿ ಇಲ್ಲದೇ ಇರುವುದು ಲೇಸೆಂದು ಅವರು ಎಣಿಸಿದರು. ಈ ಅವರ ವೃತ್ತಿಯ ಮೂಲಕ ಎಲ್ಲ ರಾಜಕೀಯ ಕೈದಿಗಳ ಭೆಟ್ಟಿಯ ವಿಷಯದಲ್ಲಿದ್ದ ನಿಯಮಗಳು ಸಡಿಲು ಮಾಡಲಾದವು. ಮುಂದೆ ಒಂದು ಕೋಣೆಯಲ್ಲಿ ಇದಿರು ಬದಿರು ಕುಳಿತು ತಮ್ಮ ಸ್ನೇಹಿತರನ್ನು, ಮನೆಯವರನ್ನು ಕಾಣುವ ಸವಲತ್ತು ರಾಜಕೀಯ ಕೈದಿಗಳಿಗೆ ಕೊಡಲಾಯಿತು.

ಹಲವು ತಿಂಗಳ ನಂತರ ಮೇಜರ ಜೋನ್ಸ್ ಎಂಬವರು ಯರವಡಾ

ಸೆರೆಮನೆಯ ಮೇಲಧಿಕಾರಿಗಳಾದರು. ಅವರು ರಾಜಕೀಯ ಕೈದಿಗಳನ್ನು ಕುರಿತು ವಿಶೇಷ ಸಹಾನುಭೂತಿಯುಳ್ಳವರಾಗಿದ್ದರು. ಗಾಂಧೀಜಿಯವ ರೊಡನೆ ಹರಟೆ ಅವರಿಗೆ ಒಳ್ಳೆ ಪ್ರಿಯವಾದುದು. ಆಡಳಿತ ಹಾಗು ಸುರಕ್ಷಿತ ತೆಯ ದೃಷ್ಟಿಯಿಂದ ಎಲ್ಲ ರಾಜಕೀಯರನ್ನು ಇತರ ಕೈದಿಗಳಿಂದ ದೂರ ಒಂದೇ ಕಡೆಗೆ ಇಡುವದು ವಿಹಿತ, ಎಂದು ಅವರು ಭಾವಿಸಿದರು.

ಅಲ್ಲಿ ಯುರೋಪಿಯನ್ ಯಾರ್ಡ್ ಎಂಬುದೊಂದು ವಿಭಾಗವಿತ್ತು. ಅದರಲ್ಲಿ ನಾಲ್ವತ್ತರಷ್ಟು ಕೋಣೆಗಳಿದ್ದವು. ಆದರೆ ೧೦-೧೨ ಮಾತ್ರ ಬಿಳಿಯ ಕೈದಿಗಳಿದ್ದರು. ಅವರಿಗೆ ಇತರರಿಗಿಂತ ವಿಶೇಷ ಸೌಕರ್ಯಗಳಿದ್ದವು.

ಒಂದು ದಿನ ಮುಂಜಾನೆ ಅಕಸ್ಮಾತ್ತಾಗಿ ಮೇಜರ ಜೋನ್ಸ್‌ರು ಗಾಂಧೀಜಿಯವರ ಹತ್ತಿರ ಬಂದು ರಾಜಕೀಯ ಕೈದಿಗಳೆಲ್ಲ ಯುರೋಪಿಯನ್ ವಿಭಾಗಕ್ಕೆ ತೆರಳಬೇಕೆಂದು ಹೇಳಿದರು. ಗಾಂಧೀಜಿಯವರು ಆ ಕಲ್ಪನೆ ಯನ್ನು ಸ್ವಾಗತಿಸಿದರು. ತಮ್ಮೆಲ್ಲರಿಗೆ ಹೆಚ್ಚು ಅನುಕೂಲತೆಗಳು ದೊರೆಯು ವವು ಎಂಬ ವಿಚಾರಕ್ಕಿಂತ ಆಡಳಿತಕ್ಕೆ ಅಧಿಕಾರಿಗಳಿಗೆ ಹೆಚ್ಚು ಸುಲಭವಾಗುವ ದೆಂಬ ಕಾರಣದಿಂದಲೆ ಅವರು ಹಾಗೆ ಆ ಮಾತಿಗೆ ಸ್ವಾಗತವನ್ನಿತ್ತರು. ಈ ರೀತಿ ಆ ದಿನ ನಾವು ೧೦-೧೨ ಜನರೆಲ್ಲ ಆ ಯಾರ್ಡಿಗೆ ಹೋದೆವು.

ನಾವಿರುವ ಮೊದಲಿನ ಕೋಣೆಗಳಿಗೂ ಆ ಕೋಣೆಗಳಿಗೂ ಅಜಗ- ಜಾಂತರ. ನಮ್ಮವು ೧೦'×೧೦' ಇದ್ದು ಮಣ್ಣಿನ ನೆಲಗಟ್ಟುಳ್ಳವು. ಅವು ೧೦'×೧೨' ಇದ್ದು ಅವುಗಳಿಗೆ ಗಚ್ಚಿನ ನೆಲಗಟ್ಟು. ಅಲ್ಲಿ ಮಲಗಲು ಒಂದು ಕಟ್ಟೆ, ಚಳಿಬಿಸಿಲುಗಾಲಗಳಲ್ಲಿ ತೆರೆದಿಡಲು ಅನುಕೂಲವಾಗುವಂತೆ ಎರಡು ಬೇರೆ ಬೇರೆ ಬಾಗಿಲುಗಳು. ಎತ್ತರವಾದ ಗೋಡೆಗಳು, ಗಾಳಿ ಬೆಳಕುಗಳ ವಿಪುಲತೆ, ಇವೆಲ್ಲ ಅಲ್ಲಿ ಇದ್ದವು. ಅದನೆಲ್ಲ ನೋಡಿ ನಮ್ಮಲ್ಲಿ ಒಬ್ಬರು ಅಂದದ್ದು, 'ಇದಕ್ಕೆ ಸೆರೆಮನೆಯೆಂದು ಯಾರು ಹೇಳಬೇಕು? ಇದು ಕಾಲೇಜಿನ ಛಾತ್ರಾಲಯ!' ಆ ದಿನವನ್ನು ನಾವು ಒಳ್ಳೆ ಆನಂದದಲ್ಲಿ ಕಳೆ ದೆವು. ಗಾಂಧೀಜಿಯವರ ಸಾನ್ನಿಧ್ಯದಿಂದ ನಮಗೆ ಅಷ್ಟು ಸಂತೋಷ.

ಆಯ್ತು, ನಾವು ಹೊಸ ಮನೆ ಕಂಡಂತಾಯಿತು. ಸಾಯಂಕಾಲ ವಾದೊಡನೆ ನೇಮಿಸಿದ ವೇಳೆಗೆ ಕೋಣೆಯುದ್ದಕ್ಕೆ ಕೀಲಿ ಬಿದ್ದವು. ಗಾಂಧೀಜಿ ಯವರ ಕೋಣೆಯೊಂದೆ ತೆರೆದಿಡಲಾಯಿತು.

ಮಾರನೆ ದಿನ ಬೆಳಗಿನ ತಿರುಗಾಟದ ಕಾಲಕ್ಕೆ ನಾವು ಹಲವರು ಗಾಂಧೀಜಿಯವರೊಡನೆ ಮಾತುಕಥೆ ನಡೆಸಿದೆವು. ದಕ್ಷಿಣದಲ್ಲಿ ಬ್ರಾಹ್ಮಣೇತರ ಪಕ್ಷದಿಂದ ಆಗುತಿರುವ ವಿರೋಧವನ್ನು ಅದಾವ ರೀತಿ ತಡೆಯಬೇಕೆಂದು ಕೇಳಿದೆವು. ಯಾವದೇ ಬಗೆಯ ವಿರೋಧವಿರಲಿ, ಅದು ಕನಕ, ಕೀರ್ತಿ, ನಿಂದೆ, ಭಯ ಇವುಗಳನ್ನು ಲೆಕ್ಕಿಸದೆ ನಿಃಸ್ವಾರ್ಥ ಬುದ್ಧಿಯಿಂದ ಮಾಡಲಾದ ಲೋಕ ಸೇವೆಯಿಂದ ಕರಗಿ ಹೋಗುವದು. ಟೀಕೆಗೆ ಪ್ರತಿಟೀಕೆ, ವಿರೋಧಕ್ಕೆ ವಿರೋಧ, ಇವುಗಳಿಂದ ಯಾವ ಉಪಯೋಗವೂ ಆಗದು, ಎಂದು ಅವರ ಮತ.

ಬಳಿಕ ಬಾರಡೋಲಿಯ ಕರನಿರಾಕರಣೆ ಚಳವಳಿಯನ್ನು ನಿಲ್ಲಿಸಿದ್ದಕ್ಕೆ ಅವರ ಮೇಲೆ ಆದ ಕಡುತರವಾದ ಟೀಕೆಯನ್ನು ಅನುಲಕ್ಷಿಸಿ ನಾನು ಪ್ರಶ್ನೆ-ಯನ್ನೆತ್ತಿದೆನು. ಎಲ್ಲಿಯೋ ಚೌರಿಚೌರಾ ಎಂಬಲ್ಲಿ ಆದ ಹಿಂಸೆಗೂ ಬಾರಡೋಲಿಯ ಕರನಿರಾಕರಣೆಗೂ ಸಂಬಂಧವೇನು? ಬಾದರಾಯಣಸಂಬಂಧ ಎನ್ನುವರು, ಹಾಗೆ ಈ ಸಂಬಂಧ, ಎಂದೆನು. ಅದನೆಲ್ಲ ಸಮಧಾನದಿಂದ ಕೇಳಿ ಅವರು ಅಂದದ್ದು, 'ಆಂದೋಲನವನ್ನು ನಾನು ನಡೆಸಬೇಕಾದರೆ ನನ್ನ ಕರಾರುಗಳನ್ನು ಎಲ್ಲರೂ ಪಾಲಿಸಲಿಕ್ಕೆ ಬೇಕು. ನನ್ನ ಆಂದೋಲನದ ತಂತ್ರ ವನ್ನು ನಾನು ಬಲ್ಲೆನು. ಈಗ ಆ ಚಳವಳಿಯನ್ನು ತಡೆದುದರಿಂದ ನನ್ನ ಶಕ್ತಿ ಮತ್ತಷ್ಟು ಬೆಳೆದಿದೆ. ಸುಸಂಧಿಯುಂಟಾದೊಡನೆ ಎರಡರಷ್ಟು ಬಲದಿಂದ ಮತ್ತೆ ಆಂದೋಲನವನ್ನು ಹೂಡಬಲ್ಲೆ'. ಬಿರುಗಾಳಿಗೆ ಸಿಕ್ಕ ಹಡಗದಂತೆ ಹರಿಯಗೊಡದೆ ಆಂದೋಲನವನ್ನು ಸಕಾಲದಲ್ಲಿ ತಡೆದು ಹಿಡಿಯುವದು ನಿಜ ವಾದ ಧೈರ್ಯದ ಹಾಗೂ ಜಾಣತನದ ಕೆಲಸವು. ಶಿಸ್ತು ಸಂಯಮಗಳ ಪಾಠಾಂತರವಿದು.

ಆಂದೋಲನವನ್ನು ಆಗ ತಡೆಯುವದರಿಂದ ಅದನ್ನು ಪೂರಾ ಕೊಂದು ಬಿಟ್ಟಂತೆ, ಎಂದು ಹಲವರ ಅಭಿಪ್ರಾಯವಿದ್ದುದನ್ನು ಅವರಿಗೆ ಹೇಳಿದೆನು. ದೇಶದಲ್ಲಿ ಒಂದು ಬಗೆಯ ನಿರಾಶೆಯ ಛಾಯೆ ಪಸರಿಸಿದುದನ್ನು ತಿಳಿಸಿದೆನು. ಅದಕ್ಕೆ ಅವರು ಒಳ್ಳೇ ಸಾತ್ವಿಕ ಆವೇಶದಿಂದ ಅಂದದ್ದು, 'ಹೋದ ಮೂವತ್ತು ವರುಷ ನಡೆದ ಶಾಸನಬದ್ಧ ಚಳವಳಿಯಿಂದ ಆಗದೇ ಹೋದ ಕೆಲಸವನ್ನು ಅಹಿಂಸಾಮಯ ಅಸಹಕಾರವು ಒಂದೇ ವರುಷದಲ್ಲಿ ಮಾಡಿ ತೋರಿಸಿರುವದು.

ಜನಸಾಮಾನ್ಯರಲ್ಲಿ ವಿಲಕ್ಷಣ ಜಾಗ್ರತಿಯಾಗಿರುವದು. ಅವರ ನಿರ್ಭಯತೆ, ಶಕ್ತಿ, ಸಂಘಟನಸಾಮರ್ಥ್ಯ, ಶಿಸ್ತು ಇವು ಚೆನ್ನಾಗಿ ಬೆಳೆದಿರುವವು. ಇದನೆಲ್ಲ ಸಾಧಿಸಲು ಬಹುಶಃ ಒಂದು ಅರ್ಧ ಶತಮಾನದ ಶಿಕ್ಷಣವಾದರೂ ಬೇಕಾಗುತಿತ್ತು'.

ಸುಮಾರು ಒಂಬತ್ತು ಹೊಡೆಯುವ ಸಂಧಿಗೆ ಮೇಜರ್ ಜೋನ್ಸ್ ಇವರು ನಿತ್ಯದಂತೆ ನಮ್ಮ ಯಾರ್ಡಿಗೆ ಬಂದರು. ಅವರ ಮನಸು ಯಾಕೋ ಸ್ವಲ್ಪ ಅಶಾಂತವಾಗಿತ್ತು. ವಾಡಿಕೆಯಂತೆ ಅವರೊಡನೆ ನಾಲ್ಕಾರು ಜೇಲ ಅಧಿಕಾರಿಗಳು ಸಿಪಾಯರು ಇದ್ದರು. ಗಾಂಧೀಜಿಯವರಿಗೆ ನಮಸ್ಕಾರ ಮಾಡಿ ಜೋನ್ಸರು ಕುಶಲ ಪ್ರಶ್ನೆಗಳನ್ನು ಕೇಳಿದರು. ಇಲ್ಲಿ ಎಲ್ಲವೂ ಸುಖವಾಗಿದೆ, ಜೊತೆಗಾರರೂ ಚನ್ನಾಗಿರುವರು, ಎಂದು ಗಾಂಧೀಜಿಯವರು ಹೇಳಿದರು. ಜೋನ್ಸ್‌ರು ನಕ್ಕು, 'ಬ್ರಿಟಿಶ್ ಸರಕಾರದ ವಿರುದ್ಧ ನೀವು ಎಲ್ಲರೂ ಕೂಡಿ ಒಳಸಂಚನ್ನೇನೂ ನಡೆಸಿಲ್ಲವಲ್ಲ,' ಎಂದು ಚೇಷ್ಟೆಯಿಂದ ಕೇಳಿದರು. ಗಾಂಧೀಜಿಯವರು, 'ನಾವೆಲ್ಲರೂ ಒಟ್ಟು ಕೂಡಿದ ಮೇಲೆ ಮತ್ತಿನ್ನೇನು ಮಾಡಬೇಕೆನ್ನುವಿರಿ? ಗಂಡ ಹೆಂಡತಿ ಒತ್ತಟ್ಟಿಗೆ ಸೇರಿದಾಗ ತಮ್ಮ ಸುಖ ದುಃಖದ ಮಾತುಗಳನ್ನಾಡಕೂಡದೆಂದು ಹೇಳಿದ ಹಾಗಲ್ಲವೆ ಇದು?' ಎಂದರು. 'ಅಹುದು ಅದು ಸ್ವಾಭಾವಿಕ,' ಎಂದರು ಜೋನ್ಸರು.

'ಆದರೆ ನಮ್ಮ ಸಂಚು ಒಳಸಂಚಲ್ಲ, ಅದು ಪೂರಾ ಹೊರಸಂಚು, ಬಹಿರಂಗ ಸಂಚು! ನಾವು ಒತ್ತಟ್ಟಿಗಿರಲಿ, ಪ್ರತ್ಯೇಕವಿರಲಿ, ಅದು ತನ್ನ ಪಾಡಿಗೆ ತಾನು ನಡೆದೇ ಇರುವದು. ಇದು ನಿಮಗೂ ಗೊತ್ತು, ಜಗಕ್ಕೂ ಗೊತ್ತು,' ಎಂದು ಗಾಂಧೀಜಿಯವರು ಮತ್ತೆ ಮಾತು ಜೋಡಿಸಿದರು.

ಅಂದು ಜೋನ್ಸ ಸಾಹೇಬರ ಮನಸಿಗೆ ಸಮಾಧಾನವಿರಲಿಲ್ಲ, ಎಂಬುದನ್ನು ಗಾಂಧೀಜಿಯವರು ತಿಳಿದುಕೊಂಡಿದ್ದರು. ಅದರ ಕಾರಣವೇನೆಂದು ಅವರು ಆಸ್ಥೆಯಿಂದ ಕೇಳಿದರು. ರಾಜಕೀಯ ಕೈದಿಗಳನೆಲ್ಲ ಒತ್ತಟ್ಟಿಗಿಟ್ಟುದಕ್ಕೆ ಪೂರ್ವ ರಾತ್ರಿ ಮುಂಬೈ ಸರಕಾರದ ಗೃಹಮಂತ್ರಿಗಳು ಜೋನ್ಸ ಸಾಹೇಬರಿಗೆ ಛೀ ಹಾಕಿದ್ದರು. ಸಾಹೇಬರ ಖಿನ್ನತೆಯ ಕಾರಣವು ಇದೇ. ಗಾಂಧೀಜಿಯವರಿಗೆ ಇದು ತಿಳಿದೊಡನೆ ಕೂಡಲೆ ಅವರು ಗಂಭೀರ ಭಾವದಿಂದ, 'ನಮಗೆ ನೀವು ಒಳ್ಳೆಯವರಾದುದಕ್ಕೆ ನಿಮಗೆ ಯಾವದೇ ಬಗೆಯ

ತೊಂದರೆಯಾಗುವದನ್ನು ನಾವು ಸಹಿಸಲಾರೆವು. ಎಷ್ಟು ಉತ್ಸಾಹದಿಂದ ಇಲ್ಲಿಗೆ ಬಂದೆವೊ ಅದೇ ಉತ್ಸಾಹದಿಂದ ನಮ್ಮ ನಮ್ಮ ಮೊದಲಿನ ಕೋಣೆಗಳಿಗೆ ನಾವು ಹೋಗಿ ಬಿಡುವೆವು,' ಎಂದು ಹೇಳಿದರು.

ಮೇಜರ್ ಜೋನ್ಸರ ದೊಡ್ಡ ಭಾರವನ್ನು ಗಾಂಧೀಜೀಯವರು ನಿರಾಯಾಸವಾಗಿ ಕಡಿಮೆ ಮಾಡಿಬಿಟ್ಟರು. ನಾವು 'ಯಥಾ ಪೂರ್ವಮಕಲ್ಪಯತ್' ಎಂದು ಪೂರ್ವಸ್ಥಳಕ್ಕೆ ಹೋಗಿಬಿಟ್ಟೆವು.

ಬರಬರುತ್ತ ದಿನಗಳು ದಾಟಿ, ವಾರಗಳು ಸಾಗಿಹೋಗಿ ೮-೧೦ ತಿಂಗಳುಗಳೂ ಆದವು. ನನ್ನ ಬಿಡುಗಡೆಯ ದಿನಗಳು ಸಮೀಪಿಸಿದವು. ಯರವಡಾ ಬಿಟ್ಟು ಹೋಗುವ ಮೊದಲು ಗಾಂಧೀಜಿಯವರನ್ನು ಭೆಟ್ಟಿಯಾಗುವ ಪ್ರಬಲ ಇಚ್ಛೆ ನನ್ನಲ್ಲಿ ತಲೆದೋರಿತು. ಹೊರಗೆ ನಡೆದ ಸಂಗತಿಗಳ ಬಗ್ಗೆ ಗಾಂಧೀಜಿಯವರ ಪ್ರತಿಕ್ರಿಯೆ ಏನೆಂಬುದನ್ನು ತಿಳಿದುಕೊಳ್ಳುವ ಕುತೂಹಲ ನನ್ನಲ್ಲಿ ಉಂಟಾಯಿತು.

ಅಧಿಕಾರಿಗಳು ನಮಗೆ ಸರಕಾರೀ ರೀತಿಯಿಂದ ಭೆಟ್ಟಿಯಾಗಗೊಡುವದು ಆ ದಿನಗಳಲ್ಲಿ ಅಸಾಧ್ಯವಿತ್ತು. ಅವರ ಪರೋಕ್ಷ ಭೆಟ್ಟಿಯಾಗುವದಕ್ಕೆ ಗಾಂಧೀಜಿಯವರು ಒಪ್ಪುವದು ಅಷ್ಟೇ ದುಸ್ತರವಿತ್ತು. ಆದರೆ ಬಿಡುಗಡೆ ಪೂರ್ವದಲ್ಲಿ ಅವರನ್ನು ಭೆಟ್ಟಿಯಾಗೇ ತೀರಬೇಕೆಂಬ ಹುಚ್ಚು ನನ್ನ ತಲೆ ಹಿಡಿದು ಬಿಟ್ಟಿತ್ತು. ಆದುದರಿಂದ ನಾನೊಬ್ಬ ವಾರ್ಡರನೊಡನೆ ಗಾಂಧೀಜಿಯವರಿಗೆ ನನ್ನ ಉದ್ದೇಶವನ್ನರುಹಿದೆನು. 'ಇನ್ನೆರಡು ದಿನಗಳಲ್ಲಿ ನನ್ನ ಬಿಡುಗಡೆಯಾಗಬಹುದು. ನಾಳೆ ಮಧ್ಯಾನ್ಹ ಎರಡು ಗಂಟೆಗೆ ನಾನು ನಿಮ್ಮನ್ನು ಕಾಣಬೇಕೆನ್ನುವೆ. ನನ್ನ ಯಾರ್ಡಿನ ಅಗಸೀ ಬಾಗಿಲಲ್ಲಿ ನಿಂತು ನಾನು ನಿಮ್ಮೊಡನೆ ಮಾತಾಡುವೆ, ಮನ್ನಿಸಬೇಕು,' ಎಂದು ಹೇಳಿಕಳುಹಿದೆ. ಅವರು ಒಪ್ಪಿದರು. ನಾನು ಆನಂದಾಶ್ಚರ್ಯದಿಂದ ಪುಲಕಿತನಾದೆನು!

ನಿಯತಕಾಲಕ್ಕೆ ಹೇಳಿ ಕಳುಹಿಸಿದೆನು. ಅವರು ತಮ್ಮ ಯಾರ್ಡಿನ ತಂತಿಯ ಬೇಲಿಯ ಹತ್ತರ ಬಂದು ನಿಂತರು. ನಾನು ನನ್ನ ಇನ್ನೊಬ್ಬ ಗೆಳೆಯ ಹೀಗೆ ಇಬ್ಬರು ಇದ್ದೆವು. ಅವರು ತಮ್ಮ ಪಂಚೆಯೊಂದನ್ನು ಮಾತ್ರ ಉಟ್ಟಿದ್ದರು. ಅವರ ಸ್ಮಿತಹಾಸ್ಯಮುಖವನ್ನೆಲ್ಲ ಅರಳಿಸಿತ್ತು.

ಅವರು ನನ್ನನ್ನು ಬೈಯ್ಯುವರೊ ಏನೊ ಎಂದು ಒಂದರೆಕ್ಷಣ ಭೀತಿ

ಗೊಂಡಿದ್ದೆ. ಅತ್ಯಾದರಪೂರ್ವಕವಾಗಿ ನಮಿಸಿ, ಹೀಗೆ ಭೆಟ್ಟಿಯಾಗುವದು ತಪ್ಪೊ, ಎಂದು ಅಂಜಂಜುತ್ತ ಕೇಳಿದೆನು. 'ಅದರಲ್ಲೇನು ? ಇದು ಜೇಲಿನ ಕಾಯದೆಯ ವಿರುದ್ಧ ಇದ್ದಪಕ್ಷದಲ್ಲಿ ಶಿಕ್ಷೆಗೆ ಸಿದ್ಧರಾಗಿರಬೇಕು ಇಷ್ಟೇ, ಮತ್ತಿನ್ನೇನು ?' ಎಂದರು. ನನ್ನ ತಲೆಯಮೇಲಿನ ದೊಡ್ಡ ಭಾರ ಇಳಿದಂತೆ ನನಗೆ ಎನಿಸಿತು.

' ನೀವು ಈಗ ಒಳಗೆ ಬಂದು ೮-೯ ತಿಂಗಳಾಗಿ ಹೋದವು. ಹೊರಗೆ ಅನೇಕ ಸಂಗತಿಗಳು ನಡೆದಿವೆ,' ಎಂದು ಹೇಳಿ, ವಿಶೇಷತಃ, ಹಲವು ಪ್ರಮುಖ ಕಾಂಗ್ರೆಸ್ಸಿಗರು ಈಗ ಶಾಸನಸಭೆಗಳ ಮೇಲಿನ ಬಹಿಷ್ಕಾರವನ್ನೆತ್ತಬೇಕೆಂದು ಪ್ರತಿಪಾದಿಸಹತ್ತಿರುವರು, ಎಂಬುದನ್ನು ಅವರ ಲಕ್ಷಕ್ಕೆ ತಂದೆನು. ಅಹಿಂಸಾಮಯ ಅಸಹಕಾರದಲ್ಲಿಯ ತಮ್ಮ ವಿಶ್ವಾಸವು ಎಳ್ಳಷ್ಟೂ ಕಡಿಮೆಯಾಗಿಲ್ಲ, ಎಂದು ಅವರು ಒತ್ತಿ ಹೇಳಿದರು. ಇಷ್ಟೇ ಅಲ್ಲ. ತಾವು ಪ್ರತಿನಿತ್ಯ ನೂಲುತಿರುವಾಗ ತಮ್ಮ ಆ ವಿಶ್ವಾಸ ದಿನೇ ದಿನೇ ಮತ್ತಷ್ಟು ಧೃಢತರವಾಗುತಿರುವದೆಂದು ಹೇಳಿದರು. ' ಈ ಚಳವಳಿಯ ಪರಿಣಾಮವನ್ನು ನೋಡಿ ನನಗೆ ಪೂರ್ಣ ತೃಪ್ತಿಯಾಗಿದೆ. ಇದೊಂದೇ ಮಾರ್ಗವೆಂದು ನನ್ನ ಮನವರಿಕೆಯಾಗಿದೆ. ಹಲವು ಮುಖಂಡರು ವಿರುದ್ಧ ಹೋದರೂ ರಾಷ್ಟ್ರವು ಈ ಕಾರ್ಯಕ್ರಮವನ್ನೆ ಬೆಂಬಲಿಸುವದೆಂಬಲ್ಲಿ ನನಗೆ ಸಂಶಯವಿಲ್ಲ. ನಾನು ಕೇವಲ ಸಿದ್ಧಾಂತವಾದಿಯಲ್ಲ. ಈ ಮಾರ್ಗದಿಂದಲೆ ಜನರು ಹೆಚ್ಚೆಚ್ಚು ಜಾಗ್ರತರಾಗುವರು. ಅವರಲ್ಲಿ ಒಕ್ಕಟ್ಟುಂಟಾಗುವದು. ಅವರು ಸಂಘಟಿತರಾಗುವರು. ಒಮ್ಮೆ ಸಂಘಟನೆಯಾಯಿತೆಂದರೆ ಸ್ವರಾಜ್ಯ ತಾನಾಗಿ ಸಾಗಿ ಬರುವದು. ಹಿಂಸೆಯಲ್ಲಿ ವಿಶ್ವಾಸವುಳ್ಳ ಅನೇಕ ಮುಖಂಡರು ನನ್ನನ್ನು ಈಗ ಹಿಂಬಾಲಿಸುತಿರುವರು. ಅವರು ಒಮ್ಮೆಲೆ ಅಹಿಂಸಾವಾದಿಗಳಾದರೆಂದು ನಾನು ತಿಳಿಯುವುದಿಲ್ಲ. ಆದರೆ ಇನ್ನಾವ ಮಾರ್ಗವೂ ಇಲ್ಲ ಎಂದು ಅವರು ಮನಗಂಡಿರುವರು. ಯಾವ ಶಕ್ತಿಯಿಂದ ನಾವು ಈಗ ಸ್ವರಾಜ್ಯವನ್ನು ಸಂಪಾದಿಸುವೆವೊ ಅದೇ ಶಕ್ತಿ ಮುಂದೆ ಹಲವಾರು ವರುಷ ಹಿಂದುಸ್ಥಾನದಲ್ಲಿ ತನ್ನ ವರ್ಚಸ್ಸು ನಡೆಸುವದು. ಖಡ್ಗದಿಂದ ಗೆದ್ದವರು ಖಡ್ಗದಿಂದ ಹತರಾಗುವರು. ಖಡ್ಗದಿಂದ ಗೆದ್ದ ಸ್ವರಾಜ್ಯ ನನಗೆ ಇಷ್ಟವಾದ, ನಾನು ಕಲ್ಪನೆಯಿಂದ ಕಂಡ ಸ್ವರಾಜ್ಯವಿರಲಾರದು,' ಇವೇ ಮುಂತಾದ ಮಾತುಗಳನ್ನು ಅವರು ಹೇಳಿದರು.

ಉಚ್ಚನೀಚಭಾವರಹಿತವಾದ ಆದರ್ಶ ಸಮಾಜದ ಚಿತ್ರ ಅವರ ಕಣ್ಣ ಮುಂದೆ ಕಟ್ಟಿತ್ತು. ಹಿಂಸೆ, ಒತ್ತಾಯ, ಶೋಷಣೆ, ವಿಷಮತೆ ಇವುಗಳಿಗೆಲ್ಲ ಅಲ್ಲಿ ಎಡೆಯೆಲ್ಲಿ ?

ನನ್ನೊಡನೆ ಇದ್ದ ಮಿತ್ರನು ಅಸ್ಪೃಶ್ಯತೆಯ ವಿಷಯವನ್ನೆತ್ತಿ 'ನೀವು ಧರ್ಮ, ರಾಜಕಾರಣ ಇವುಗಳನ್ನು ಕಲೆಸಿ ಗೊಂದಲ ಮಾಡುತಿರುವಿರೆಂಬ ಆರೋಪ ನಿಮ್ಮ ಮೇಲೆ ಇದೆ,' ಎಂದನು. ಅವರು ಆ ಆರೋಪವನ್ನು ನಿರಾಕರಿಸಿ, ಜೀವನದಲ್ಲಿ ಹೀಗೆ ತೀರ ಪ್ರತ್ಯೇಕ ವಿಭಾಗಗಳಿಲ್ಲ, ಎಂದು ಹೇಳಿದರು. ನಿಮ್ಮಂಥ ಶ್ರೇಷ್ಠ ಪುರುಷರ ವಿಷಯದಲ್ಲಿ ಅದು ನಿಜವಿರ ಬಹುದು. ನೀವು ಅಸ್ಪೃಶ್ಯತೆಯ ನಿವಾರಣೆಗಾಗಿ ಏನೇ ಮಾಡಿದರೂ ನಿಮ್ಮ ರಾಜಕೀಯ ಕಾರ್ಯಕ್ಕೆ ಯಾವ ಆತಂಕವೂ ಉಂಟಾಗುವುದಿಲ್ಲ. ಆದರೆ ನಮ್ಮಂಥ ಅಲ್ಪಜೀವಿಗಳು ಅಸ್ಪೃಶ್ಯತಾ ನಿವಾರಣಕ್ಕೆ ಕೈಹಾಕಿದರೆ ನಮಗೆ ಬಹಿಷ್ಕಾರವೆ ಬೀಳುವದು. ರಾಜಕೀಯ ಕ್ಷೇತ್ರದಲ್ಲಿ ನಮಗೆ ಕಾಲಿಡಲು ಸಹ ಅನುವು ದೊರೆಯದು, ಎಂದು ನನ್ನ ಮಿತ್ರನು ತನ್ನ ತಲ್ಲಣವನ್ನು ತೋಡಿಕೊಂಡನು. ಗಾಂಧೀಜಿಯವರು ಉತ್ತರಿಸಿದ್ದು, 'ನಿಮಗೆ ರಾಜ ಕೀಯ ಕಾರ್ಯದ ಬಗ್ಗೆ ಎಷ್ಟು ಉತ್ಕಟತೆಯಿರುವದೊ ಅಷ್ಟೇ ಉತ್ಕಟತೆ ಅಸ್ಪೃಶ್ಯತಾನಿವಾರಣೆಯ ಬಗ್ಗೆ ಇಲ್ಲ ಎಂಬುದೇ ಇದರ ಅರ್ಥವು. ನಿಮ್ಮ ಭಾವನೆಗಳು ಉತ್ಕಟವಾಗಿರಲಿ. ಯಾವ ವಿಷಯಗಳ ಬಗ್ಗೆ ನಿಮ್ಮ ಭಾವನೆ ಗಳು ಉತ್ಕಟವೊ ಆ ವಿಷಯಗಳ ಬಗ್ಗೆಯೇ ದುಡಿಯಿರಿ. ಉಳಿದ ಮಾತು ಗಳು ತಮ್ಮಷ್ಟಕ್ಕೆ ತಾವೇ ಸರಿಹೋಗುವವು.'

ಕೊನೆಗೆ ನಾನೊಂದು ಸಂದೇಶವನ್ನು ಬೇಡಿದೆನು. ಅವರು ಆ ಬಿನ್ನಹ ವನ್ನು ನಿರಾಕರಿಸಿದರು. 'ನನ್ನ ಜೀವನವೆ ಒಂದು ಸಂದೇಶವು. ಇನ್ನು ಬೇರೆ ಯಾವ ಸಂದೇಶವನ್ನು ಕೊಡಲಿ,' ಎಂದರು.

ಸಾಧಾರಣವಾಗಿ ಹದಿನೈದು ನಿಮಿಷಗಳಷ್ಟು ನಡೆದ ನಮ್ಮ ಭೆಟ್ಟಿ ಈ ಮಾತಿನಿಂದ ಕೊನೆಗಂಡಿತು. ನಾವು ಸಂತುಷ್ಟರಾಗಿ ನಮ್ಮ ಕೋಣೆಗಳಿಗೆ ತೆರಳಿದೆವು. ಗಾಂಧೀಜಿಯವರು ಒಳ್ಳೆ ಉಲ್ಲಸಿತರೂ ಉತ್ಸಾಹಪೂರ್ಣರೂ ಆಗಿದ್ದರು. ಅವರು ಶರೀರತಃ ಸೆರೆಯಾಳುಗಳಾಗಿದ್ದರೂ ಅವರ ಆತ್ಮ ಮುಕ್ತ ವಾಗಿತ್ತು, ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅದೇ ರಾತ್ರಿ ನಾನು ಹಾಗೂ

ಶ್ರೀ. ಹುಕ್ಕೇರಿಕರರು ಬಿಡುಗಡೆಗಾಗಿ ಧಾರವಾಡ ಜೇಲಿಗೆ ಒಯ್ಯಲಾದೆವು. ಆದೇ ದಿನ ಗಾಂಧೀಜಿಯವರ ಭೆಟ್ಟಿಯಾದುದು ನನ್ನ ಸೌಭಾಗ್ಯವೆನ್ನಬೇಕು.

ಬಿಡುಗಡೆಯ ನಂತರ, ‘ ಮಹಾತ್ಮರ ಇಂದಿನ ವಿಚಾರ ’ ಎಂಬ ಒಂದು ಚಿಕ್ಕ ಪುಸ್ತಕರೂಪದಿಂದ ನಮ್ಮ ಸಂಭಾಷಣದ ಸಾರವನ್ನು ಪ್ರಕಟಿಸಿದೆವು.

೬. ಕಾಂಗ್ರೆಸ್ಸಿನ ಅಧ್ಯಕ್ಷರು

೧೯೨೦ ರ ಸಪ್ಟೆಂಬರ ತಿಂಗಳಲ್ಲಿ ಕಲಕತ್ತೆಯಲ್ಲಿ ಕಾಂಗ್ರೆಸ್ಸಿನ ವಿಶೇಷಾಧಿವೇಶನವಾಯಿತು. ಆ ಅಧಿವೇಶನದಿಂದ ಮೊದಲುಮಾಡಿ ಗಾಂಧೀಜಿಯವರು ಕಾಂಗ್ರೆಸ್ ಸಂಸ್ಥೆಯನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಪ್ರಾರಂಭ ಮಾಡಿದರು. ಅಲ್ಲಿ ಅಹಿಂಸಾಮಯ ಅಸಹಕಾರದ ಗೊತ್ತುವಳಿಯು ಮಂಡಿಸಲಾಯಿತು. ಆ ಮೊದಲು ಮೂರು ತಿಂಗಳು ಅದೇ ಗೊತ್ತುವಳಿಯು ಗಾಂಧೀಜಿಯವರ ಪ್ರೇರಣೆಯಿಂದ ಅಖಿಲ ಭಾರತ ಖಿಲಾಫತ್ ಸಮ್ಮೇಲನದಲ್ಲಿ ಸ್ವೀಕರಿಸಲಾಗಿತ್ತು. ಆದರೆ ಕಾಂಗ್ರೆಸ್ಸಿನ ಮುಂದೆ ಬಂದಾಗ ಅದನ್ನು ಚಿತ್ತರಂಜನ ದಾಸ, ಲಾಲಾ ಲಜಪತರಾಯ ಪಂಡಿತ ಮಾಲವೀಯ ಮುಂತಾದ ನುರಿತ ಮುಖಂಡರು ವಿರೋಧಿಸಿದರು. ಹೀಗಿದ್ದರೂ ಒಳ್ಳೆ ಬಹುಮತದಿಂದ ಆ ಗೊತ್ತುವಳಿ ಅಲ್ಲಿ ಪಾಸಾಯಿತು.

ಅಂದಿನಿಂದ ಮುಂದೆ ಗಾಂಧೀಜಿಯವರ ವರ್ಚಸ್ಸು ಕಾಂಗ್ರೆಸ್ಸಿನ ಮೇಲೆ ಒಂದೇ ಸವನೆ ಬಿಟ್ಟುಬಿಡದೆ ನಡೆಯಿತು. ಆಮರಣವೂ ಆ ಸಂಸ್ಥೆ ಪೂರಾ ಅವರ ಹಿಡಿತದಲ್ಲಿ ಉಳಿಯಿತು. ಅವರ ಕಪಿಮುಷ್ಟಿಯನ್ನು ಸಡಿಲಿಸುವದು ಯಾರಿಂದಲೂ ಆಗಲಿಲ್ಲ. ಅಧ್ಯಕ್ಷರು ಯಾರೇ ಇರಲಿ, ಸೂತ್ರಚಾಲಕರು ಅವರೇ. ಯಾರು ಅಧ್ಯಕ್ಷರಾಗಬೇಕಾದರೂ ಅವರ ಸಮ್ಮತಿ ಹಾಗೂ ಆಶೀರ್ವಾದ ಅವಶ್ಯ. ೧೯೩೯ ರಲ್ಲಿ ಅಧ್ಯಕ್ಷಪದಕ್ಕೇರಿದ ಶ್ರೀ. ಸುಭಾಸ ಚಂದ್ರರು ಅವರ ಆಶೀರ್ವಾದವಿಲ್ಲದೆ ಹೋದುದರಿಂದ ಮೂರೇ ತಿಂಗಳಲ್ಲಿ ಆ ಪದವನ್ನು ಬಿಟ್ಟುಕೊಡಬೇಕಾಯಿತು. ಅವರಿಗೆ ವರ್ಕಿಂಗ ಕಮೀಟಿಯ ಇಲ್ಲವೆ ಅಖಿಲ ಭಾರತೀಯ ಕಾಂಗ್ರೆಸ್ ಕಮೀಟಿಯ ಬೆಂಬಲವೆ ದೊರೆಯಲಿಲ್ಲ! ೧೯೪೬ ರ ಜಾನೇವಾರಿ ತಿಂಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರು ಯಾರು ಆಗಬೇಕೆಂಬ ಬಗ್ಗೆ ಚರ್ಚೆ ನಡೆದಾಗ ನಾನೊಮ್ಮೆ ಅವರಿಗೆ ಮದ್ರಾಸದಲ್ಲಿ ಭೆಟ್ಟಿಯಾಗಿದ್ದೆನು. ಆಗ ಅಧ್ಯಕ್ಷರಿದ್ದ ಮೌಲಾನಾ ಅಜಾದರು ಒಂದೇ ಸವನೆ ಆರು ವರುಷ ಅಧ್ಯಕ್ಷರಿದ್ದುದರಿಂದ ಮುಂದೆ ಅವರು ಉಳಿಯಕೂಡದೆಂದು



ಬೆಳಗಾವಿಯಲ್ಲಿ ೧೯೨೪ರಲ್ಲಿ ಕೂಡಿದ್ದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಸ್ಥಾನದಲ್ಲಿ ಗಾಂಧೀಜಿ

ಅವರ ಖಂಡಿತವಾದ ಅಭಿಪ್ರಾಯವಿತ್ತು. ಸರದಾರರಂತೂ ಸೈ. ಅವರು ಭೀಮಸೇನನಂತೆ. ಆದರೆ ಅಧ್ಯಕ್ಷಪದದ ಭಾರವನ್ನು ಪಂಡಿತ ಜವಹರ ಲಾಲರ ಮೇಲೆಯೆ ಹಾಕಬೇಕೆಂದು ಗಾಂಧೀಜಿಯವರ ವಿಚಾರವಿತ್ತು. ಪ್ರಚಂಡ ಜಲಪಾತದಂತಿರುವ ಆ ಮಹಾಶಕ್ತಿಯನ್ನು ಆ ಸಂದರ್ಭದಲ್ಲಿ ಕಾಂಗ್ರೆಸ್ ಸಂಘಟನೆಯ ಕಾರ್ಯದಲ್ಲಿ ನೇರವಾಗಿ ಸಂಯೋಜಿಸಲಿಕ್ಕೆಬೇಕೆಂದು ಅವರ ಯೋಚನೆ. ಅದು ಹಾಗೆಯೆ ಆಯಿತು.

ಅವರ ಅತ್ಯುಚ್ಚ ನೈತಿಕ ಮಟ್ಟ ಹಾಗೂ ರಾಜಕೀಯ ಕ್ಷೇತ್ರದಲ್ಲಿಯ ಅತುಲ ಜಾಣತನ ಇವುಗಳ ಮೂಲಕ ಅವರ ಮುಖಂಡತ್ವಕ್ಕೆ ಯಾರೂ ಎದುರಾಳಿಗಳಿರಲಿಲ್ಲ. ೧೯೩೪ ರ ನಂತರ ಅವರು ಕಾಂಗ್ರೆಸ್ಸಿನ ನಾಲ್ಕಾಣೆ ಸಭಾಸದರಾಗಿ ಸಹ ಉಳಿಯಲಿಲ್ಲ. ಆದರೆ ವಿಶೇಷ ಆಮಂತ್ರಣದ ಮೇರೆಗೆ ಅವರು ವರ್ಕಿಂಗ್ ಕಮೀಟಿಯ ಪ್ರತಿಯೊಂದು ಸಭೆಗೂ ಹಾಜರಿರುತ್ತಿದ್ದರು. ಅವರಿಗೆ ಅನುಕೂಲವಾಗುವಂತೆಯೆ ಆ ಕಮೀಟಿಯ ಸ್ಥಲಕಾಲಗಳು ಗೊತ್ತಾಗುತಿದ್ದವು. ಇದಲ್ಲದೆ ಕಾಂಗ್ರೆಸ್ಸಿನ ಯಾವದೇ ಮಹತ್ವದ ಮಾತು ಅವರ ವರೆಗೆ ಹೋಗದೆ ಅವರ ಸಲಹೆ ಇಲ್ಲದೆ ನಿರ್ಣಯಿಸಲಾಗುತಿರಲಿಲ್ಲ. ಈ ಪದ್ಧತಿ ಕೊನೆಯವರೆಗೂ ಸಾಗಿತು.

ಕಾಂಗ್ರೆಸ್ಸಿನ ಇತಿಹಾಸದಲ್ಲಿ ಹಾಗೂ ಗಾಂಧೀಜಿಯವರ ಜೀವಮಾನದಲ್ಲಿ ಅವರು ಅಧ್ಯಕ್ಷರಾದುದು ಒಮ್ಮೆಯೆ. ಅದು ೧೯೨೪ ರಲ್ಲಿ ಆದ ಬೆಳಗಾಂವಿಯ ಅಧಿವೇಶನದಲ್ಲಿ. ಆ ಪದವನ್ನು ಸ್ವೀಕರಿಸಲು ಅವರ ಮನವೊಲಿಸಿದ ಶ್ರೇಯವು ಕರ್ನಾಟಕಕ್ಕೆ ಹಾಗೂ ಅದರ ಮುಖಂಡರಾದ ಶ್ರೀ. ದೇಶಪಾಂಡೆ ಗಂಗಾಧರರಾಯರಿಗೆ ಎಂಬಲ್ಲಿ ಸಂಶಯವಿಲ್ಲ. ಅವರು ಆಗ ನಿರಾಕರಿಸಿದ್ದರೆ ನಮ್ಮ ರಾಷ್ಟ್ರಪಿತರೂ ಆಧುನಿಕ ಕಾಂಗ್ರೆಸ್ಸಿನ ಶ್ರೇಷ್ಠ ಶಿಲ್ಪಿಗಳೂ ಆದ ಗಾಂಧೀಜಿಯವರ ಹೆಸರು ಆ ರಾಜಕೀಯ ಮಹಾಸಭೆಯ ಅಧ್ಯಕ್ಷರ ಮಾಲಿಕೆಯಲ್ಲಿ ಕಾಣದೆ ಹೋಗುತಿತ್ತು.

ಅನೇಕ ರೀತಿಯಿಂದ ಬೆಳಗಾವಿಯ ಕಾಂಗ್ರೆಸ್ಸು ಮಹತ್ವದ್ದಿತ್ತು. ಗಾಂಧೀಜಿಯವರ 'ಸತ್ಯಪ್ರಯೋಗ'ದ ದೃಷ್ಟಿಯಿಂದ, ಕಾಂಗ್ರೆಸ್ಸಿನ ಇತಿಹಾಸದ ದೃಷ್ಟಿಯಿಂದ, ಆಗಿನ ರಾಜಕಾರಣದ ದೃಷ್ಟಿಯಿಂದ ಆ

ಅಧಿವೇಶನವು ಸಂಸ್ಮರಣೀಯವಾಗಿತ್ತು. ಕರುಳುರೋಗಕ್ಕಾಗಿ ಶಸ್ತ್ರಕ್ರಿಯೆ ಮಾಡುವ ಪ್ರಸಂಗ ಬಂದುದರಿಂದ ಗಾಂಧೀಜಿಯವರನ್ನು ೧೯೨೪ ರ ಫೆಬ್ರುವರಿ ತಿಂಗಳ ಅಯ್ದನೆ ತಾರೀಖಿಗೆಯೆ ಬಿಡಲಾಗಿತ್ತು. ಆರು ವರುಷಗಳ ಶಿಕ್ಷೆ ಅತ್ತ ಮೂಲೆಗುಂಪಾಯಿತು! ಶಾಸನಸಭೆಗಳಲ್ಲಿ ಸೇರುವ ಆತುರವುಳ್ಳ ಸ್ವರಾಜ್ಯ ಪಕ್ಷದವರು ಅವರ ಆಶೀರ್ವಾದಕ್ಕಾಗಿ ಕಾದುಕೊಂಡು ಕುಳಿತಿದ್ದರು. ಕೊನೆಗೆ ಅವರು ಗಾಂಧೀಜಿಯವರಿಂದ ಸಮ್ಮತಿ ಪಡೆದೇಬಿಟ್ಟರು. ಗಾಂಧೀಜಿಯವರು ಆ ಪ್ರಸಂಗವನ್ನು ಸಾಧಿಸಿ ವಿಧಾಯಕ ಕಾರ್ಯಕ್ರಮವನ್ನು ಹೆಚ್ಚು ಮುಂದರಿಸಲು ಟೊಂಕಕಟ್ಟಿದರು. ಅಂದಿನಿಂದ ಮುಂದೆ ವಿಧಾಯಕ ಚಟುವಟಿಕೆಗಳ ಮೂಲಕ ಜನಸಾಮಾನ್ಯರಲ್ಲಿ ಸೇರಿ ಕೆಲಸ ಮಾಡಲು ಕಾರ್ಯಕರ್ತರಿಗೆ ಹೆಚ್ಚು ಅನುಕೂಲವಾಯಿತು.

ಇಂತಿಷ್ಟು ಸ್ವತಃ ನೂತ ನೂಲನ್ನು ಕೊಡುವವರೆ ಕಾಂಗ್ರೆಸ್ಸಿನ ಸಭಾಸದರಾಗಬೇಕು, ಎಂಬ ಒಂದು ಹೊಸ ಉಪಕ್ರಮವನ್ನು ಗಾಂಧೀಜಿಯವರು ಬೆಳಗಾಂವಿಯ ಅಧಿವೇಶನದಲ್ಲಿ ಮಂಡಿಸಿದರು. ಕಾಂಗ್ರೆಸ್ಸಿನ ಇಡೀ ರಚನೆಯನ್ನೆ ಈ ಬಗೆಯ ಸಭಾಸದರ ಮೇಲೆ ಆಧಾರಿಸಬೇಕೆಂದು ಅವರ ಯೋಚನೆ. ಇದಲ್ಲದೆ ವಿದೇಶಿ ಬಟ್ಟೆ, ಸರಕಾರಿ ಶಿಕ್ಷಣಸಂಸ್ಥೆ, ಕೋರ್ಟು ಕಚೇರಿ, ಶಾಸನ ಸಭೆ, ಹಾಗೂ ಇತರ ಎಲ್ಲ ಸರಕಾರಿ ಸಂಸ್ಥೆ ಇವುಗಳನ್ನು ಬಹಿಷ್ಕರಿಸುವವರೆ ಕಾಂಗ್ರೆಸ್ಸಿನ ಕಾರ್ಯವಾಹೀ ಸಮಿತಿಗಳಲ್ಲಿ ಭಾಗವಹಿಸಬೇಕು, ಎಂದು ಅವರು ಸಾರಿದರು. ಆದರೆ ಆರು ತಿಂಗಳುಗಳ ಪ್ರಯೋಗದ ನಂತರ ನೂಲಿನ ಕರಾರು ಐಚ್ಛಿಕ ಮಾಡಲಾಯಿತು. ಯಾಕಂದರೆ ಬಹುಸಂಖ್ಯ ಕಾಂಗ್ರೆಸ್ಸಿಗರಿಗೆ ಅದನ್ನು ಪೂರೈಸುವುದು ಅಸಾಧ್ಯವೆನಿಸಿತು.

ಅಸಹಕಾರ ಕಾರ್ಯಕ್ರಮದಲ್ಲಿ ಬದಲಾವಣೆಯಾಗಬೇಕೆಂದು ಹಟಹಿಡಿದ ಸ್ವರಾಜ್ಯಪಕ್ಷಕ್ಕೆ ಶಾಸನಸಭೆಗಳನ್ನು ಸೇರಲು ಗಾಂಧೀಜಿಯವರು ಅಪ್ಪಣೆ ಕೊಟ್ಟದ್ದೇನೊ ನಿಜ. ಆದರೆ ಅದೇ ಕಾಲಕ್ಕೆ ಪೂರ್ಣ ಅಸಹಕಾರಕ್ಕೆ ಅಂಟಿಕೊಂಡವರಲ್ಲಿ ಹೆಚ್ಚು ಬಲವಾದ ಸಂಘಟನೆ ಮಾಡಲು ಅವರು ಕೈಹಾಕಿದರು. ಪರಸ್ಪರ ತಿಕ್ಕಾಡಿ ಶಕ್ತಿಯನ್ನು ಕಳಕೊಳ್ಳಗೊಡದಂತೆ ಎರಡೂ ಪಕ್ಷಗಳನ್ನು ಕಾಂಗ್ರೆಸ್ಸಿನಲ್ಲಿಯೆ ಇರುವಂತೆ ಮಾಡಿ ಬಹಳ ದೊಡ್ಡ ಮುತ್ಸದ್ದಿತನದ ಕಾರ್ಯವನ್ನು ಗಾಂಧೀಜಿಯವರು ಸಾಧಿಸಿದರು. ಮುಂದೆ ಇದೇ ಬಗೆಯಾಗಿ

ಪಕ್ಷೋಪಪಕ್ಷಗಳನ್ನು ಕಾಂಗ್ರೆಸ್ಸಿನಲ್ಲಿ ಒಟ್ಟಾಗಿಡಿಸುವ ಮಹತ್ಕಾರ್ಯವನ್ನು ಅವರು ಹಲವು ಸಾರೆ ಮಾಡಬೇಕಾಯಿತು. ಜಗಳಾಡಿ ಮನೆಬಿಟ್ಟು ಹೊರಗೆ ಹೋದ ಮಕ್ಕಳನ್ನು ಮತ್ತೆ ಪ್ರೀತಿಯಿಂದ ತಂದೆ ಬರಮಾಡಿಕೊಳ್ಳುವಂತೆ ಅವರು ಇಂಥ ಪಕ್ಷಗಳನ್ನು ಯಾವಾಗಲೂ ಆತ್ಮೀಯಭಾವದಿಂದ ಸ್ವಾಗತಿಸು ತಿದ್ದರು. ಆ ಮೂಲಕ ಅವರ ಬಗ್ಗೆ ಎಲ್ಲರ ಆದರವಿಶ್ವಾಸಗಳು ಬೆಳೆಯುತ್ತಲೆ ಹೋದವು. ಅವರ ಶಕ್ತಿಯೂ ಆ ಪ್ರಮಾಣದಲ್ಲಿ ಕೊನೆಯವರೆಗೂ ಹೆಚ್ಚುತ್ತ ಹೋಯಿತು.

ಇತರ ಎಲ್ಲ ವಿಧಾಯಕ ಕಾರ್ಯಕ್ರಮಗಳಿಗಿಂತ ಅವರು ರಾಟಿಗೆ ಹಾಗೂ ಖಾದೀ ಉತ್ಪಾದನೆಗೆ ಅತ್ಯಂತ ಮಹತ್ವವನ್ನು ಕೊಡುತಿದ್ದರು. ರಾಟಿಯೆ ಒಂದು ಸೂರ್ಯ, ಇತರ ಚಟುವಟಿಕೆಗಳೆಲ್ಲ ಅದರ ಸುತ್ತಲಿನ ಒಂದು ಗ್ರಹ. ಮಂಡಲ ಎಂದು ಅವರು ಎಣಿಸುತಿದ್ದರು. ಮುಂದೆ ಬೆಳೆದು ಅಖಿಲ ಭಾರತ ಚರಖಾ ಸಂಘ ಎಂದು ಪ್ರಸಿದ್ಧಿವೆತ್ತ ಮಹಾಸಂಸ್ಥೆಯ ಪ್ರಾರಂಭವನ್ನು ಅವರು ಬೆಳಗಾಂವಿಯ ಕಾಂಗ್ರೆಸ್ಸಿನ ಕಾಲಕ್ಕೆಯೆ ಮಾಡಿದರೆಂದು ಹೇಳ ಬಹುದು.

ಇದಲ್ಲದೆ ಸ್ವಲ್ಪ ಶಿಸ್ತಿನ ಹಾಗೂ ಸಂಘಟನೆಯ ಶಿಕ್ಷಣ ಕೊಟ್ಟರೆ ಸ್ವಯಂ ಸೇವಕರು ಉತ್ತಮ ಹಾಗೂ ಸುವ್ಯವಸ್ಥಿತ ರೀತಿಯಿಂದ ಕೆಲಸ ಮಾಡಬಲ್ಲರು ಎಂಬುದನ್ನು ಸಿದ್ಧಪಡಿಸಲು ಹಿಂದುಸ್ತಾನಿ ಸೇವಾದಲದ ಆದ್ಯ ಪ್ರವರ್ತಕ ರಾದ ಡಾ. ಹರ್ಡೀಕರರಿಗೆ ಸಂಧಿ ದೊರೆತದ್ದಾದರೂ ಈ ಬೆಳಗಾಂವಿಯ ಅಧಿ-ವೇಶನದ ಕಾಲಕ್ಕೆಯೆ. ಆ ಸ್ವಯಂಸೇವಕರ ಕೆಲಸವನ್ನು ನೋಡಿ ಗಾಂಧೀಜಿ ಯವರು ಗುಣಗ್ರಹಣ ಮಾಡಿ ಅಲ್ಲಿ ಹಲವರಿಗೆ ಅವರು ಸ್ವತಃ ಪಾರಿತೋಷಕ ಗಳನ್ನು ಹಂಚಿದರು.

ವ್ಯವಸ್ಥಿತ ಧ್ವಜವಂದನೆಯ ಉಪಕ್ರಮವಾದರೂ ಬೆಳಗಾಂವಿಯ ಕಾಂಗ್ರೆಸ್ಸಿನಲ್ಲಿಯೆ ಆಯಿತು. ಈ ಸಮಾರಂಭಕ್ಕಾಗಿ ಹಿಂದುಸ್ತಾನಿ ಸೇವಾ-ದಲದವರು ಒಂದು ವಿಶಿಷ್ಟ ತಂತ್ರವನ್ನು ಗೊತ್ತುಮಾಡಿ 'ರಾಷ್ಟ್ರಗಗನಕಿ ದಿವ್ಯ ಜ್ಯೋತಿ' ಎಂಬ ಪದವನ್ನು ಹಾಡತಕ್ಕದ್ದೆಂದು ನಿರ್ಧರಿಸಿದರು. ಮುಂದೆ ಈ ಸಮಾರಂಭವು ಎಲ್ಲ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಸಾರ್ವತ್ರಿಕ ವಾಯಿತು. ಈಗ ಸ್ವಯಂಸೇವಕರ ಶಿಕ್ಷಣದಲ್ಲಿ ಅದೊಂದು ಅವಶ್ಯವಾಗಿ

ಕಲಿಯತಕ್ಕ ಮಾತಾಗಿರುವದು. ಆ ಪದ್ಯವು ಮಾತ್ರ ಈಗ ಬದಲಾಗಿದೆ. 'ವಿಜಯೀ ವಿಶ್ವ ತಿರಂಗಾ ಪ್ಯಾರಾ' ಎಂಬ ಪದ್ಯವು ಈಗ ಅನ್ನಲಾಗುತಿದೆ.

ರಾಷ್ಟ್ರಧ್ವಜವನ್ನು ಕುರಿತು ಗಾಂಧೀಜಿ ಹಾಗೂ ಡಾ. ಹರ್ಡೀಕರ ಇವರ ನಡುವೆ ಮುಂದೆ ಒಮ್ಮೆ ಆದ ಮಾತುಕಥೆಯನ್ನು ಇಲ್ಲಿ ಹೇಳಲಡ್ಡಿಯಿಲ್ಲ. ಆಗ ಧ್ವಜವು ಇನ್ನೂ ಅಷ್ಟೊಂದು ಪ್ರಚಾರಕ್ಕೆ ಬಂದಿರಲಿಲ್ಲ. ನಿಮ್ಮ ಆಶ್ರಮದಲ್ಲಿ ಧ್ವಜಾರೋಹಣ ಮಾಡಿದರೆ ಅದಕ್ಕೆ ವಿಶೇಷ ಪ್ರತಿಷ್ಠೆಯುಂಟಾಗುವದೆಂದು ಡಾ. ಹರ್ಡೀಕರರು ಸೂಚಿಸಿದರು. ಗಾಂಧೀಜಿಯವರು ಗಂಭೀರ ಭಾವದಿಂದ ಅಂದದ್ದು, 'ಆ ಧ್ವಜಕ್ಕೆ ಆಗಬಹುದಾದ ಕಿಂಚಿತ್ ಅಪಮಾನವನ್ನು ಕೂಡ ಸಹಿಸದೆ ಅದರ ಗೌರವವನ್ನು ಜೀವದ ಹಂಗುದೊರೆದು ಸಂರಕ್ಷಿಸಲು ನಾನು ಹಾಗೂ ನನ್ನ ಜೊತೆಗಾರರು ಸಿದ್ಧರಾದ ದಿನ ನಾನು ಧ್ವಜವನ್ನೇರಿಸುವೆ. ಧ್ವಜವು ನಾನೊಂದು ಬರಿ ಅಲಂಕಾರವೆಂದು ತಿಳಿಯಲಾರೆ.'

ಲಕ್ಷಾಂತರ ಜನರು ಆ ಧ್ವಜಕ್ಕಾಗಿ ಪ್ರಾಣಾಹುತಿ ಕೊಡಲು ಸಿದ್ಧರಾಗುವ ದಿನಗಳು ಬಂದೇಬರುವವೆಂದು ಡಾ. ಹರ್ಡೀಕರರು ಭಾವಿಸಿದ್ದರು. ಆ ದಿನಗಳು ಮುಂದೆ ಬಂದೇ ಬಂದವು.

೭. ಸವಿನಯ ಕಾಯದೇಭಂಗ

ಕಾಂಗ್ರೆಸ್ಸಿಗೆ ಹೊಂದಿಕೊಂಡ ಸ್ವರಾಜ್ಯಪಕ್ಷವು ೧೯೨೪—೩೦ರ ವರೆಗೆ ಶಾಸನಸಭೆಗಳಲ್ಲಿ ಒಳ್ಳೇ ಸುಸಂಘಟಿತ ರೀತಿಯಿಂದ ಸರಕಾರದೊಡನೆ ಹೋರಾಡಿತು. ಹಲವು ಸಾರೆ ಮುಸ್ಲಿಂ ಲೀಗಿನವರು ಕೂಡ ಕೇಂದ್ರ ಶಾಸನ ಸಭೆಯಲ್ಲಿ ಅವರೊಡನೆ ಸಹಕರಿಸುತ್ತಿದ್ದರು. ಎರಡೂ ಪಕ್ಷದವರು ಕೂಡಿ ಅನೇಕ ಸಾರೆ ಸರಕಾರದವರನ್ನು ಸೋಲಿಸಿದರು. ಆದರೆ ಸರಕಾರವು ಅದಕ್ಕೆ ಸೊಪ್ಪು ಹಾಕಲಿಲ್ಲ. ಎಂದಿನಂತೆ ರಾಜಕೀಯ ಅಧಿಕಾರವು ಜನರಿಂದ ದೂರವೆ ಉಳಿಯಿತು.

ಆ ಅವಧಿಯಲ್ಲಿ ಗಾಂಧೀಜಿಯವರು ತಮ್ಮ ಏಕನಿಷ್ಠ ಅನುಯಾಯಿಗಳ ಸಹಾಯದಿಂದ ದೇಶದ ತುಂಬ ವಿಧಾಯಕ ಕಾರ್ಯವನ್ನು ಎಸಗುತ್ತಿದ್ದರು. ಬಂಜೆ ಹಾಗೂ ರುಕ್ಷವೆಂದೆನಿಸುವ ಈ ಅವಧಿಯಲ್ಲಿ ಸರದಾರ ಪಟೇಲರ ನೇತೃತ್ವದಲ್ಲಿ ಬಾರಡೋಲಿಯ ಕರನಿರಾಕರಣೆ ಚಳವಳಿಯೊಂದು ಅತ್ಯಂತ ಯಶಸ್ವಿ ರೀತಿಯಿಂದ ಸಾಗಿತು. ಅಲ್ಲಿಯ ಪ್ರಶ್ನೆ ದೊಡ್ಡದಿರಲಿಲ್ಲ. ಆದರೆ ಆ ಬಾರಡೋಲಿಯ ಆಂದೋಲನದಿಂದ ಹಲವು ಸಂಗತಿಗಳು ಸ್ಪಷ್ಟ ಹಾಗೂ ಸಿದ್ಧವಾದವು. ಹಿಂದುಸ್ತಾನದ ಒಕ್ಕಲಿಗರು ಅಹಿಂಸಾತ್ಮಕ ವಿರೋಧವನ್ನು ಚೆನ್ನಾಗಿ ಮಾಡಬಲ್ಲರು. ಒಳ್ಳೆ ಪ್ರೇರೇಪಕರು ಅವರನ್ನು ಸಂಘಟಿಸಿ ಯೋಗ್ಯ ಮಾರ್ಗವನ್ನು ತೋರಿದರೆ ಅವರು ಬೇಕಾದ ಕಷ್ಟನಷ್ಟಗಳನ್ನು ಸಹಿಸಲು, ಆಸ್ತಿಪಾಸ್ತಿಗಳನ್ನು ಕಳಕೊಳ್ಳಲು, ಪ್ರಸಂಗವಶಾತ್ ಪ್ರಾಣಾರ್ಪಣ ಮಾಡಲು ಸಿದ್ಧರಾಗಬಲ್ಲರು ಎಂಬುದು ಆಗ ಕೈಗನ್ನಡಿಯಂತೆ ಸ್ಪಷ್ಟವಾಯಿತು. ಕೊನೆಗೆ ಸರಕಾರವು ಆ ವಿಷಯದಲ್ಲಿ ಮಣಿಯಿತು ಹಾಗೂ ಹೆಚ್ಚಿಸಿದ ಭೂಕಂದಾಯ ವನ್ನು ಕಡಿಮೆ ಮಾಡಲು ಒಪ್ಪಿತು.

ಶಾಸನಸಭೆಗಳಲ್ಲಿಯ ವಿರೋಧವು ಗಾಳಿಯನ್ನು ಗುದ್ದಿದಂತೆ ನಿಷ್ಫಲ ಎಂಬ ಭಾವನೆ ಜನರಲ್ಲಿ ಪಸರಿಸಿತು. ಸರಕಾರವು ಲೋಕಹಿತವನ್ನು ಮಾಡ ಬಹುದೆಂಬ ಜನರ ಆಶೆ ಬಯಲಾಯಿತು. ಆ ಮೂಲಕ ಬ್ರಿಟಿಶ ಸರಕಾರದ

ನ್ಯಾಯಬುದ್ಧಿಯ ಬಗ್ಗೆ ಆ ವರೆಗೆ ಇದ್ದ ಅಲ್ಪ ಸ್ವಲ್ಪ ವಿಶ್ವಾಸವು ಸಹ ಪೂರ್ಣ ಹಾರಿಹೋಯಿತು. ಆದುದರಿಂದ ಕೊನೆಗೆ ೧೯೨೯ ನೆ ವರುಷ ಡಿಸೆಂಬರ ೩೧ ನೆ ತಾರೀಖಿನ ಮಧ್ಯರಾತ್ರಿ ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಬ್ರಿಟಿಶ್‌ರೊಡನೆ ಇದ್ದ ಸಂಬಂಧವನ್ನು ಕಡಿದುಕೊಂಡು ಪೂರ್ಣ ಸ್ವರಾಜ್ಯವನ್ನು ದೊರಕಿಸುವದೆ ರಾಷ್ಟ್ರದ ಧ್ಯೇಯ, ಎಂದು ಸಾರಲಾಯಿತು.

೧೯೩೦ ರ ೨೬ನೇ ಜಾನೆವರಿ ದಿನ ದೇಶದಾದ್ಯಂತ ನಡೆದ ಸಾವಿರಾರು ಸಭೆಗಳಲ್ಲಿ ಲಕ್ಷಾಂತರ ಜನರು ಸ್ವಾತಂತ್ರ್ಯ ಪಡೆಯುವ ಪ್ರತಿಜ್ಞೆಯನು ಮಾಡಿದರು. ಸ್ವಾತಂತ್ರ್ಯದಿನಾಚರಣೆಯ ಸಂದರ್ಭದಲ್ಲಿ ಜನರು ತೋರಿದ ಉತ್ಸಾಹವನ್ನು ಕಂಡು ಗಾಂಧೀಜಿಯವರು ಬಹಳ ಉತ್ತೇಜಿತರಾದರು. ಅವರು ಅದೇ ವರುಷದ ಎಪ್ರಿಲ್ ೬ನೆ ತಾರೀಖಿನ ದಿನ ದಾಂಡಿ ಎಂಬಲ್ಲಿ ಸಮುದ್ರ ದಂಡೆಯ ಮೇಲೆ ಉಪ್ಪಿನ ಕಾಯದೆಯನ್ನು ಮುರಿದು ಸವಿನಯ ಕಾಯದೆಭಂಗದ ರಣಕಹಳೆಯನ್ನೂದಿದರು. ಮುಂದೆ ಒಂದು ತಿಂಗಳಲ್ಲಿ ಕರಾಡಿ ಎಂಬಲ್ಲಿ ತಮ್ಮ ಶಿಬಿರದಲ್ಲಿರುವಾಗ ಅವರು ಬಂಧಿಸಲ್ಪಟ್ಟರು. ಅಷ್ಟ ರಲ್ಲಿ ಆ ಚಳವಳಿಯು ಕಾಳ್ಗಿಚ್ಚಿನಂತೆ ಎಲ್ಲೆಡೆಯಲ್ಲಿಯೂ ಹಬ್ಬಿಹೋಗಿತ್ತು. ಹೆಂಗಸರು ಚಿಕ್ಕಮಕ್ಕಳು ಸಹ ಉಪ್ಪಿನ ಕಾಯದೇಭಂಗದ ವಿಷಯದಲ್ಲಿ ತಮ್ಮ ತಮ್ಮೊಳಗೆ ಅಹಮುಹಮಿಕೆಯಿಂದ ಎಲ್ಲೆಲ್ಲಿಯೂ ಮೇಲಾಟ ಮಾಡಿದವ ರಂತೆ ಮುಗಿಬೀಳುತಿದ್ದರು.

ಸವಿನಯ ಕಾಯದೇಭಂಗದ ಚಳವಳಿಯಲ್ಲಿ ಕರನಿರಾಕರಣೆಯೆ ಕೊನೆಯ ಮೆಟ್ಟಲು. ಗುಜರಾಥದಲ್ಲಿ ಬಾರಡೋಲಿ ತಾಲೂಕಿನಲ್ಲಿ ಹಾಗೂ ಕರ್ನಾಟಕದಲ್ಲಿ ಅಂಕೋಲೆ ಎಂಬಲ್ಲಿ ಕರನಿರಾಕರಣೆ ಸಾರಲಾಯಿತು. ಅವೆ-ರಡೂ ರಾಜಕೀಯ ದೃಷ್ಟಿಯಿಂದ ಹೂಡಲಾದವುಗಳು. ಆದುದರಿಂದ ೧೯೩೧ ರ ಮಾರ್ಚ್ ತಿಂಗಳಲ್ಲಿ ಗಾಂಧೀ-ಆಯರ್ವಿನ್ ಒಪ್ಪಂದವಾದೊಡನೆ ಅವು ನಿಲ್ಲಿಸಲಾದವು.

ಆದರೆ ಅದೇ ವರ್ಷ ಕರ್ನಾಟಕದ ಸಿರಸಿ, ಸಿದ್ದಾಪುರ ಹಾಗೂ ಹಿರೇಕೆರೂರ ತಾಲೂಕುಗಳಲ್ಲಿಯ ರೈತರು ಕಂಗಾಲರಾಗಿ ಬರದ ಬಾಯಿಗೆ ಸಿಕ್ಕದ್ದರಿಂದ ಬಹಳ ಪೇಚಾಡುತಿದ್ದರು. ಅವರು ಸಭೆಗಳನ್ನು ಸೇರಿಸಿದರು, ಸರಕಾರದ

ಕಡೆಗೆ ಶಿಷ್ಟಮಂಡಳಗಳನ್ನು ಕಳುಹಿದರು, ಬಿನ್ನಹಗಳನ್ನರ್ಪಿಸಿದರು. ಒಂದು ವರುಷದ ಮಟ್ಟಿಗೆ ತಹಕೂಬಿ ಕೊಡಬೇಕೆಂದು ಅಧಿಕಾರಿಗಳನ್ನು ಅಂಗಲಾಚಿ ಬೇಡಿಕೊಂಡರು. ಈ ಎಲ್ಲ ಪ್ರಯತ್ನಗಳು ಬೋರ್ಗಲ್ಲ ಮೇಲೆ ನೀರೆರೆದಂತೆ ವ್ಯರ್ಥವಾದವು. ಇಷ್ಟೇ ಅಲ್ಲ. ಅಧಿಕಾರಿಗಳು ಒಂದೇ ಸವನೆ ಒತ್ತಾಯದಿಂದ ವಸೂಲಿ ಕ್ರಮಗಳನ್ನು ನಡೆಸಿದರು. ನಿಜವಾದ ಆರ್ಥಿಕ ಅಡಚಣಿಗಳೇನೂ ಇರದೆ ಹೋದರೂ ಚಳವಳಿಗಾರರು ಈ ಎಲ್ಲ ಆಟವನ್ನು ಹೂಡಿರುವರೆಂಬ ತಿರುವುಮುರುವು ಕಲ್ಪನೆಯನ್ನು ಅವರು ಮಾಡಿಕೊಂಡರು. ಗಾಂಧೀ–ಆಯರ್ವಿನ್ ಒಪ್ಪಂದದ ತರುವಾಯ ಸಹ ಆ ಮೂರು ತಾಲೂಕುಗಳಲ್ಲಿ ಸೆರೆಹಿಡಿಯುವದು, ಜಪ್ತಿವಾರಂಟು, ಆಸ್ತಿಯನ್ನು ಜಪ್ತಿಮಾಡುವದು, ಭೂಮಿಯನ್ನು ಸರಕಾರಜಮಾ ಮಾಡುವದು ಇವೆಲ್ಲ ಕ್ರಮಗಳು ನಡೆದೇ ಇದ್ದವು.

ರೈತರೆಲ್ಲರೂ ಕೂಡಿ ನನಗೆ ಹೋಗಹೇಳಿದ್ದರಿಂದ ಅವರ ಪರವಾಗಿ ನಾನು ಗಾಂಧೀಜಿಯವರಿಗೆ ಭೆಟ್ಟಿಯಾಗಲು ಹಾಗೂ ಅವರ ಸಲಹೆ ಕೇಳಲು ಅವರು ಇದ್ದಲ್ಲಿಗೆ ಹೋದೆನು. ಆಗ ಅವರು ನಡಿಯಾದದಲ್ಲಿದ್ದರು.

ಅದು ಎಪ್ರಿಲ್ ತಿಂಗಳಿರಬಹುದು. ಬಿಸಿಲುಗಾಲದ ಒಂದು ದಿನ. ದಿನವೆಲ್ಲ ತುಂಬ ಕೆಲಸ ಮಾಡಿ ದಣಿದು ಅವರು ಸಾಯಂಕಾಲ ಶ್ರೀ. ಭೀಮಭಾಯಿ ನಾಯಿಕರ ಮನೆಯಲ್ಲಿ ಹಣೆಯ ಮೇಲೊಂದು ತಣ್ಣೀರಿನ ಪಟ್ಟಿಯನ್ನಿಟ್ಟುಕೊಂಡು ವಿಶ್ರಮಿಸುತಿದ್ದರು. ನಾನು ಅಲ್ಲಿ ಹೋದೊಡನೆ ಅವರ ಆ ತೇಜಃಪುಂಜ ಕಣ್ಣುಗಳು ನನ್ನೆಡೆಗೆ ತಿರುಗಿದವು. ಅವರು ನನ್ನನ್ನು ಸ್ವಾಗತಿಸಿ ತಮ್ಮ ಬದಿ ಕೂಡಹೇಳಿದರು. ಆ ಚಿತ್ರವು ಈಗ್ಯೂ ನನ್ನ ಕಣ್ಣು ಮುಂದೆ ಕಟ್ಟಿದೆ. ರೈತರ ಪಕ್ಷವನ್ನೆಲ್ಲ ನಾನು ಮೊದಲಿನಿಂದಲೂ ಅವರಿಗೆ ತಿಳಿಸುತ್ತ ಬಂದಿದ್ದೆನು. ರಾಜಕೀಯ ಉದ್ದೇಶ ಹಾಗೂ ನಿಜವಾಗ ಆರ್ಥಿಕ ಅಡಚಣಿ ಇವುಗಳಲ್ಲಿಯ ಅಂತರವನ್ನು ಅಧಿಕಾರಿಗಳು ತಿಳಿಯದೆ ಹೋದರಲ್ಲ, ಎಂದು ಅವರು ಬಹಳ ವ್ಯಥೆಪಟ್ಟರು. ರೈತರಲ್ಲಿ ಒಗ್ಗಟ್ಟು ಹಾಗೂ ಒಳ್ಳೆ ಸಂಘಟನೆ ಇದ್ದುದರಿಂದ ಅವರು ಎದೆಗೊಟ್ಟು ಗಟ್ಟಿಯಾಗಿ ನಿಂತಿದ್ದಾರೆಂದು ಅವರಿಗೆ ತಿಳಿಸಿದೆನು. ಅವರ ಮಗ್ಗಲು ಮುರಿಯಬೇಕೆಂದು ಅಧಿಕಾರಿಗಳ ಪ್ರಯತ್ನ ನಡೆದಿದೆ ಎಂಬುದನ್ನೂ ಅರುಹಿದೆನು. ಮೇಲಾಗಿ ಅವರ ಬೇಡಿಕೆ ಯಾದರೂ ಏನು? ಒಂದು ವರುಷದ ತಹಕೂಬಿ. ಇದನೆಲ್ಲ ಕೇಳಿಕೊಂಡ

ಬಳಿಕ, ಮುಂದೆ ಸಾಗಿರಿ, ಎಂಬ ಆದೇಶ ಕೊಟ್ಟರು. ಮೇಲಧಿಕಾರಿಗಳೊಡನೆ ಈ ಬಗ್ಗೆ ಮಾತಾಡುವೆ, ಎಂದು ಹೇಳಿದರು. ರೈತರ ಪಕ್ಷವು ಸತ್ಪಕ್ಷವೆಂದೂ ಅವರು ಕೈಕೊಂಡ ಮಾರ್ಗವು ಸರಲವೂ ಯೋಗ್ಯವೂ ಇದೆ ಎಂದು ಅವರು ಕಂಡುಹಿಡಿದಿದ್ದರು.

ಇಷ್ಟಾದ ಬಳಿಕ ನಾನು ಗಾಂಧೀ-ಆಯರ್ವಿನ್ ಕರಾರಿನ ಬಗ್ಗೆ ವಿಶೇಷತಃ ಅದರ ಶಬ್ದರಚನೆಯ ಸಂದರ್ಭವನ್ನೆತ್ತಿ ಸ್ವಲ್ಪ ಟೀಕೆ ಮಾಡಿದೆನು. ಹಲವು ಕಡೆಗೆ ಅದು ಕಾಂಗ್ರೆಸ್ಸಿನ ಪ್ರತಿಷ್ಠೆಗೆ ಸಲ್ಲುವಂತಹದಿಲ್ಲ ಎಂದೆನು. ಬಹಳ ದಣಿದಿದ್ದರೂ ಈ ಮಾತು ಕೇಳಿದೊಡನೆ ಅವರು ಚಟಕ್ಕನೆ, ನಿಜವಾಗಿ ನಿಮಗೆ ಹಾಗೆನಿಸುವದೊ, ಎಂದು ಮನಸಿಗೆ ಹತ್ತಿದವರಂತೆ ಕೇಳಿದರು. ಆ ಕರಾರಿನ ಮೂಲ ಕರಡನ್ನು ತಾವೇ ಬರೆದಿರುವರು, ಅಲ್ಲಿ ಇಲ್ಲಿ ಸ್ವಲ್ಪ ತಿದ್ದುಪಡಿಯನ್ನು ಮಾತ್ರ ಆಯರ್ವಿನ್ನರು ಮಾಡಿದರು, ಎಂದು ವಿಶ್ವಾಸದಿಂದ ಹೇಳಿದರು. ಕರಡನ್ನು ಸಿದ್ಧಪಡಿಸುವ ಭಾರವು ತಮ್ಮ ಮೇಲೆ ಬಿದ್ದುದರಿಂದ ಸರಕಾರದ ಪ್ರತಿಷ್ಠೆಯನ್ನು ಕಾಯುವ ಹೊಣೆ ಕೂಡ ತಮ್ಮ ಮೇಲೆ ಬಂದಿತೆಂದರು. ಅದು ಎರಡು ಸರಕಾರಗಳ ನಡುವಿನ ಕರಾರಲ್ಲ. ಆದರೆ ಒತ್ತಟ್ಟಿಗೆ ಸರಕಾರ ಇನ್ನೊಂದು ಕಡೆ ಒಂದು ಲೋಕಪಕ್ಷ ಸಂಸ್ಥೆ, ಹೀಗೆ ಆ ಕರಾರು ಇರುವದು. ಎರಡು ವಿಷಯಗಳಲ್ಲಿ ಮಾತ್ರ ಲಾರ್ಡ ಆಯರ್ವಿನ್ನರು ಗಟ್ಟಿ ಹಿಡಿದರು. ಉಳಿದ ಎಲ್ಲ ವಿಷಯಗಳಲ್ಲಿ ಅವರು ತಮ್ಮ ಒಪ್ಪಿಗೆ ಕೊಟ್ಟರು. ಚಳವಳಿಯಲ್ಲಿ ಕಷ್ಟನಷ್ಟಕ್ಕೀಡಾದವರಿಗೆ ಪರಿಹಾರ ಕೊಡಲು ಹಾಗೂ ಪೋಲೀಸರು ಮಾಡಿದ ಅಧಿಕಾರಾತಿಕ್ರಮಣಕ್ಕಾಗಿ ಅವರನ್ನು ದಂಡಿಸಲು ಅವರು ನಿರಾಕರಿಸಿದರು. ಉಳಿದ ಎಲ್ಲ ವಿಷಯಗಳಲ್ಲಿಯೂ ಶಬ್ದರಚನೆ ಏನೇ ಇದ್ದರೂ ತಮ್ಮ ಮಾತೇ ನಡೆಯಿತೆಂದು ಅವರು ಹೇಳಿದರು. ಆದ ಮಾತು ವಜ್ರಲೇಪವಾಗಿ ಹೋಗಿದ್ದರೂ ಯಾವ ವಿಶಿಷ್ಟ ಶಬ್ದರಚನೆಯ ಮೂಲಕ ನನ್ನ ಭಾವನೆ ಹಾಗೆ ಆಯಿತು, ಇದನ್ನು ತಿಳಿಸಲು ಹೇಳಿದರು. ಇಡಿಯದನ್ನು ಓದಿ ನನ್ನ ಸರ್ವಸಾಧಾರಣ ಭಾವನೆ ಹಾಗೆ ಆಗಿದೆ, ಎಂದು ಹೇಳಿ ಮಾತು ಮುಗಿಸಿದೆನು.

ರೈತರ ವಿಷಯದಲ್ಲಿ ಹಾಗೆಯೆ ಮುಂದೆ ಸಾಗಬೇಕೆಂಬ ಅವರ ಆದೇಶವನ್ನು ಕೊಂಡು ನಾನು ಕರ್ನಾಟಕಕ್ಕೆ ಮರಳಿದೆನು.

ಸಿರಸಿ ಸಿದ್ದಾಪುರ ಸಂದರ್ಭದಲ್ಲಿ ನನಗೆ ಇನ್ನೂ ಒಮ್ಮೆ ಗಾಂಧೀಜಿಯವರ ಕಡೆಗೆ ಹೋಗುವ ಪ್ರಸಂಗವು ಬಂದಿತು. ಆಗ ಅವರು ಅಲಹಾಬಾದಿನಲ್ಲಿ ಆನಂದಭವನದಲ್ಲಿ ತಂಗಿದ್ದರು. ಡಾ. ಹರ್ಡೀಕರರೂ ನನ್ನೊಡನೆ ಇದ್ದರು. ಮುಂಜಾನೆ ಹತ್ತರ ಸುಮಾರಿಗೆ ಮಾಳಿಗೆಯ ಮೇಲೆ ಕುಳಿತಿದ್ದರು. ವಾಡಿಕೆಯಂತೆ ತುಂಬಾ ಕೆಲಸದಲ್ಲಿದ್ದರು. ವೃತ್ತಪತ್ರಗಳನ್ನೋದುವುದನ್ನು ಅದೇ ಮುಗಿಸಿದ್ದರು. ಅಷ್ಟರಲ್ಲಿ ನಾನು ಹೋದೆನು. ವಸೂಲಿ ಅಧಿಕಾರಿಗಳು ರೈತರನ್ನು ಯಾವ ಯಾವ ರೀತಿ ಪೀಡಿಸುತಿರುವರು, ಅವರೊಡನೆ ಗೊತ್ತೀತಿನ್ನುವುದು ಎಷ್ಟು ದುಸ್ತರ, ಎಂಬುದೆಲ್ಲವನ್ನು ನಿವೇದಿಸಿದೆನು. ಅದನೆಲ್ಲ ಶಾಂತವಾಗಿ ಕೇಳಿಕೊಂಡು ಜನರು ಧೃತಿಗೆಡದಂತೆ ಎಚ್ಚರಪಡಬೇಕು, ಎಂದು ಹೇಳಿದರು. ವಸೂಲಿ ಅಧಿಕಾರಿಗಳ ಕಟು ಅನುಭವ ಅವರಿಗೂ ಇದ್ದುದರಿಂದ ರೈತರ ಕಷ್ಟಗಳ ಸ್ಪಷ್ಟ ಕಲ್ಪನೆ ಅವರಿಗೆ ಇತ್ತು. ಲಾರ್ಡ ಆಯರ್ವಿನ್ನರ ಉದ್ದೇಶಗಳು ಎಷ್ಟೇ ಉಚ್ಚವಾದವುಗಳು, ಭಾವನೆಗಳು ಎಷ್ಟೇ ಪವಿತ್ರವಾದವುಗಳು ಇದ್ದರೂ ಆಳರಸರ ವೃತ್ತಿ ಚೆನ್ನಾಗಿರಲಿಲ್ಲವೆಂಬುದು ಸ್ಪಷ್ಟ. ಅವರು ಹೊಂದಿಕೊಂಡು ಹೋಗುವ ವೃತ್ತಿಯಿಂದ ನಡೆಯದೆ ಕೇವಲ ಶಬ್ದಚ್ಛಲ ಮಾಡಿ ತಮ್ಮದನ್ನೆ ಸಾಧಿಸುವ ಪ್ರಯತ್ನದಲ್ಲಿದ್ದಂತೆ ಕಂಡುಬಂದಿತು. ಕೊನೆಗೆ ಮೇ ತಿಂಗಳಲ್ಲಿ ರೈತರಿಗೆ ಸ್ವಲ್ಪ ಹಗುರಾಯಿತು.

ಮುಂದೆ ೧೯೩೧ ರ ಅಕ್ಟೋಬರ ತಿಂಗಳಲ್ಲಿ ಗಾಂಧೀಜಿಯವರು ಕಾಂಗ್ರೆಸ್ಸಿನ ಏಕಮೇವ ಪ್ರತಿನಿಧಿಗಳಾಗಿ ಎರಡನೆ ದುಂಡುಮೇಜಿನ ಪರಿಷತ್ತಿಗೆ ಹೋದರು. ಅದೇ ವರುಷದ ಡಿಸೆಂಬರ ೨೮ಕ್ಕೆ ಅವರು ಮರಳಿ ಮುಂಬಯಿಯಲ್ಲಿಳಿದರು. ಆಗ ಅವರು ಬ್ರಿಟಿಶರಿಂದ ನ್ಯಾಯ ಪಡೆಯುವ ವಿಷಯದಲ್ಲಿ ಪೂರ್ಣ ನಿರಾಶರಾಗಿದ್ದರು. ಮುಂಬಯಿಯಲ್ಲಿ ಅವರಿಗೆ ಕೊಡಲಾದ ಸ್ವಾಗತವು ಅದ್ವಿತೀಯವಾಗಿತ್ತು. ಆ ದಿನ ಸಾಯಂಕಾಲ ಅಝುದ ಮೈದಾನದಲ್ಲಿ ನಡೆದ ಸಭೆ ಎಲ್ಲಕ್ಕೂ ಪ್ರಚಂಡವಾಗಿತ್ತು. ಆ ಪರಿಷತ್ತಿನಿಂದ ಯಾವ ಫಲನಿಷ್ಪತ್ತಿಯೂ ಆಗಲಾರದೆಂಬುದನ್ನು ಗಾಂಧೀಜಿಯವರು ಮೊದಲೇ ಅರಿತಿದ್ದರು. ಅವರು ತಿರುಗಿ ಬರುವಷ್ಟರಲ್ಲಿ ಲಾರ್ಡ ಆಯರ್ವಿನ್‌ರು ಹೋಗಿದ್ದರು. ಅವರ ಸ್ಥಳದಲ್ಲಿ ಲಾರ್ಡ ವಿಲಿಂಗಡನ್‌ರು ಹಿಂದುಸ್ತಾನದ ವ್ಹಾಯಿಸರಾಯರಾಗಿದ್ದರು. ಅತ್ಯಂತ ಪ್ರತಿಗಾಮಿ ಧೋರಣದ ಅಧಿಕಾರಿಗಳಿಗೆಲ್ಲ

ವಿಲಿಂಗಡನ್‌ರು ಬಂದೊಡನೆ ಒಳ್ಳೆ ಬಲ ಬಂದಿತು. ಗಾಂಧೀ-ಆಯರ್ವಿನ್ ಕರಾರು ಅವರಿಗೆ ಮೊದಲೇ ಬೇಡಾಗಿತ್ತು. ಅದನ್ನು ಅವರು ಕಾಲ್ಕೆಳಗೆ ಮೆಟ್ಟಲಾರಂಭಿಸಿದರು. ಕಾಂಗ್ರೆಸ್ಸಿನ ವಿರುದ್ಧ ಕ್ರಮುಗಳನ್ನು ಕೈಕೊಳ್ಳ ಬೇಕೆಂದು ಅಧಿಕಾರಿಗಳು ನಡೆಸಿದ ಸಂಚಿನ ಪೂರ್ವ ಚಿಹ್ನಗಳು ಇಂಗ್ಲಂಡ ಬಿಡುವ ಪೂರ್ವದಲ್ಲಿಯೆ ಗಾಂಧೀಜಿಯವರಿಗೆ ಕಂಡುಬಂದಿದ್ದವು. ಅವರು ಹಿಂದುಸ್ತಾನದ ದಂಡೆಗಿಳಿಯುವ ಪೂರ್ವದಲ್ಲಿಯೆ ಗಡಿನಾಡಿನ ಗಾಂಧಿ ಬಾದಶಾಹ ಖಾನ ಹಾಗೂ ಪಂಡಿತ ಜವಾಹರಲಾಲ ಇವರು ಸೆರೆಮನೆ ಗೀಡಾಗಿದ್ದರು.

ಮುಂಬೈಯಲ್ಲಿ ಮೂರು ದಿನ ಕಾಂಗ್ರೆಸ್ ವರ್ಕಿಂಗ ಕಮಿಟಿಯು ಆಲೋಚನೆ ನಡೆಸಿತು. ಗಾಂಧೀಜಿಯವರು ವಿಲಿಂಗಡನ್ನರೊಡನೆ ತಂತೀ ಮೂಲಕ ಮಾತುಕಥೆ ನಡೆಸಿದರು. ಭೆಟ್ಟಿಯನ್ನು ಕೊಡಬೇಕೆಂದು ಬೇಡಿ ಕೊಂಡರು. ಎಂದಿನಂತೆ ಅತ್ಯಂತ ನಮ್ರತೆಯಿಂದಲೂ ವಿನಯದಿಂದಲೂ ಸಂಧಾನ ನಡೆಸಿದರು. ಆದರೆ ಅಧಿಕಾರಿಗಳು ಪ್ರಾರಂಭಿಸಿದ ದಬ್ಬಾಳಿಕೆಯು ಮಾತುಕತೆಯ ವಿಷಯವಾಗಲಾರದು, ಆ ಬಗ್ಗೆ ಒಂದು ಶಬ್ದವನ್ನು ಸಹ ಮಾತಾಡಕೂಡದು, ಎಂದು ವಿಲಿಂಗಡನ್ನರು ಹಟಹಿಡಿದರು. ಒಮ್ಮೆ ಮಾತಿಗೆ ಪ್ರಾರಂಭವಾಯಿತೆಂದರೆ ಗಾಂಧೀಜಿಯವರು ತಮ್ಮನ್ನು ಸೋಲಿಸಿ ಬಿಡುವರು, ಎಂಬ ಭಯ ವಿಲಿಂಗಡನ್ನರಿಗೆ ಇದ್ದ ಮೂಲಕ ಅವರಿಗೆ ಮಾತು ಕತೆಯೆ ಬೇಡಾಗಿತ್ತು, ಎಂದು ಗೊತ್ತಿದ್ದವರು ಹೇಳುವದುಂಟು! ಇದೆಲ್ಲದರ ಪರಿಣಾಮವೇನೆಂದರೆ ವರ್ಕಿಂಗ ಕಮಿಟಿಯು ಸವಿನಯ ಕಾಯದೆಭಂಗ ವನ್ನು ಪುನಃ ಪ್ರಾರಂಭಿಸುವ ನಿಶ್ಚಯ ಮಾಡಬೇಕಾಯಿತು. ಬೇರೆ ವಿಧಿಯೆ ಇಲ್ಲದಂತಾಯಿತು. ೧೯೩೧ ರ ಡಿಸೆಂಬರ ೩೧ನೆ ದಿನ ಮಧ್ಯರಾತ್ರಿ ಆ ನಿರ್ಧಾರ ಮಾಡಲಾಯಿತು.

ಗಾಂಧೀಜಿಯವರು ಸ್ವಾಭಾವಿಕವಾಗಿಯೆ ಆಗ ಅತ್ಯಂತ ಕಾರ್ಯನಿಮಗ್ನ ರಿದ್ದರು. ಆದರೂ ಡಿಸೆಂಬರ ೩೧ನೆ ತಾರೀಖಿನ ದಿನ ಮುಂಜಾನೆ ಹಿಂದು-ಸ್ತಾನೀ ಸೇವಾದಲದ ಕಚೇರಿಯಲ್ಲಿ ಕರ್ನಾಟಕ ಕಾರ್ಯಕರ್ತರನ್ನು ಕಾಣ-ಲೊಪ್ಪಿದರು. ನಾವು ೫೦–೬೦ ಜನರಿದ್ದೆವು. ಅವರು ಬಂದು ನಮ್ಮ ಮಧ್ಯ ದಲ್ಲಿ ಕುಳಿತರು. ಹೋರಾಟವಂತೂ ಎದುರು ಕಾಣುತಿತ್ತು. ಎಲ್ಲರಿಗೂ

ವಾತಾವರಣದಲ್ಲಿ ಅದರ ಪ್ರತೀತಿಯಾಗುತಿತ್ತು. ಸರಕಾರದವರು ಜನರನ್ನು ಹೋರಾಟಕ್ಕೆ ಎಳೆಸಿಯೆ ಬಿಡಬೇಕೆಂದು ಪಣತೊಟ್ಟಂತೆ ತೋರಿತು. ಒಂದು ಕ್ಷಣ ಗಾಂಧೀಜಿಯವರು ನಸುನಗುತ್ತ ಎಲ್ಲರನ್ನೂ ಕಣ್ಣುತುಂಬ ನೋಡಿದರು. ಅವರ ಮಾತು ಕೇಳಿಸಬೇಕೆಂದು ಎಲ್ಲರೂ ಹತ್ತಿರ ಹತ್ತಿರ ಸೇರಿದೆವು. ಆದರೆ ಭಾಷಣ ಮಾಡಬೇಕೆಂಮ ಅವರ ಉದ್ದೇಶವಿರಲಿಲ್ಲ. ನನ್ನಲ್ಲಿ ಹಾಗೂ ಕಾಂಗ್ರೆಸ್ಸಿನಲ್ಲಿ ಕರ್ನಾಟಕದ ಪೂರ್ಣ ವಿಶ್ವಾಸವಿದೆ ಎಂಬುದು ನನಗೆ ಗೊತ್ತು, ಎಂದರು. ಮುಂಬರುವ ಹೋರಾಟವು ಬಹಳ ನಿಕರದ್ದಾಗುವದೆಂದು ಅವರು ಹೇಳಿದರು. ಮರಕಳಿಸಿ ಬರುವ ವಿಷಮಜ್ವರದಂತೆ ಅದು ಪೀಡಾದಾಯಕ ವೆಂದು ನುಡಿದರು. ಆ ಮೇಲೆ ಪ್ರಶ್ನೆಗಳೇನಾದರೂ ಇದ್ದರೆ ಕೇಳಿರಿ, ಎಂದರು.

'ಅಹಿಂಸಾ ಮಾರ್ಗದಿಂದ ಸ್ವರಾಜ್ಯಪ್ರಾಪ್ತಿಯಾಗಬಹುದೆಂದು ಇನ್ನೂ ನಿಮಗೆ ಭರವಸೆ ಇದೆಯೆ,' ಎಂದು ನಮ್ಮಲ್ಲಿ ಒಬ್ಬರು ಕೇಳಿದರು. ನಿಃಸಂಶಯ, ಎಂದು ತಟ್ಟನೆ ಅವರು ಉತ್ತರ ಕೊಟ್ಟರು.

ಅವರು ಕಲ್ಪಿಸಿದ ಸ್ವರಾಜ್ಯವು ಅಹಿಂಸೆಯಿಂದಲೆ ಸ್ಥಾಪಿತವಾಗಬಲ್ಲದು. ಹಿಂಸೆಯಿಂದ ಪ್ರಾಪ್ತವಾದ ಸ್ವರಾಜ್ಯವು ಅವರು ಯಾವುದಕ್ಕೆ ಸ್ವರಾಜ್ಯ ವೆನ್ನುತಿದ್ದರೊ ಅದಕ್ಕೆ ಸಾಟಿಯಾಗದು. ಆ ಪ್ರಶ್ನೆಕಾರನು ಅಷ್ಟಕ್ಕೆ ಬಿಡದೆ, 'ಅಹಿಂಸಾಮಾರ್ಗದಿಂದ ಈ ವರೆಗೆ ಯಾವುದಾದರೂ ದೇಶವು ಸ್ವರಾಜ್ಯ ವನ್ನು ಗಳಿಸಿದ್ದುಂಟೆ?' ಎಂದು ಮತ್ತೆ ಕೇಳಿದನು. ಗಾಂಧೀಜಿಯವರು ಸ್ವಲ್ಪ ಭಾವನಾಯುಕ್ತ ಧ್ವನಿಯಿಂದ ಅಂದದ್ದು, 'ಹಳೆ ಇತಿಹಾಸಗಳ ಕಂತೆಯತ್ತ ಏಕೆ ನೋಡುವಿರಿ? ನಾವು ಹೊಸ ಇತಿಹಾಸವನ್ನು ಬರೆಯು ತಿಲ್ಲವೆ? ಹಳೆಯ ಉದಾಹರಣೆಗಳೆ ನಿಮಗೆ ಬೇಕಿದ್ದರೆ ಹರಿಶ್ಚಂದ್ರ, ಪ್ರಲ್ಹಾದ ಮುಂತಾದವರತ್ತ ನೋಡಿರಿ. ಶುದ್ಧ ಅಹಿಂಸೆಯ ವಿಜಯವು ನಿಮಗೆ ಒಡೆದು ಕಾಣುವದು.'

'ಆ ಉದಾಹರಣೆಗಳು ಐತಿಹಾಸಿಕವಲ್ಲವಲ್ಲ. ಅವು ಪೌರಾಣಿಕ ಕಥೆ ಗಳು,' ಎಂದು ಪ್ರಶ್ನೆಕಾರನು ಮತ್ತೆ ನುಡಿದನು.

'ನನ್ನ ಮಟ್ಟಿಗೆ ಅನೇಕ ಐತಿಹಾಸಿಕ ಹೊತ್ತಿಗೆಗಳಿಗಿಂತ ಆ ಕಥೆ ಗಳಲ್ಲಿ ಹೆಚ್ಚು ಸತ್ಯವು ಅಡಕವಾಗಿದೆ,' ಎಂದರು ಗಾಂಧೀಜಿ.

ಇಷ್ಟರಲ್ಲಿ ನಾನು ಮುಂದಾಗಿ ಅಂದದ್ದು, 'ಹರಿಶ್ಚಂದ್ರನ ವಿಷಯದಲ್ಲಿ

ಶುದ್ಧ ಅಹಿಂಸೆ ಗೆದ್ದಿತೆಂಬುದನ್ನು ನಾವು ಒಪ್ಪಬಹುದು. ಆದರೆ ಪ್ರಲ್ಹಾದನ ವಿಷಯದಲ್ಲಿ ಆ ತರಳ ಭಕ್ತನ ಅಹಿಂಸೆ ಗೆದೆಯಿತೊ ನಾರಸಿಂಹನ ಹಿಂಸೆ ಗೆದೆಯಿತೊ ಹೇಳುವದು ಕಠಿಣವಲ್ಲವೆ? ಸಂಕಟಕ್ಕೀಡಾದ ಅಹಿಂಸಾ ಮೂರ್ತಿ ಪ್ರಲ್ಹಾದನನ್ನು ಬಿಡಿಸಲು ನಾರಸಿಂಹನು ಅವತರಿಸಿ ಹಿಂಸಾಮೂರ್ತಿ ಹಿರಣ್ಯಕಶಿಪುವನ್ನು ತೊಡೆದುಹಾಕಲಿಲ್ಲವೆ?'

ಇಂಥ ತರ್ಕಕೋಟಿಗಳಿಗೆ ಗಾಂಧೀಜಿಯವರು ಸೊಪ್ಪು ಹಾಕುವವರಲ್ಲ. ಅಹಿಂಸೆಯಲ್ಲಿಯ ಅವರ ಶ್ರದ್ಧೆ ಅತ್ಯಂತ ಆಳವಾದುದೂ ಅಚಲವೂ ಆಗಿತ್ತು. ಅವರು ಅಂತಃಕರಣಸರ್ವಸ್ವದಿಂದ ಅಹಿಂಸೆಯ ಆಚರಣೆ ಮಾಡುತಿದ್ದರು. ಅವರು ಅಂದದ್ದು, 'ಚನ್ನಾಗಿ ಆ ಕತೆಯನ್ನೋದಿರಿ. ಹಿರಣ್ಯಕಶಿಪು ತೀರಿಕೊಂಡದ್ದು ಕೇವಲ ತೋರಿಕೆಗೆ ಮಾತ್ರ. ಅವನಿಗೆ ಜೀವದಾನವು ಕೊಡಲಾಯಿತು ಹಾಗೂ ಕೊನೆಗೆ ಅವನು ಮುಕ್ತಿಯನ್ನೈದಿದನು. ಅಂದಬಳಿಕ ನಾರಸಿಂಹನ ಹಿಂಸೆ ಕೇವಲ ಆಭಾಸ ಮಾತ್ರ.'

೮. ಗಾಂಧೀ ಸೇವಾಸಂಘ

೧೯೩೨-೩೫ ರ ವರೆಗಿನ ಕಾಲವೆಂದರೆ ಕಾಂಗ್ರೆಸ್ ಹಾಗೂ ಬ್ರಿಟಿಶ್ ಸರಕಾರ ಇವರ ನಡುವೆ ನಡೆದ ಪರಸ್ಪರ ಶಕ್ತಿಮಾಪನದ ಕಾಲವೆನ್ನ ಬಹುದು. ಅಷ್ಟರಲ್ಲಿ ಸರಕಾರದವರು ತಮ್ಮ ದಬ್ಬಾಳಿಕೆಯ ತಂತ್ರವನ್ನು ಚೆನ್ನಾಗಿ ಸಿದ್ಧಪಡಿಸಿದ್ದರು. ೧೯೩೦-೩೧ ರ ಚಳವಳಿಯ ಕಾಲಕ್ಕೆ ಮಾಡ ಲಾರದುದನ್ನು ಹಾಗೂ ಮಾಡದಿದ್ದುದನ್ನು ಅವರು ೧೯೩೨ರಲ್ಲಿ ಮಾಡಿ ಜನಶಕ್ತಿಯನ್ನು ಕುಗ್ಗಿಸಲೆತ್ನಿಸಿದರು. ಕಾಯದೆಭಂಗವು ಸಾರಲಾದೊಡನೆ ೧೯೩೨ರ ಜಾನೆವರಿಯಲ್ಲಿಯೆ ಗಾಂಧೀಜಿ ಹಾಗೂ ಸರದಾರರನ್ನು ಅವರು ಸೆರೆಯಲ್ಲಿಟ್ಟುಬಿಟ್ಟರು.

೧೯೩೩ ರಲ್ಲಿ ಉಪವಾಸ ಹೂಡಿದ ಮೂಲಕ ಗಾಂಧೀಜಿಯವರು ಬಿಡ ಲ್ಪಟ್ಟರು. ಆದರೆ ಅವರು ತಾವಾಗಿ ಶಪಥಮಾಡಿ ಒಂದು ವರುಷದ ಮಟ್ಟಿಗೆ ರಾಜಕಾರಣದ ಸನ್ಯಾಸಮಾಡಿದರು. ಆ ವರುಷ ಹರಿಜನರಿಗಾಗಿಯೆ ಆಸೇತು ಹಿಮಾಚಲ ಸಂಚಾರವನ್ನು ಕೈಕೊಂಡರು. ಆಗ ನಾವು ನಮ್ಮ ರೀತಿನೀತಿಗಳಿಂದ ಕಾಂಗ್ರೆಸ್ಸನ್ನು ಪೂರ್ಣ ಹತ್ತಿಕ್ಕಿ ಬಿಟ್ಟಿರುವೆವು, ಎಂಬ ದರ್ಪದ ಮಾತು ಸರಕಾರೀ ಪಾಳ್ಯದಲ್ಲಿ ನಡೆಯಲಾರಂಭಿಸಿತು. ಲಾರ್ಡ ವಿಲಿಂಗಡನ್ನ ರಿಗೆ ಅದೊಂದು ದೊಡ್ಡ ಹೆಮ್ಮೆಯ ಮಾತಾಗಿ ಬಿಟ್ಟಿತು. ಆದುದರಿಂದ ಅವರು ೧೯೩೫ರಲ್ಲಿ ಕೇಂದ್ರ ಶಾಸನ ಸಭೆಯ ಚುನಾವಣೆಗಳನ್ನು ಹೂಡ ತೊಡಗಿದರು. ಆದರೆ ಸಾಮಾನ್ಯ ಸ್ಥಳಗಳಲ್ಲಿ ನೂರಕ್ಕೆ ಎಂಬತ್ತೆಂಟರಷ್ಟು ಸ್ಥಳಗಳನ್ನು ಕಾಂಗ್ರೆಸ್ಸು ಆಕ್ರಮಿಸಿದ್ದುದನ್ನು ನೋಡಿ ಅವರು ಬೆರಳು ಕಚ್ಚಿ ಕೊಂಡಿರಲಿಕ್ಕೆ ಸಾಕು. ಹತ್ತಿಕ್ಕಲಾಗಿದ್ದರೂ ಕಾಂಗ್ರೆಸ್ಸು ಜೀವಂತವಿತ್ತಲ್ಲದೆ ಲಕ್ಷಾಂತರ ಜನರ ಅಂತಃಕರಣದಲ್ಲಿ ಮನೆಮಾಡಿಕೊಂಡುಬಿಟ್ಟಿತ್ತು.

ಶಾಸನಸಭೆ ಮುಂತಾದ ಚುನಾಯಿತ ಸಂಸ್ಥೆಗಳಲ್ಲಿ ಮಾಡುವ ಕೆಲಸ ಕ್ಕಿಂತ ಗಾಂಧೀಜಿಯವರು ಹೊರಗಿನ ಕೆಲಸಕ್ಕೆ ಹೆಚ್ಚು ಮಹತ್ವವನ್ನು ಕೊಡುತಿದ್ದರು. ಆದರೂ ಶಾಸನಸಭೆಗಳಲ್ಲಿ ಸೇರಿ ಕೆಲಸ ಮಾಡುವ ಕಾರ್ಯ

ಕ್ರಮವು ಇನ್ನು ಬಿಡಲಾರದ್ದು ಎಂಬುದನ್ನು ಅವರು ಪೂರ್ಣ ಅರಿತಿದ್ದರು. ಅದರತ್ತ ದುರ್ಲಕ್ಷ ಮಾಡಿ ನಡೆಯುವಂತಿರಲಿಲ್ಲ. ೧೯೩೭ ರಲ್ಲಿ ಪ್ರಾಂತಿಕ ಶಾಸನಸಭೆಗಳ ಚುನಾವಣೆಗಳು ನಡೆಯತಕ್ಕವಿದ್ದವು. ವಿಶೇಷವಾದ ಚರ್ಚೆ, ವಾದವಿವಾದ ಮುಂತಾದವು ನಡೆದು ಕೊನೆಗೆ ಗಾಂಧೀಜಿಯುವರು ಅವುಗಳಲ್ಲಿ ಕಾಂಗ್ರೆಸ್ಸಿಗರು ಭಾಗವಹಿಸಬಹುದು ಎಂದು ತಮ್ಮ ಒಪ್ಪಿಗೆ ಕೊಟ್ಟರು. ೧೯೩೫ ರ ಗವ್ಹರ್ನಮೆಂಟ ಆಫ್ ಇಂಡಿಯಾ ಆ್ಯಕ್ಟಿನ ಮೇರೆಗೆ ಆದ ಮೂರು ಕೋಟಿ ಮತದಾರರನ್ನು ದುರ್ಲಕ್ಷಿಸುವದು ವಿಹಿತವಾಗಲಾರದು, ಅವರನ್ನು ಕಾಂಗ್ರೆಸ್ಸಿನ ಕಕ್ಷೆಯಲ್ಲಿ ತರುವುದು ಅವಶ್ಯ, ಎಂದು ಎಲ್ಲರ ಅಭಿಪ್ರಾಯವಾಯಿತು. ನನಗೆ ಗೊತ್ತಿದ್ದಮಟ್ಟಿಗೆ ರಾಜಾಜಿಯವರೆ ಈ ಕೋಟಿ ಕ್ರಮವನ್ನು ಗಾಂಧೀಜಿಯುವರೆದುರು ಮಂಡಿಸಿದರು. ಅದು ಅವರಿಗೆ ನಿರ್ಣಾಯಕವೆನಿಸಿತು.

ಶಾಸನಸಭೆಗಳ ಉಪಯೋಗವನ್ನು ಮಾಡಿಕೊಳ್ಳಲು ಗಾಂಧೀಜಿಯುವರು ಒಪ್ಪಿದರೂ ಹೊರಗಿದ್ದು ಮಾಡತಕ್ಕ ರಚನಾತ್ಮಕ ಕಾರ್ಯಕ್ರಮದ ಮೇಲೆಯೆ ಅವರ ಹೆಚ್ಚಿನ ಭಾರವಿತ್ತು. ಆದುದರಿಂದ ಶೇಟ ಜಮುನಾಲಾಲಜಿ ಬಜಾಜರ ವಿಶೇಷ ಪ್ರಯತ್ನದ ಮೂಲಕ ಗಾಂಧೀ ಸೇವಾಸಂಘ ಎಂಬ ಒಂದು ಸಂಸ್ಥೆ ಸಂಘಟಿಸಲಾಯಿತು. ಒಳ್ಳೆ ನುರಿತ ಕಾರ್ಯಕರ್ತರೆಲ್ಲ ಅದರ ಸಭಾಸದರಾದರು. ಆ ಸಂಘಟನೆಗೆ ಒಂದು ವ್ಯವಸ್ಥಿತ ಸ್ವರೂಪವನ್ನು ಕೊಡಬೇಕೆಂಬ ಬಗ್ಗೆ ೧೯೩೫ ರಲ್ಲಿ ಚರ್ಚೆ ನಡೆಯಿತು. ಬೇರೆ ಬೇರೆ ಪ್ರಾಂತಗಳಲ್ಲಿ ಪ್ರತಿವರುಷ ಸಮ್ಮೇಲನಗಳು ನಡೆಯಬೇಕು, ಒಂದು ವಾರದ ವರೆಗೆ ಕಾರ್ಯಕರ್ತರೆಲ್ಲ ಒತ್ತಟ್ಟಿಗಿರಬೇಕು, ವಿಚಾರವಿನಿಮಯ ಮಾಡಬೇಕು, ಎಂಬ ಮುಂತಾದ ಮಾತುಗಳು ಗೊತ್ತಾದವು.

ಸತ್ಯಾಗ್ರಹ ಹಾಗೂ ಅಹಿಂಸೆ ಇವುಗಳ ವ್ಯಾಖ್ಯೆಗಳನ್ನು ಕುರಿತು ಸೇವಾಗ್ರಾಮದಲ್ಲಿ ಒಮ್ಮೆ ಒಳ್ಳೆ ರಸವತ್ತಾದ ಚರ್ಚೆ ನಡೆಯಿತು. ಸತ್ಯಾಗ್ರಹದ ವ್ಯಾಖ್ಯೆ ಮಾಡಲು ಗಾಂಧೀಜಿಯುವರು ಒಪ್ಪದಾದರು. ಅದು ನಿತ್ಯ ವಿಕಾಸ ಹೊಂದುವ ವಸ್ತುವಾದುದರಿಂದ ಅದರ ವ್ಯಾಖ್ಯೆ ಮಾಡಲಾರೆ, ಎಂದರು. ಅಹಿಂಸೆಯು ಮೂಲಕ ಅತ್ಯುತ್ಕಟವಾದ ಸತ್ಯಾನ್ವೇಷಣೆಯೆ ಸತ್ಯಾಗ್ರಹ, ಎಂದು ನಾವು ಹಲವರು ಸೂಚಿಸಿದೆವು. ಆದರೆ ಅದರಿಂದ ಗಾಂಧೀಜಿಯು

ವರಿಗೆ ಸಮಾಧಾನವೆನಿಸಲಿಲ್ಲ. ಅದು ಬಹಳ ಅಸ್ಪಷ್ಟವಾದ ವ್ಯಾಖ್ಯೆ, ಎಂದರ ವರು. ಅಹಿಂಸೆಯ ಆಚಾರದ ಪ್ರತ್ಯಕ್ಷ ರೂಪಗಳನ್ನೊಳಗೊಳ್ಳದ ವ್ಯಾಖ್ಯೆ ಯನ್ನು ಒಪ್ಪಲು ಅವರು ಸಿದ್ಧರಿರಲಿಲ್ಲ. ಅವೆಲ್ಲ ಸಂಘದ ಉದ್ದೇಶಗಳಲ್ಲಿ ಅಡಕವಾಗಬೇಕೆಂದು ಅವರ ಮತ. ಕೊನೆಗೆ ಅವರ ಮಾತೇ ನಡೆಯಿತು. ಅದು ಯಾವಾಗಲೂ ಕಟ್ಟಿಟ್ಟ ಮಾತು. ಕೊನೆಗೆ ಸತ್ಯಾಗ್ರಹವೆಂದರೆ, ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯೆ, ಅಸಂಗ್ರಹ, ಶರೀರಶ್ರಮ, ಅಸ್ವಾದ, ಭಯವರ್ಜನ, ಸರ್ವಧರ್ಮ ಸಮಾನತ್ವ, ಸ್ವದೇಶಿ ಮತ್ತು ಸ್ಪರ್ಶಭಾವನೆ ಈ ವ್ರತಗಳು. ಇವೇ ಸಂಘದ ಉದ್ದೇಶಗಳು ಎಂದು ನಿರ್ಣಯಿಸ ಲಾಯಿತು.

‘ಅಹಿಂಸಾ’ ಶಬ್ದದ ಮಟ್ಟಿಗೆ, ಅದು ನಿಷೇಧಾತ್ಮಕವಿರುವದು ಎಂದು ನಾನು ಸೂಚಿಸಿದೆನು. ಅದರ ಬದಲು ‘ಪ್ರೇಮ’ ಎಂಬ ಶಬ್ದವನ್ನುಪ ಯೋಗಿಸುವದು ವಿಹಿತ ಎಂದೆನು. ಮೊದಮೊದಲು ನನ್ನ ಮಾತಿಗೆ ಅವರು ಒಪ್ಪಿದಂತೆ ಮಾಡಿದರು. ಆದರೆ ಅದೆಲ್ಲ ಮುಂದೆ ಅದನ್ನು ಪೂರಾ ನಿರಾ-ಕರಿಸುವದಕ್ಕಾಗಿಯೆ! ‘ಪ್ರೇಮ’ ಎಂಬ ಶಬ್ದವು ಒಳ್ಳೆಯದು, ಸರಿಯಾ ದುದು. ಆದರೆ ಯೋಗರೂಢಿಯ ಮೂಲಕ ಅದು ಕಾಮವಾಸನೆಯೊಡನೆ ಸಂಬದ್ಧವಾಗಿರುವದು, ಎಂದರು. ಮೇಲಾಗಿ ನಮ್ಮ ಪಶುಸ್ವಭಾವವೆಲ್ಲ ಹಿಂಸಾತ್ಮಕವಿರುವುದರಿಂದ ನಾವು ನಮ್ಮ ಸಾಧನೆಯನ್ನು, ಆ ಹಿಂಸೆಯನ್ನು ನಿರಾಕರಿಸಿಯೆ ಅಥವಾ ತ್ಯಜಿಸಿಯೆ ಅರ್ಥಾತ್ ಅಹಿಂಸೆಯ ಮೂಲಕವೆ ಪ್ರಾರಂಭಿಸಬೇಕಾಗುವುದು. ತೋರಿಕೆಗೆ ಅಹಿಂಸೆಯು ನಿಷೇಧಾತ್ಮಕವಿದ್ದರೂ ಪರಿಣಾಮತಃ ಅದು ವಿಧಾಯಕವೆ ಇರುವದು, ಎಂದು ಅವರು ಪ್ರತಿಪಾದಿಸಿ ದರು. ಅವರು ಮೂವತ್ತು ವರುಷ ಸತತ ಅಹಿಂಸಾ ಶಬ್ದವನ್ನೆ ಉಪ ಯೋಗಿಸುತ್ತ ಬಂದಿದ್ದರು. ಆದುದರಿಂದ ಆ ಶಬ್ದದೊಡನೆ ಅವರ ಅನೇಕ ಕಲ್ಪನೆಗಳು ಹಾಸುಹೊಕ್ಕಿನಂತೆ ಸೇರಿಕೊಂಡಿದ್ದವು. ಇದಲ್ಲದೆ ಅವರ ಅಹಿಂಸೆಯ ಸತತ ಏಕನಿಷ್ಠ ಆಚಾರದ ಮೂಲಕ ಆ ಶಬ್ದಕ್ಕೊಂದು ಪಾವಿತ್ರ್ಯ ಪ್ರತಿಷ್ಠೆಗಳು ಬಂದುಬಿಟ್ಟಿದ್ದವು.

ಗಾಂಧೀಜಿಯವರ ಈ ಮಂಡನವನ್ನು ಖಂಡಿಸುವ ಬಗೆ ಯಾವುದು? ಆದರೂ ೧೯೩೪ ರಲ್ಲಿ ಮಾರ್ಪಾಟಾದ ಗಾಂಧೀ ಸೇವಾಸಂಘದ ಘಟನೆಯಲ್ಲಿ

'ಅಹಿಂಸೆ' ಯ ತರುವಾಯ ಕಂಸಿನಲ್ಲಿ 'ಇದರಲ್ಲಿ ಪ್ರೇಮ ಒಳಗೊಂಡಿದೆ' ಎಂಬ ಶಬ್ದಗಳಿಗೆ ಸ್ಥಾನ ಕೊಡಲಾಯಿತು.

ಗಾಂಧೀಸೇವಾಸಂಘದ ಮೊದಲನೆ ಸಮ್ಮೇಲನ ಮಹಾರಾಷ್ಟ್ರದ ಒಂದು ಖಾದೀ ಕೇಂದ್ರವಾದ ಸಾವಲಿ ಎಂಬಲ್ಲಿ ೧೯೩೬ ರಲ್ಲಿ ಜರುಗಿತು. ಅದು ಒಳ್ಳೆ ಯಶಸ್ವಿಯಾಯಿತು. ಇಡೀ ಹಿಂದುಸ್ತಾನದ ಮೂಲೆಮೂಲೆಗಳಿಂದ ಬಂದ ಕಾರ್ಯಕರ್ತರಿಗೆ ಅದೊಂದು ಬಹುಮೂಲ್ಯವಾದ ಅನುಭವವೆನಿಸಿತು. ಅರ್ಥಾತ್ ಗಾಂಧೀಜಿಯವರು ಏಳು ದಿನ ಅಲ್ಲಿಯೆ ತಂಗಿದ್ದರು. ದಿನಾಲು ಒಂದು ಗಂಟೆಯಷ್ಟು ಕಾಲ ಅವರು ಎಲ್ಲರೊಡನೆ ಪ್ರಶ್ನೋತ್ತರಗಳಲ್ಲಿ ಕಳೆಯು ತಿದ್ದರು. ಅದರಿಂದ ಕಾರ್ಯಕರ್ತರಿಗೆ ಒಳ್ಳೆ ಲಾಭವಾಗುತಿತ್ತು.

ಗಾಂಧೀ ಸೇವಾಸಂಘಕ್ಕಾಗಿ ಹಣ ಕೂಡಿಸಿಟ್ಟು ಅದರ ಬಡ್ಡಿಯೊಳಗಿಂದ ಸಂಘದ ಕಾರ್ಯವನ್ನು ನಡೆಸಬೇಕೆಂಬ ವಿಚಾರವು ಮುಂಡಿಸಲ್ಪಟ್ಟೊಡನೆ ಗಾಂಧೀಜಿಯವರು ಅದಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಈ ರೀತಿ ಧನಸಂಗ್ರಹ ಮಾಡುವದು ಅವರಿಗೆ ಸಮ್ಮತವಿರಲಿಲ್ಲ. ಜನರ ವಿಶ್ವಾಸ ಹಾಗೂ ಸದ್ಭಾವನೆ ಇವೇ ಕಾರ್ಯಕರ್ತರ ಭಂಡವಲು. ಅದರಿಂದಲೆ ಅವರು ಜೀವಿಸಬೇಕು. ಸಂಘದ ಮಟ್ಟಿಗೆ ವಿಧಾಯಕ ಕಾರ್ಯಕ್ರಮಗಳೆ ಅದರ ಜೀವಜೀವಾಳವಾಗಿರಬೇಕು. ಸತ್ಯ ಅಹಿಂಸೆಗಳು ಅದರ ಉಸಿರಾಗ ಬೇಕು, ಕೇವಲ ತಾತ್ಪೂರ್ತಿಕ ಧೋರಣ ಮಾತ್ರವಲ್ಲ. ಸಾಧ್ಯಸಾಧನಗಳ ಏಕವಾಕ್ಯತೆ ಇದೇ ಸಂಘದ ವಿಶೇಷವು.

ಕಾಂಗ್ರೆಸ್ಸಿನ ವಿಷಯದಲ್ಲಿ ಈ ಮಾತು ಕದಾಚಿತ್ ಅನ್ವಯಿಸಲಿಕ್ಕಿಲ್ಲ. ಆದರೆ ಸಂಘವು ಮಾತ್ರ ಇವುಗಳನ್ನು ಬಿಟ್ಟು ಒಂದರೆಕ್ಷಣ ಸಹ ಬದುಕ ಲಾರದು. ಸಂಘವು ತನ್ನ ತತ್ವಕ್ಕಂಟಿಕೊಂಡು ನಡೆದರೆ ಮಾತ್ರ ಸತ್ಯಾ-ಗ್ರಹದ ಹಾದಿಯನ್ನು ತುಳಿಯಲು ಅದು ಸಮರ್ಥವಾಗಬಲ್ಲದು. ವಿಧಾಯಕ ಕಾರ್ಯದ ಕೊನೆಯ ಮೆಟ್ಟಲದು. ಇದರಿಂದಲೆ ಅದಕ್ಕೆ ಅಮೋಘವಾದ ಅಜೇಯ ಶಕ್ತಿಯುಂಟಾಗುವದು. ಈ ರೀತಿ ಸಂಘವು ಒಂದು ಆದರ್ಶ ಸಂಸ್ಥೆಯಾಗಬೇಕೆಂದು ಅವರ ಅಭಿಮತವಿತ್ತು.

ಹಳ್ಳಿಗಳಲ್ಲಿ ಮಾಡತಕ್ಕ ವಿಧಾಯಕ ಸೇವಾಕಾರ್ಯವೆ ಮುಖ್ಯ, ಶಾಸನ ಸಭೆಗಳಲ್ಲಿಯ ಕಾರ್ಯ ಅದಕ್ಕೆ ಪೋಷಕ ರೂಪ, ಎಂದು ಗಾಂಧೀಜಿಯವರ

ಅಭಿಪ್ರಾಯವಿತ್ತು. ಯಾವದೇ ಬಗೆಯ ಮೇಲಾಟ ಇಲ್ಲವೆ ತಿಕ್ಕಾಟ ನಡೆಯುವಂತಿದ್ದರೆ ಸಂಘದ ಸದಸ್ಯರು ಕಾಂಗ್ರೆಸ್ಸಿನ ಇಲ್ಲವೆ ಶಾಸನಸಭೆಗಳ ಚುನಾವಣಿಗಳಲ್ಲಿ ಎಂದಿಗೂ ಭಾಗವಹಿಸಕೂಡದೆಂದು ಅವರು ಹೇಳುತಿದ್ದರು.

೧೯೩೭ ರಲ್ಲಿ ಗಾಂಧೀ ಸೇವಾಸಂಘವು ಹುದಲಿ ಗ್ರಾಮದಲ್ಲಿ ಮತ್ತೆ ಕೂಡಿತು. ಆ ಕೂಟದಲ್ಲಿ ಅನೇಕ ಮಹತ್ವದ ನಿರ್ಣಯಗಳು ಮಾಡಲಾದವು. ಕಾಂಗ್ರೆಸ್ಸಿನ ಹಾಗೂ ಇತರ ಚುನಾವಣಿಗಳಲ್ಲಿ ಸಂಘದ ಸದಸ್ಯರು ಭಾಗವಹಿಸಬೇಕೊ ಬೇಡವೊ ಎಂಬ ಪ್ರಶ್ನೆಯ ಸಾಂಗೋಪಾಂಗ ಚರ್ಚೆ ಅಲ್ಲಿ ನಡೆಯಿತು. ಬಹಳ ವೇಳೆ ಖಂಡನಮಂಡನವಾದ ಬಳಿಕ ವೈಯಕ್ತಿಕವಾಗಿ ಭಾಗವಹಿಸಬಹುದು ಎಂಬ ನಿರ್ಣಯವಾಯಿತು.

ಪ್ರಾಂತಗಳಲ್ಲಿ ಮಂತ್ರಿಪದವನ್ನು ಸ್ವೀಕರಿಸಬೇಕೊ ಇಲ್ಲವೊ ಎಂಬ ಪ್ರಶ್ನೆ ಆಗ ಮುಖ್ಯವಾಗಿತ್ತು. ಮಂತ್ರಿಗಳ ನಿತ್ಯಕಾರ್ಯದಲ್ಲಿ ಗವ್ಹರ್ನರರು ಯಾವದೇ ರೀತಿ ಕೈಹಾಕುವದಿಲ್ಲ, ಎಂಬ ಸ್ಪಷ್ಟವಾದ ಆಶ್ವಾಸನವು ದೊರೆತರೆ ಮಾತ್ರ ಕಾಂಗ್ರೆಸ್ಸಿನವರು ಅಧಿಕಾರಗ್ರಹಣ ಮಾಡುವದು ಲೇಸು ಇಲ್ಲದಿದ್ದರೆ ಇಲ್ಲ, ಎಂಬ ನಿರ್ಣಯಕ್ಕೆ ಗಾಂಧೀಜಿಯವರು ಬಂದಿದ್ದರು. ಮೂರು ತಿಂಗಳು ಈ ವಿಷಯದ ಚರ್ಚೆ ನಡೆದೇ ಇತ್ತು. ಕೊನೆಗೆ ಗಾಂಧೀಜಿಯವರು ಸೂಚಿಸಿದ ಮೇಲಿನ ಮಾರ್ಗವು ಸ್ವೀಕರಿಸಲಾಯಿತು. ಗವ್ಹರ್ನರರು ಆಯಾ ಪ್ರಾಂತದ ಮುಖ್ಯ ಪ್ರಧಾನರಿಗೆ, ತಾವು ಆ ಬಗೆಯ ಆಶ್ವಾಸನ ಕೊಟ್ಟು ಕಾಂಗ್ರೆಸ್ ಮಂತ್ರಿಮಂಡಳಗಳನ್ನು ಬರಮಾಡಿಕೊಂಡರು. ಈ ರೀತಿ, ಕೇವಲ ಹೆಸರಿನ ಅಧಿಕಾರವನ್ನು ಗ್ರಹಿಸಲು, ಇಲ್ಲವೆ ತಮ್ಮ ಕಾರಭಾರದಲ್ಲಿ ಇಲ್ಲದ ಸಲ್ಲದ ಆತಂಕಗಳನ್ನೊಡ್ಡಗೊಡಲು ಕಾಂಗ್ರೆಸ್ಸು ಸರ್ವಥಾ ಸಿದ್ಧವಿಲ್ಲ ಎಂಬುದನ್ನು ಅದು ಸ್ಪಷ್ಟಗೊಳಿಸಿತು.

ಗಾಂಧೀಜಿಯವರು ಹುದಲಿಯಲ್ಲಿದ್ದ ಕೊನೆಯ ದಿನ ನಾವೊಂದು ದೊಡ್ಡ ಜಾಹೀರಸಭೆಯನ್ನು ಏರ್ಪಡಿಸಿದ್ದೆವು. ಆದರೆ ಜನರ ಗದ್ದಲದ ಮೂಲಕ ಸಭೆ ಅಷ್ಟೊಂದು ಯಶಸ್ವಿಯಾಗಲಿಲ್ಲ. ಮರುದಿನವೆ ಗಾಂಧೀಜಿಯವರು ಹೋಗಿಬಿಡತಕ್ಕವರಿದ್ದರು. ನಾನು ರಾತ್ರಿ ಹತ್ತುಗಂಟೆಗೆ ಅವರ ಕೋಣೆಗೆ ಹೋದೆನು. ಅವರು ತಾವೇ ಕೋಣೆಯನ್ನು ಸ್ವಚ್ಛಮಾಡ

ತೊಡಗಿದ್ದರು. ಹಾಗೂ ತಮ್ಮ ಹಾಸಿಗೆ ಹಾಸಲು ಪ್ರಾರಂಭ ಮಾಡಿದ್ದರು. ಅವರ ಕೈಯೊಳಗಿನ ಜಮಖಾನೆಯನ್ನು ಕಸಿದು ನಾನು ಹಾಸಲು ಸಹಾಯ ಮಾಡಿದೆನು. ನನ್ನತ್ತ ನೋಡಿ ಅವರು ನಗಲಾರಂಭಿಸಿದರು. ಹಾಸಿಗೆ ಹಾಸಿ ನಾನು ಅವರ ಆಶೀರ್ವಾದ ಪಡೆದು ಹೊರಟೆನು. ಮರುದಿನ ಸರದಾರ ಪಟೇಲರನ್ನು ಕರಕೊಂಡು ನಾನು ಹುಬ್ಬಳ್ಳಿಗೆ ಹೋಗಬೇಕಿತ್ತು.

ಸಂಘದ ಸಮ್ಮೇಲನವು ಮುಂದೆ ಒಂದೆರಡು ವರುಷ ಹಾಗೆಯೆ ಕೂಡುತಿತ್ತು. ೧೯೩೯ ರಲ್ಲಿ ಅದರ ಕೊನೆಯ ಸಮ್ಮೇಲನವು ಬಂಗಾಲ ಪ್ರಾಂತದ ಮಲಿಕಾಂದಾ ಎಂಬಲ್ಲಿ ನಡೆಯಿತು. ಗಾಂಧೀಜಿಯವರು ಇಲ್ಲವೆ ಅವರ ಅನುಯಾಯಿಗಳು ರಾಜಕೀಯ ಕ್ಷೇತ್ರದಲ್ಲಿ ತಮ್ಮ ಶಕ್ತಿಯನ್ನು ಬೆಳೆಸಲು ಈ ಸಂಘವನ್ನು ಉಪಯೋಗಿಸುತಿರುವರು, ಎಂಬ ಆಪಾದನೆ ಹಲವು ಮುಖಂಡರಿಂದ ಮಾಡಲ್ಪಟ್ಟಿತ್ತು. ಈ ಬಗೆಯ ಆಪಾದನೆ ಗಾಂಧೀಜಿಯವರಿಗೆ ಸಹ್ಯವಿರಲಿಲ್ಲ. ಇದಲ್ಲದೆ ಚುನಾವಣೆಗಳಲ್ಲಿ ಭಾಗವಹಿಸುವಾಗ ಸಂಘದ ಸದಸ್ಯರೆ ತಮ್ಮತಮ್ಮೊಳಗೆ ಪೈಪೋಟಿಯನ್ನು ಮಾಡುವದು ಕಂಡುಬಂದಿತ್ತು. ಇದನೆಲ್ಲ ನೋಡಿ ಸಂಘದ ಉಪಸಂಹಾರ ಮಾಡಬೇಕೆಂದು ಗಾಂಧೀಜಿಯವರು ನಿರ್ಧರಿಸಿದರು. ಈ ನಿರ್ಣಯವು ಯೋಗ್ಯವೆ ಇತ್ತು. ಇಷ್ಟಸಾಧ್ಯವನ್ನು ಸಾಧಿಸದೆ ಇದ್ದ ಸಂಸ್ಥೆಯನ್ನು ಕೊನೆಗಾಣಿಸುವ ಸ್ವಾತಂತ್ರ್ಯವು ಅದರ ಸಂಸ್ಥಾಪಕರಿಗೆ ಇರದೆ ಮತ್ತಿನ್ನಾರಿಗಿರಬೇಕು? ಮುಂದೆ ೧೯೪೮ ರಲ್ಲಿ 'ಕಾಂಗ್ರೆಸ್ಸನ್ನು ಮುಕ್ತಾಯಗೊಳಿಸಿರಿ' ಎಂದು ಹೇಳುವ ಧೈರ್ಯ ಗಾಂಧೀಜಿಯವರಿಗಲ್ಲದೆ ಮತ್ತಾರಿಗೆ ಆಗಬಲ್ಲದು?

೯. ಸತ್ಯಾಗ್ರಹದ ಕಲ್ಪಕ ಶಿಲ್ಪಿ

೧೯೩೭ ರಲ್ಲಿ ಆದ ಪ್ರಾಂತಿಕ ಶಾಸನಸಭೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೂ ಪೂರ್ಣ ಯಶಸ್ಸು ದೊರಕಿತು. ಏಳು ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ಸ್ಥಾಪಿತವಾದವು. ಹಿಂದುಸ್ತಾನದ ಎರಡು ಮೂರಾಂಶ ಭಾಗದಲ್ಲಿ ಕಾಂಗ್ರೆಸ್‌ರಾಜ್ಯವಾಯಿತು. ಆದರೆ ಈ ಮಾತಿಗೆ ಇಪ್ಪತ್ತೇಳು ತಿಂಗಳು ಸಂದುಹೋಗುವಷ್ಟರಲ್ಲಿ ೧೯೩೯ ರ ಸಪ್ತೆಂಬರದಲ್ಲಿ ಮಹಾ ಯುದ್ಧಕ್ಕೆ ಪ್ರಾರಂಭವಾಯಿತು. ಶಾಸನಸಭೆಗಳ ಇಲ್ಲವೆ ಲೋಕನಾಯಕರ ಸಲಹೆಸೂಚನೆಗಳನ್ನು ಕೇಳದೆ ಬ್ರಿಟಿಶ್ ಸರಕಾರವು ದೇಶವನ್ನು ಆ ವಿಶ್ವ-ಮೇಧದಲ್ಲಿ ನೂಕಿಬಿಟ್ಟಿತು. ತಮ್ಮ ಸಮ್ಮತಿಯಿಲ್ಲದೆ ಹೂಡಿದ ಯುದ್ಧದಲ್ಲಿ ಭಾಗವಹಿಸಲು ತಾವು ಬದ್ಧರಲ್ಲ ಎಂದು ಸಾರಿ ಕಾಂಗ್ರೆಸ್ ಮಂತ್ರಿಮಂಡಲಗಳೆಲ್ಲ ರಾಜೀನಾಮೆಯನ್ನಿತ್ತುಬಿಟ್ಟವು.

ಈ ರೀತಿ ದೇಶದಲ್ಲೆಲ್ಲ ಬಿಕ್ಕಟ್ಟುಂಟಾಯಿತು. ಎಂದಿಗೂ ಯುದ್ಧವೆಂಬುದು ಗಾಂಧೀಜಿಯವರಿಗೆ ತೀರ ಅನಿಷ್ಟ, ತ್ಯಾಜ್ಯ. ಯುದ್ಧದಲ್ಲಿ ಭಾಗ ವಹಿಸಿದ ಮುಖ್ಯ ಪಕ್ಷಗಳೆಂದರೆ ಬ್ರಿಟನ್ ಹಾಗೂ ಜರ್ಮನಿ. ಅವರಿಬ್ಬರಲ್ಲಿ ಯಾರ ಬಗ್ಗೆಯೂ ಅವರಿಗೆ ಸಹಾನುಭೂತಿ ಇರಲಿಲ್ಲ. ಆದರೂ ಆ ಇಬ್ಬರಲ್ಲಿ ಬ್ರಿಟಿಶರ ಹಾಗೂ ಅವರ ಪಕ್ಷದ ಕಡೆಗೆ ಅವರ ಮನಸು ಒಂದು ಗುಂಜಿ ತೂಕ ಹೆಚ್ಚು ಒಲಿದಿತ್ತು. ಹೀಗಿದ್ದರೂ ಬ್ರಿಟಿಶರಿಗೆ ನೈತಿಕ ಬೆಂಬಲವನ್ನು ಕೊಡಬಹುದಲ್ಲದೆ ಯಾವದೇ ಬಗೆಯ ಜನ ಧನ ಸಹಾಯವನ್ನು ಮಾಡಲು ಅವರು ಸಿದ್ಧರಿರಲಿಲ್ಲ. ಇಷ್ಟೇ ಅಲ್ಲ, ಅದನ್ನು ಸರಕಾರವು ಬಲಾತ್ಕಾರದಿಂದ ಪಡೆಯಲೆತ್ನಿಸಿದರೆ ಅವರು ವಿರೋಧಿಸಲು ಸಿದ್ಧರಿದ್ದರು. ಇದಕ್ಕೆ ಒಂದು ತಾತ್ವಿಕ ಅಡಚಣೆಯಿತ್ತು. ತಮ್ಮ ವಿರೋಧಿಗಳು ಬಿಕ್ಕಟ್ಟಿನಲ್ಲಿರುವಾಗ ಅವರಿಗೆ ಆತಂಕವನ್ನುಂಟುಮಾಡುವದು ಅವರ ಸತ್ಯಾಗ್ರಹಶೀಲಕ್ಕೆ ಸಲ್ಲದ ಮಾತಾಗಿತ್ತು. ಆದುದರಿಂದ ಈ ಧರ್ಮ ಸಂಕಟದೊಳಗಿಂದ ಪಾರಾಗುವ ಹಾದಿಯನ್ನು ಹುಡುಕಿ ಅವರು ೧೯೪೦ ರ ಅಕ್ಟೋಬರ ತಿಂಗಳಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನು ಸಾರಿದರು.

ಗಾಂಧೀಜಿಯುವರು ತಮ್ಮ ಆತ್ಮಕಥನಕ್ಕೆ 'ಸತ್ಯದ ಪ್ರಯೋಗ' ಎಂಬ ಹೆಸರನ್ನಿಟ್ಟಿರುವರು. ಯಾವದೇ ಪುಸ್ತಕಕ್ಕೆ ಈ ಹೆಸರು ಕೊಡುವುದೆಂದರೆ ಸ್ವಲ್ಪ ವಿಲಕ್ಷಣ ಎಂದು ಹೇಳಬಹುದು. ಅವರ ಜೀವನಚರಿತೆ ಎಂಬುದು ಒಂದು 'ಅಹಿಂಸೆಯ ಪ್ರಯೋಗ' ಇಲ್ಲವೆ 'ಅಹಿಂಸೆಯ ಮೂಲಕ ಸತ್ಯಾನ್ವೇಷಣೆಯ ಪ್ರಯೋಗ' ಎಂದರೆ ಹೆಚ್ಚು ಅನ್ವರ್ಥಕವಾಗಬಲ್ಲದು. ಸತ್ಯ ಹಾಗೂ ಹಿಂಸೆ ಇವು ಗಾಂಧೀಜಿಯವರ ತತ್ವಪ್ರಣಾಲಿಯಲ್ಲಿ ಎಂದೆಂದಿಗೂ ಜೊತೆಯಲ್ಲಿರಲಾರವು. ಹಿಂಸೆಯೊಡನೆ ಯಾವ ಬಗೆಯ ಒಪ್ಪಂದವನ್ನೂ ಅವರು ಮಾಡಿಕೊಳ್ಳುವದು ಸಾಧ್ಯವಿರಲಿಲ್ಲ. ಹಿಂಸೆ ಹಾಗೂ ಗಾಂಧಿ ಎಂದರೆ ಬೆಳಕು ಕತ್ತಲೆಯೆ. ಹಿಂಸೆ ಹಾಗೂ ಅನ್ಯಾಯಗಳನ್ನು ಅಹಿಂಸೆಯ ಮೂಲಕ ಪರಿಸ್ಥಿತಿಗನುಸರಿಸಿ ವಿವಿಧ ರೀತಿಯಿಂದ ವಿರೋಧಿಸುವುದರಲ್ಲಿಯೆ ಅವರ ಜೀವನಸರ್ವಸ್ವವು ಕಳೆಯಲಾಯಿತು. ಕಲಿರಾಜನೊಡನೆ ಅವರು ಹೂಡಿದ ಈ ಹೋರಾಟದೊಳಗಿಂದಲೆ ಸತ್ಯಾಗ್ರಹಶಸ್ತ್ರದ ಹುಟ್ಟು ಆಯಿತು, ಸತ್ಯಾಗ್ರಹ ಕಲೆಯು ರೂಪುಗೊಂಡಿತು. ಪರಿಸ್ಥಿತಿಗನುಗುಣವಾದ ರೀತಿಯಲ್ಲಿ ತಮ್ಮ ಶಸ್ತ್ರವನ್ನು ರೂಪಿಸುವ ಶಕ್ತಿ ಅವರಲ್ಲಿದ್ದ ಮೂಲಕವೆ ಅವರಿಗೆ ಸತ್ಯಾಗ್ರಹದ ಕಲ್ಪಕ—ಶಿಲ್ಪಿಗಳು ಎಂಬ ಅಭಿಧಾನವು ಶೋಭಿಸುವದು.

ಅನೇಕ ಸಾರೆ ಅವರು ತಮಗೆ ಬೆಳಕು ಕಾಣದಾಯಿತೆಂದು ಒಪ್ಪುತಿದ್ದರು. ಕುರುಡನಂತೆ ನಾನು ಅತ್ತಿತ್ತ ಕೈ ಚಾಚುತ್ತ ನಡೆದಿರುವೆ ಎಂದು ಹೇಳುತಿದ್ದರು. ಆಯಾ ಸಮಸ್ಯೆ ಬಿಡಿಸಲು ಯಾವದೊಂದು ಉಚಿತವಾದ ಅಹಿಂಸೋಪಾಯವು ಆಯಾ ಕ್ಷಣಕ್ಕೆ ಅವರಿಗೆ ತೋಚದಾಯಿತು, ಎಂಬುದಿಷ್ಟೆ ಅದರ ಅರ್ಥ. ಆದರೆ ಜಗತ್ತಿನಲ್ಲಿಯ ಪ್ರತಿಯೊಂದು ಸಮಸ್ಯೆ ಬಿಡಿಸಲು ಅಹಿಂಸೋಪಾಯವಿದ್ದೇ ಇದೆ, ಎಂಬ ಅವರ ಅಚಲ ಶ್ರದ್ಧೆ ಎಂದೂ ಕುಂದಲಿಲ್ಲ, ಕದಲಲಿಲ್ಲ. ಆ ಉಪಾಯ ಯಾವದೊಂದು ಕ್ಷಣಕ್ಕೆ ತಮಗೆ ಕಾಣದೆ ಹೋದರೆ ಅದು ತಮ್ಮ ಅಜ್ಞಾನದ ಇಲ್ಲವೆ ದೌರ್ಬಲ್ಯದ ಮೂಲಕ ಹೊರತು ಅಂಥ ಉಪಾಯವೆ ಇಲ್ಲವೆಂದಲ್ಲ, ಎಂದು ಅವರು ಒಡನುಡಿದಿರುವರು.

೧೯೪೦ ರ ಸಂದರ್ಭದಲ್ಲಿ ತಾವು ಹೇಳಿದ ರೀತಿಯಲ್ಲಿಯೆ ಸತ್ಯಾಗ್ರಹಿಗಳು ಸತ್ಯಾಗ್ರಹ ಮಾಡತಕ್ಕದ್ದೆಂದು ಅವರು ವಿಧಿಸಿದ್ದರು. ಮ್ಯಾಜಿಸ್ಟ್ರೇಟರಿಗೆ ಮೊದಲು ತಮ್ಮ ಸತ್ಯಾಗ್ರಹದ ಸ್ಥಲ ಕಾಲಗಳನ್ನು ತಿಳಿಸಬೇಕು. ಬಳಿಕ

'ಬ್ರಿಟಿಶರಿಗೆ ಈ ಯುದ್ಧದಲ್ಲಿ ಜನ ಧನ ಸಹಾಯಮಾಡುವದು ಅನ್ಯಾಯವು. ಯುದ್ಧಮಾತ್ರವನ್ನು ವಿರೋಧಿಸಲು ಅಹಿಂಸೆಯೆ ಎಲ್ಲಕ್ಕೂ ಉತ್ತಮ ಉಪಾಯ,' ಎಂದು ಸಾರಿ ಸಾಂಕೇತಿಕ ಸವಿನಯ ಕಾಯದೇಭಂಗವನ್ನು ಮಾಡಬೇಕೆಂದು ಅವರು ಎಲ್ಲ ಸತ್ಯಾಗ್ರಹಿಗಳಿಗೂ ಆಜ್ಞೆ ಕೊಟ್ಟಿದ್ದರು. ಒಂದೊಪ್ಪತ್ತು ಸತ್ಯಾಗ್ರಹಿಗಳನ್ನು ಸೆರೆ ಹಿಡಿಯದಿದ್ದರೆ ಅವರು ಹಾಗೆಯೆ ಆ ಘೋಷಣೆಯ ಮೂಲಕ ಪ್ರಚಾರಮಾಡುತ್ತ ದಿಲ್ಲಿಗೆ ಸಾಗಬೇಕೆಂದು ಹೇಳಲಾಗಿತ್ತು. ಕಾಂಗ್ರೆಸ್ಸಿನ ಪರವಾಗಿ ಶಾಸನಸಭೆಗಳಿಗೆ ಹಾಗೂ ಇತರ ಮಹತ್ವದ ಪ್ರಾತಿನಿಧಿಕ ಸಂಸ್ಥೆಗಳಿಗೆ ಆರಿಸಿ ಹೋದವರೆಲ್ಲರೂ ಈ ಬಗೆಯ ಸತ್ಯಾಗ್ರಹವನ್ನು ಮಾಡಬೇಕೆಂದು ಅವರು ಅಪ್ಪಣೆ ಕೊಡಿಸಿದ್ದರು. ತಮ್ಮ ಶಿಕ್ಷೆ ಮುಗಿಸಿಕೊಂಡು ಹೊರಗೆ ಬಂದವರೆಲ್ಲ ಮತ್ತೆ ಸತ್ಯಾಗ್ರಹ ಹೂಡತಕ್ಕದ್ದೆಂದು ಅವರ ಆಜ್ಞೆ ಇತ್ತು. ಆಗ ಒಂದೇ ವರುಷದಲ್ಲಿ ಒಬ್ಬರೇ ನಾಲ್ಕು ನಾಲ್ಕು ಸಾರೆ ಸೆರೆಮನೆ ಸೇರಿದ ಉದಾಹರಣೆಗಳಿವೆ.

ಈ ಚಳವಳಿ ಪ್ರಾರಂಭವಾದ ಒಂದೇ ತಿಂಗಳಲ್ಲಿ ಅಂದರೆ ೧೯೪೦ ರ ನೊವೆಂಬರದಲ್ಲಿ ನಮ್ಮ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರೊಡನೆ ನಾನು ವರ್ಧಾಕ್ಕೆ ಹೋದೆನು. ವೈಯಕ್ತಿಕ ಸತ್ಯಾಗ್ರಹದ ತಂತ್ರವನ್ನು ಹೆಚ್ಚಾಗಿ ತಿಳಿದುಕೊಳ್ಳುವುದೇ ನನ್ನ ಉದ್ದೇಶವಾಗಿತ್ತು. ಇತರ ಒಂದೆರಡು ಪ್ರಾಂತದವರೂ ಆಗ ಅಲ್ಲಿಗೆ ಬಂದಿದ್ದರು.

ಈ ಚಳವಳಿಯನ್ನು ಪ್ರಾರಂಭಿಸುವ ಪೂರ್ವದಲ್ಲಿ ಗಾಂಧೀಜಿಯವರು ಆಗಿನ ಗವ್ಹರ್ನರ ಜನರಲ್ಲರಾದ ಲಾರ್ಡ ಲಿನ್‌ಲಿಥ್‌ಗೋರವರೊಡನೆ ಕೆಲವೊಂದು ಪತ್ರವ್ಯವಹಾರವನ್ನು ಮಾಡಿದ್ದರು. ವ್ಯಕ್ತಿಗಳು ತಮ್ಮಷ್ಟಕ್ಕೆ ತಾವೇ ಯುದ್ಧಪ್ರಯತ್ನಕ್ಕೆ ಸಹಾಯ ಮಾಡದೆ ಹೋಗಬಹುದು, ಎಂಬುದಕ್ಕೆ ಅವರು ಒಪ್ಪಿದ್ದರು. ಅಂಥವರು ಪ್ರಚಾರಕಾರ್ಯವನ್ನು ಕೈಕೊಳ್ಳಕೂಡದೆಂದು ಅವರು ಪ್ರತಿಪಾದಿಸುತಿದ್ದರು. ಆದರೆ ಆ ಹಕ್ಕನ್ನು ವ್ಯಕ್ತಿಗಳಿಗೆ ಹಾಗೂ ಕಾಂಗ್ರೆಸ್ಸಿಗೆ ಕೊಡಲಿಕ್ಕೆಬೇಕೆಂದು ಗಾಂಧೀಜಿಯವರ ಹಟ. ಕಾಂಗ್ರೆಸ್ಸು ಅಯಕಟ್ಟಿನ ವೇಳೆಯಲ್ಲಿ ಯುದ್ಧವನ್ನು ಕುರಿತು ತನ್ನ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಗೊಳಿಸದೆ ಹೋದರೆ ಅದು ಆತ್ಮಘಾತ ಮಾಡಿಕೊಂಡಂತೆ ಎಂದು ಗಾಂಧೀಜಿಯವರ ಅಭಿಪ್ರಾಯವಿತ್ತು.

ನಾವು ಅವರನ್ನು ಆ ದಿನ ಕಂಡಾಗ ಸೇವಾಗ್ರಾಮದಲ್ಲಿ ಒಂದು ಗುಡಿಸಿಲಿನಲ್ಲಿ ಅವರು ನೂಲುತ್ತ ಕುಳಿತಿದ್ದರು. ಕರ್ನಾಟಕದ ಬಗ್ಗೆ ಅವರ ಅಂತಃಕರಣದಲ್ಲಿ ಯಾವಾಗಲೂ ಒಂದು ಬಗೆಯ ಸ್ನೇಹವಿತ್ತು. ಅವರು ನಮ್ಮನ್ನು ಪ್ರೀತಿಯಿಂದ ಬರಮಾಡಿಕೊಂಡರು. ಶ್ರೀ. ಕೃಷ್ಣಾಬಾಯಿ ಎಂಬ ಮಹಿಳೆ ನಮ್ಮ ಪ್ರಾಂತದ ಉಪಾಧ್ಯಕ್ಷೆ ಇದ್ದುದಕ್ಕೆ ಅವರಿಗೆ ಸಂತೋಷವಾಯಿತು. ನಡೆದುದನ್ನು ಬರೆಕೊಳ್ಳುತ್ತ ಮಹಾದೇವಭಾಯಿ ಹತ್ತರವೆ ಕುಳಿತಿದ್ದರು.

ನಮ್ಮ ಪ್ರಾಂತದ ಸತ್ಯಾಗ್ರಹಿಗಳ ಪ್ರಥಮ ಯಾದಿಯನ್ನು ನಾವು ಅವರಿಗೆ ಒಪ್ಪಿಸಿ ಮುಂದಿನ ಕ್ರಮದ ಸ್ಪಷ್ಟ ವಿವರಣೆಯನ್ನು ಕೇಳಿದೆವು. ನಮ್ಮ ಮಾತು ಬೆಳೆಯುತ್ತ ಹೋದಹಾಗೆಲ್ಲ ಅವರಿಗೆ ಹಲವು ಪ್ರಶ್ನೆಗಳನ್ನು ಕೇಳಿದೆವು. ನಿಮ್ಮನ್ನು ಹಿಡಿದುಬಿಟ್ಟರೆ ಮುಂದೇನು ಎಂಬುದೊಂದು ನಮ್ಮ ಪ್ರಶ್ನೆಯಾಗಿತ್ತು. ಕಾಂಗ್ರೆಸ್ಸಿನವರನ್ನು ಹತೋಟಿಯಲ್ಲಿಟ್ಟುಕೊಳ್ಳಲು ತಮಗೆ ಸಹಾಯವಾಗಬಹುದೆಂಬ ಉದ್ದೇಶದಿಂದಲೆ ಸರಕಾರದವರು ತಮ್ಮನ್ನು ಸೆರೆ ಹಿಡಿಯಲಿಕ್ಕಿಲ್ಲ ಎಂದು ಅವರು ಭಾವಿಸಿದ್ದರು. ಆ ಮಾತು ನಿಜವಾದುದು. ಯುದ್ಧಪ್ರಯತ್ನವನ್ನು ತಡೆಯುವ ದೃಷ್ಟಿಯಿಂದ ಈ ನಮ್ಮ ಚಳವಳಿಯು ಪರಿಣಾಮಕಾರಕವಾಗಲಾರದು, ಎಂದೆವು. ಯುದ್ಧ ಪ್ರಯತ್ನಕ್ಕೆ ಪ್ರತ್ಯಕ್ಷ ತಡೆಯುಂಟಾಗುವದೊ ಇಲ್ಲವೊ ಎಂಬ ಪ್ರಶ್ನೆಯೆ ಇಲ್ಲ. ಯಾಕಂದರೆ ಇದು ನೈತಿಕ ನಿಷೇಧದ ದೃಷ್ಟಿಯಿಂದ ಹೂಡಲಾದ ಸತ್ಯಾಗ್ರಹ. ನೀತಿಯ ಭೂಮಿಕೆಯಲ್ಲಿಯೆ ಇದಕ್ಕೆ ಮಹತ್ವ ಹಾಗೂ ಸ್ಥಾನ, ಎಂದು ಅವರು ಹೇಳಿದರು. ಶಿಕ್ಷೆ ವಿಧಿಸದೆ ನಿರವಧಿಯಾಗಿ ಜನರನ್ನು ಸರಕಾರದವರು ಸೆರೆಯಲ್ಲಿಡುವ ಸಂಭವವಿದೆ, ಎಂದು ನಾವು ಅಂದೆವು. ಅದಕ್ಕೆ ಉತ್ತರವೆಂದು, ಪುನಃ ಪುನಃ ಸತ್ಯಾಗ್ರಹ ಹೂಡಿ ಸೆರೆಮನೆಗೆ ಹೋಗುವ ತೊಂದರೆ ಉಳಿಯಿತೆನ್ನಬೇಕು, ಎಂದರವರು!


ಅವರು ಊಹಿಸಿದಂತೆ ಕೊನೆಯವರೆಗೂ ಸರಕಾರದವರು ಅವರನ್ನು ಸೆರೆಹಿಡಿಯುವ ಗೋಜಿಗೆ ಹೋಗಲಿಲ್ಲ! ೧೯೪೧ ರ ಡಿಸೆಂಬರ ತಿಂಗಳಲ್ಲಿ ಸರಕಾರದವರು ತಾವಾಗಿ ಎಲ್ಲ ಸತ್ಯಾಗ್ರಹಿಗಳನ್ನು ಬಿಟ್ಟುಕೊಟ್ಟರು. ಜಪಾನದ ದಾಳಿಯನ್ನು ಅನುಲಕ್ಷಿಸಿ ಪುನಃ ಸತ್ಯಾಗ್ರಹವನ್ನು ಹೂಡುವ ಕ್ರಮವನ್ನು ಗಾಂಧೀಜಿಯವರು ಕೈಕೊಳ್ಳಲಿಲ್ಲ.

ಈ ಸತ್ಯಾಗ್ರಹದಲ್ಲಿ ಮೂವತ್ತು ಸಾವಿರಕ್ಕಿಂತ ಹೆಚ್ಚು ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದರು. ಅವರಲ್ಲಿ ಹನ್ನೊಂದು ಜನರು ಕಾಂಗ್ರೆಸ್ ವರ್ಕಿಂಗ ಕಮೀಟಿಯ ಸಭಾಸದರು, ನೂರಾ ಎಪ್ಪತ್ತಾರು ಅಖಿಲ ಭಾರತ ಕಾಂಗ್ರೆಸ್ ಕಮೀಟಿಯ ಸದಸ್ಯರು, ಇಪ್ಪತ್ತೆರಡು ಕೇಂದ್ರ ಶಾಸನಸಭೆಯ ಸಭಾಸದರು, ಇಪ್ಪತ್ತೊಂಬತ್ತು ಮಾಜಿ ಮಂತ್ರಿಗಳು ಹಾಗೂ ನಾನೂರು ಪ್ರಾಂತಿಕ ಶಾಸನ ಸಭೆಗಳ ಸದಸ್ಯರು ಇದ್ದರು. ಅದಕ್ಕಾಗಿಯೆ ಇದು ಪ್ರಾತಿನಿಧಿಕ ಸತ್ಯಾಗ್ರಹ ಎಂದೆನಿಸಿತು.

೧೦. ಚಲೇ ಜಾವ್ ಚಳವಳಿ

ಹಿಂದುಸ್ತಾನದಲ್ಲಿ ಗಾಂಧೀಜಿಯವರು ಉಪಕ್ರಮಿಸಿದ ಕೊನೆಯ ಚಳವಳಿಯೆಂದರೆ ೧೯೪೨ ರಲ್ಲಿಯ ಚಲೇ ಜಾವ್ ಚಳವಳಿ. ಅದೇ ವರುಷದ ಮಾರ್ಚ ತಿಂಗಳಲ್ಲಿ ಕ್ರಿಪ್ಸರು ಮಂಡಿಸಿದ ಯೋಜನೆಯು ತ್ಯಾಜ್ಯವೆಂದು ನಿರಾಕರಿಸಲಾಯಿತು. ಆದರೆ ಒಂದು ಪ್ರಚಂಡ ವ್ಯಾಪಕ ಚಳವಳಿಯನ್ನು ಕೂಡಲೆ ಹೂಡಲು ಯಾರೂ ಸಿದ್ಧರಿರಲಿಲ್ಲ. ಹೀಗಿದ್ದರೂ ಬೇರೊಂದು ಮಾರ್ಗವೂ ಇರಲಿಲ್ಲ.

ಮಹಾಯುದ್ಧವು ಇನ್ನೂ ನಡೆದಿತ್ತು; ಜಪಾನವು ನಮ್ಮ ಅಗಸೀ ಬಾಗಿಲಿಗೆ ಬಂದು ತಟ್ಟಿತ್ತು. ನಮ್ಮ ಮುಖಂಡರಲ್ಲಿ ಮುಂದಿನ ಮಾರ್ಗದ ಬಗ್ಗೆ ಭಿನ್ನಾಭಿಪ್ರಾಯ ಮನೆಮಾಡಿತ್ತು. ಅಂಥ ಸಂದರ್ಭದಲ್ಲಿ ಚಲೇ ಜಾವ್ ದಂಥ ಚಳವಳಿಯನ್ನು ಹೂಡುವ ವಿಚಾರಮಾಡುವದು ಸಹ ಅತ್ಯಂತ ಸಾಹಸದ ಕೆಲಸವಾಗಿತ್ತು. ಹಿಂದುಸ್ತಾನದ ಭವಿತವ್ಯದಲ್ಲಿ ಪೂರ್ಣ ಭರವಸೆ ಹಾಗೂ ಯಾವದೇ ಪ್ರಸಂಗ ಬಂದರೂ ಹಿಂದೀ ಜನತೆಯು ತನ್ನ ಪಾಡಿಗೆ ತಾನು ನೋಡಿಕೊಂಡು ಹೋಗಬಲ್ಲದು ಎಂಬ ವಿಶ್ವಾಸ, ಇವು ಇಲ್ಲದ ಯಾವದೇ ವ್ಯಕ್ತಿ ಆಗ ಇಂಥ ವಿಪ್ಲವದ ವಿಚಾರವನ್ನು ಮಾಡುವದು ದುಸ್ತರವಿತ್ತು. ಗಾಂಧೀಜಿಯವರು ಏಕಾಕಿಯಾಗಿ 'ಹರಿಜನ' ಪತ್ರಿಕೆಯಲ್ಲಿ ವಾರವಾರಕ್ಕೆ ಉದ್ದೀಪಕ ಲೇಖಗಳನ್ನು ಬರೆದು ಶಾಂತಿಮಯ ಬಂಡಾಯ ಹೂಡದೆ ಇನ್ನೊಂದುಪಾಯವೆ ಇಲ್ಲ ಎಂದು ಪ್ರತಿಪಾದಿಸುತ್ತ ನಡೆದರು. ಅವರನ್ನು ವಿರೋಧಿಸುವ ಶಕ್ತಿ ಯಾರಲ್ಲಿಯೂ ಇರಲಿಲ್ಲ. ಅವರು ಪ್ರಾರಂಭಿಸಿದ ಪ್ರಚಾರದ ಪ್ರಭಾವವನ್ನಾಗಲಿ ಅದರ ಪ್ರತ್ಯಕ್ಷ ಪರೋಕ್ಷ ಪರಿಣಾಮಗಳನ್ನಾಗಲಿ ಬೇಗನೆ ಅರಿತುಕೊಳ್ಳಲು ಸರಕಾರವು ಸಮರ್ಥವಾಗಲಿಲ್ಲ. ಹೀಗಾಗಿ ಮೂರೇ ತಿಂಗಳಲ್ಲಿ ದೇಶವು ಬಂಡಾಯದ ಕಹಳೆಯನ್ನು ಊದಲು ಸಿದ್ಧವಾಯಿತು. ಪರಿಣಾಮತಃ ಗಾಂಧೀಜಿಯವರ ನಿರ್ಣಯಕ್ಕೆ ತನ್ನ ಅನುಮತಿಯ ಮುದ್ರೆಯನ್ನೊತ್ತಲು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ೧೯೪೨ ರ ಆಗಸ್ಟ ೭-೮ ತಾರೀಖಿಗೆ ಮುಂಬೈಯಲ್ಲಿ ಕೂಡಬೇಕಾಯಿತು.



गांधीजीका संदेश

मेरी उम्मीद है कि इस
यज्ञमे सब कर्नाटकी
पूरा हिस्सा लेंगे।

मो. क. गांधी
८-८-४२

ಗಾಂಧೀಜಿಯವರ ಸಂದೇಶ

ಈ ಯಜ್ಞದಲ್ಲಿ ಎಲ್ಲ ಕರ್ನಾಟಕದವರು
ಪೂರ್ಣ ಭಾಗವಹಿಸುವರೆಂದು ನನ್ನ
ಭರವಸೆ ಇದೆ.

ಮೋ. ಕ. ಗಾಂಧಿ
೮. ೮. ೪೨

ಕರೇಂಗೆ ಯಾ ಮರೇಂಗೆ — ಮಾಡುವೆ ಇಲ್ಲವೆ ಸಾಯುವೆ.
— ಗಾಂಧೀಜಿ

೧೯೪೨ ನೇ ಅಗಸ್ಟ ೮ ಕ್ಕೆ ಕರ್ನಾಟಕಕ್ಕೆ ಬಾಪೂ ಕೊಟ್ಟ ಸಂದೇಶ

ಅದೊಂದು ಚಿರಸ್ಮರಣೀಯವಾದ ಪ್ರಸಂಗ. ಆ ವಿಶಾಲವಾದ ಮಂಟಪದಲ್ಲಿ ಹಿಂದುಸ್ತಾನದ ಸತ್ಯಾಗ್ರಹವೀರರೆಲ್ಲ ಬ್ರಿಟಿಶ್ ಸರಕಾರದ ವಿರುದ್ಧ ಕೊನೆಯ ಹೋರಾಟ ಹೂಡಲು ಮೋಹರಿಸಿ ಕೂಡಿದರು. ತಮ್ಮ ಸಹಜವಾದ ಮಂದಸ್ಮಿತದಿಂದ ಅನುಯಾಯಿಗಳನೆಲ್ಲ ಪ್ರೇರೇಪಿಸುತ್ತ ಗಾಂಧೀಜಿಯವರು ವೇದಿಕೆಯ ಮೇಲೆ ವಿರಾಜಮಾನರಾಗಿದ್ದರು. ಹೋದ ಇಪ್ಪತ್ತೆರಡು ವರುಷ ಅವರ ಹೆಗಲಿಗೆ ಹೆಗಲುಗೊಟ್ಟು ಹೋರಾಡಿದ ಜೊತೆಗಾರರೆಲ್ಲ ಅವರ ಹತ್ತರ ಕುಳಿತುಕೊಂಡಿದ್ದರು. ಆ ದಿನ ದೇಶದೇಶಾಂತರಗಳಿಂದ ವಾರ್ತಾಹರರು ಆತುರದಿಂದ ಕಿವಿನಿಗರಿಸಿ ಕೇಳಲು ಅಲ್ಲಿ ಅಣಿಯಾಗಿದ್ದರು. ಆ ದಿನ ಅಲ್ಲಿ ಒಟ್ಟು ೮೦೦ ವಾರ್ತಾಹರರಿದ್ದರಂತೆ. ವೇದಿಕೆಯ ಎದುರು ಪಾಂಕ್ತವಾಗಿ ೨೫೦ ರಷ್ಟು ಅ. ಭಾ. ಕಾಂ. ಕಮೀಟಿಯ ಸಭಾಸದರು ತಮ್ಮ ಹೊಣೆಗಾರಿಕೆಯನ್ನರಿತು ಭಾರತದ ಭವಿತವ್ಯದ ಸಮಸ್ಯೆಯನ್ನು ಬಿಡಿಸಲು ಸಿದ್ಧರಾಗಿ ಕುಳಿತಿದ್ದರು. ಸುತ್ತಲೂ ಸಾವಿರಾರು ಜನ ಪ್ರೇಕ್ಷಕರು ಆ ಮಹತ್ವದ ಸಭೆಯಲ್ಲಿ ಏನು ನಿರ್ಣಯವಾಗುವದೆಂಬುದನ್ನು ಅರಿತುಕೊಳ್ಳಲು ಉತ್ಸುಕರಾಗಿ ಹಾದೀ ಕಾಯುತಿದ್ದರು.

ಆ ಚಲೇಜಾವ್ ಗೊತ್ತುವಳಿಯ ಮುಖ್ಯಾಂಶವೇನಂದರೆ, 'ಈ ದೇಶದಲ್ಲಿದ್ದ ಬ್ರಿಟಿಶ್ ರಾಜಸತ್ತೆ ಕೂಡಲೆ ಕೊನೆಗಾಣತಕ್ಕದ್ದು ಎಂಬುದು ಎಲ್ಲಕ್ಕೂ ಮಹತ್ವದ ಹಾಗೂ ತಕ್ಷಣಕ್ಕೆ ನಿರ್ಣಯವಾಗತಕ್ಕ ವಿಷಯವು. ಯುದ್ಧದ ಭವಿಷ್ಯ ಹಾಗೂ ಪ್ರಜಾಪ್ರಭುತ್ವದ ಮತ್ತು ಸ್ವಾತಂತ್ರ್ಯದ ಯಶಸ್ಸು ಇವು ಆ ನಿರ್ಣಯವನ್ನೇ ಅವಲಂಬಿಸಿವೆ.........

'ಈಗ ಉಂಟಾದ ಗಂಡಾಂತರದಿಂದ ಪಾರಾಗಲು ಹಿಂದುಸ್ತಾನವು ಪೂರ್ಣ ಸ್ವತಂತ್ರವಾಗುವುದು ಹಾಗೂ ಕೂಡಲೆ ಬ್ರಿಟಿಶ್ ಸತ್ತೆ ಕೊನೆಗಾಣಿಸುವುದು ಅತೀವ ಅವಶ್ಯ......

'ಆದುದರಿಂದ ಬ್ರಿಟಿಶರು ಕೂಡಲೆ ಈ ದೇಶವನ್ನು ತಮ್ಮ ಸತ್ತಾಧಿಕಾರದಿಂದ ಮುಕ್ತ ಮಾಡುವುದು ಅತ್ಯಗತ್ಯವೆಂದು ಅ. ಭಾ. ಕಾಂ. ಕಮೀಟಿಯು ಪುನಃ ಒತ್ತಿ ಹೇಳುವದು.........

'ಪೂರ್ಣ ಸ್ವಾತಂತ್ರ್ಯವು ಹಿಂದುಸ್ತಾನದ ಜನ್ಮಸಿದ್ಧ ಹಕ್ಕು ಇರುವದು, ಅದನ್ನು ಪ್ರಸ್ಥಾಪಿಸುವಗೋಸುಗ ಈ ಸಭೆಯು ಅತ್ಯಂತ ವ್ಯಾಪಕವಾದ

ಶಾಂತಿಮಯ ಹೋರಾಟವನ್ನು ಹೂಡಲು ಸಿದ್ಧವಾಗಿರುವದು. ಈಗ ಇಪ್ಪತ್ತೆರಡು ವರುಷ ಸಂಗ್ರಹಿಸಿದ ಅಹಿಂಸಾಮಯ ಹೋರಾಟದ ಶಕ್ತಿ ಸರ್ವಸ್ವವನ್ನೆಲ್ಲ ಜನತೆಯು ಉಪಯೋಗಿಸಬೇಕೆಂದು ಸಾರುವದು. ಈ ಹೋರಾಟದ ಮುಖಂಡರು ಅನಿವಾರ್ಯವಾಗಿ ಗಾಂಧೀಜಿಯವರೆ ಇರತಕ್ಕದ್ದೆಂಬುದು ನಿರ್ವಿವಾದವು. ಆದುದರಿಂದ ಅವರೇ ನೇತೃತ್ವವನ್ನು ವಹಿಸಿ ದೇಶಕ್ಕೆ ದಾರಿ ತೋರಬೇಕೆಂದು ಈ ಸಭೆಯು ಅವರನ್ನು ಕೇಳಿಕೊಳ್ಳುತಿದೆ...

'ತನ್ನ ದೇಶಕ್ಕೆ ಸ್ವಾತಂತ್ರ್ಯವು ದೊರೆಯಬೇಕೆನ್ನುವ ಪ್ರತಿಯೊಬ್ಬ ಹಿಂದೀಯನು ಪ್ರಸಂಗವಶಾತ್ ತಾನೇ ತನ್ನ ಮಾರ್ಗದರ್ಶಿಯಾಗಿ ಮುಂದರಿಯಬೇಕಾದೀತು. ಈ ಮಾರ್ಗದಲ್ಲಿ ವಿಶ್ರಾಂತಿಯೆಂಬುದು ಇಲ್ಲ. ಅವಿಶ್ರಾಂತವಾಗಿ ಹೋರಾಡುತ್ತ ಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಕೊನೆಗೆ ಮುಟ್ಟುವುದೊಂದೇ ಈಗಿರುವ ಉಪಾಯವು.'

ಆಗಸ್ಟ ಎಂಟನೇ ತಾರೀಖಿನ ದಿನ ವ್ಯಾಸಪೀಠದ ಮೇಲೆ ಗಾಂಧೀಜಿ ನಮ್ಮೆದುರು ಕುಳಿತಾಗ ಕರ್ನಾಟಕದ ಓರ್ವ ಮಿತ್ರನು ಅವರಿಂದ ನಮ್ಮ ಪ್ರಾಂತಕ್ಕಾಗಿ ಸಂದೇಶವೊಂದನ್ನು ಪಡೆಯಬೇಕೆಂದನು. ಹೋರಾಟವಂತೂ ಕಣ್ಣಮುಂದೆ ಕಟ್ಟಿತ್ತು. ನಾವು ಅವರತ್ತ ಹೋದೆವು. ಗಾಂಧೀಜಿಯವರಿಗೂ ಹೋರಾಟದ ಬಗ್ಗೆ ಎಳ್ಳಷ್ಟೂ ಸಂಶಯವಿರಲಿಲ್ಲ. ಅವರು ಕೃತಸಂಕಲ್ಪರಾಗಿಯೆ ಕುಳಿತಿದ್ದರು. ಒಳ್ಳೇ ಗಂಭೀರಭಾವದಿಂದ ಅವರು ಹಿಂದಿಯಲ್ಲಿ 'ಮೇರಿ ಉಮ್ಮೀದ ಹೈ ಕಿ ಇಸ್ ಯಜ್ಞಮೇ ಸಬ ಕರ್ನಾಟಕೀ ಪೂರಾ ಹಿಸ್ಸಾ ದೇಂಗೇ' (ಈ ಯಜ್ಞದಲ್ಲಿ ಎಲ್ಲ ಕರ್ನಾಟಕಸ್ಥರು ಪೂರ್ಣ ಭಾಗವಹಿಸುವರೆಂದು ನನ್ನ ನಂಬುಗೆ ಇದೆ) ಅವರಿಗೆ ಕರ್ನಾಟಕದ ಪೂರ್ಣ ಪರಿಚಯವಿತ್ತು. ತಾವು ಬರೆದುಕೊಟ್ಟ ನಾಲ್ಕು ಮಾತುಗಳ ಪರಿಣಾಮವು ಮಂತ್ರದೋಪಾದಿಯಲ್ಲಿ ತಮ್ಮ ಭಕ್ತಾನುಯಾಯಿಗಳ ಮೇಲೆ ಆಗುವದೆಂಬ ಭರವಸೆ ಅವರಿಗಿತ್ತು. ಆತ್ಯಂತಿಕ ತ್ಯಾಗಕ್ಕಾಗಿ ಅವರು ಕರೆ ಕೊಟ್ಟಿದ್ದರೆಂಬ ಅರಿವು ಅವರಿಗೆ ಚನ್ನಾಗಿತ್ತು. ಸ್ವಾತಂತ್ರ್ಯದ ಯೋಗ್ಯ ಬೆಲೆ ಕೊಡುವ ಕಾಲವು ಬಂದುಬಿಟ್ಟಿತ್ತು.

ಆ ದಿನ ಅಪರಾಹ್ಣದಲ್ಲಿ ಆ ಮಹತ್ವದ ಗೊತ್ತುವಳಿ ಮಂಡಿಸಲಾಯಿತು. ಪಂಡಿತ ಜವಾಹರಲಾಲರು ಹಾಗೂ ಸರದಾರ ಪಟೇಲರು ಅದನ್ನು ಕುರಿತು

ಮಾತಾಡಿದರು. ಆಗ ವಾತಾವರಣವು ಮತ್ತಷ್ಟು ಗಂಭೀರವಾಯಿತು. ಅಧ್ಯಕ್ಷಸ್ಥಾನದಲ್ಲಿ ಮೌಲಾನಾ ಅಜದರಿದ್ದರು. ಹಗುರು ಮನಸಿನಿಂದ ಅಲ್ಲಿಗೆ ಬಂದವರೆಲ್ಲ ಮೆಲ್ಲಮೆಲ್ಲಗೆ ಮುಂಬರುವ ಗಂಭೀರ ಪ್ರಸಂಗದ ಛಾಯೆಯನ್ನು ಅನುಭವಿಸಲಾರಂಭಿಸಿದರು. ಅಧಿಕಾರಮದದಿಂದ ಉನ್ಮತ್ತವಾದ ಹಾಗೂ ಜುಲುಮೆಯ ಪ್ರತ್ಯಕ್ಷ ಮೂರ್ತಿಯಾದ ಬ್ರಿಟಿಶ್ ಸರಕಾರದ ವಿರುದ್ಧ ಅಹಿಂಸಾತ್ಮಕ ಶಕ್ತಿಸರ್ವಸ್ವವನ್ನು ರಾಷ್ಟ್ರವು ಮೋಹರಿಸಿ ನಿಲ್ಲಿಸಬೇಕೆಂಬುದೆ ಆ ಗೊತ್ತುವಳಿಯ ತಿರುಳಾಗಿತ್ತು. ಕೊನೆಗೆ ರಾತ್ರಿ ಹತ್ತರ ಸುಮಾರಿಗೆ ಗಾಂಧೀಜಿಯವರು ಮಾತನಾಡುವಾಗ ವಾತಾವರಣವು ತೀರ ತಪ್ತವಾಯಿತು. ಅವರು ಶಾಂತರೀತಿಯಿಂದ ಸಮತೋಲ ಶಬ್ದಗಳಿಂದ ಪರಿಸ್ಥಿತಿಯನ್ನು ಪರಿಶೀಲಿಸಿದರು. ಲಾರ್ಡ ಲಿನ್‌ಲಿಥಗೋ ಇವರೊಡನೆ ಇದ್ದ ತಮ್ಮ ಸ್ವಂತ ನಿಕಟ ಸಂಬಂಧವನ್ನೂ ಒಳ್ಳೆ ಮನಮುಟ್ಟುವ ಶಬ್ದಗಳಿಂದ ಬಣ್ಣಿಸಿದರು. ಬಹಳ ನಮ್ರತೆಯಿಂದ ಮಾತಾಡಿದರು. ಆದರೆ ಅವರ ಮಾತಿನಲ್ಲಿ ನಿರ್ಧಾರವಿತ್ತು. ಅವರ ಭಾಷಣದ ಮಟ್ಟು ಏರುತ್ತ ಹೋಗಿ ಮಾರನೆ ದಿನದಿಂದ ಪ್ರತಿಯೊಬ್ಬ ಹಿಂದೀಯನು ಸ್ವತಂತ್ರನಂತೆ ವರ್ತಿಸಬೇಕು, ಮಾಡುವೆ ಇಲ್ಲವೆ ಮಡಿಯುವೆ, ಎಂಬ ನಿರ್ಧಾರದಿಂದ ಸಾಗಬೇಕು, ಎಂದು ಕೊನೆಗಂಡಿತು. ಆವರೆಗೆ ಅಸಹಾಯರೆಂದು ತಿಳಿದುಕೊಂಡ ಲಕ್ಷಾಂತರ ಜನರ ಅಂತಃಕರಣಕ್ಕೆ ಆ ಕರೆ ಹೋಗಿ ಮುಟ್ಟಿತು. ಅವರ ಸುಪ್ತಶಕ್ತಿಗಳು ಜಾಗ್ರತವಾಗಿ ಪ್ರಚಂಡ ಆಂದೋಲನದ ರೂಪದಿಂದ ಕೂಡಲೆ ಹೊರಹೊಮ್ಮಿದವು.

ಗಾಂಧೀಜಿಯವರ ಗರ್ಜನೆಯು ಹಿಂದುಸ್ತಾನದ ಮೂಲೆ ಮೂಲೆಗಳಲ್ಲಿ ಪ್ರತಿಧ್ವನಿತವಾಯಿತಲ್ಲದೆ ಸಪ್ತಸಮುದ್ರಗಳಾಚೆ ಹೋಗಿ ಅದು ಬ್ರಿಟಿಶ್ ಸರಕಾರದ ಕಿವಿಯ ಮೇಲೆ ಅಪ್ಪಳಿಸಿತು. ಆ ರಾತ್ರಿ ಎಲ್ಲವೂ ಶಾಂತವಿದ್ದಂತೆ ತೋರಿತು. ಆದರೆ ಬ್ರಿಟಿಶ್ ಆಳರಸರು ಗಾಂಧೀಜಿಯವರ ಆಹ್ವಾನವನ್ನು ಸ್ವೀಕರಿಸಿದ್ದರು. ಮಾರನೆ ದಿನ ನಸುಕಿನ ನಾಲ್ಕು ಗಂಟೆಯಿಂದಲೆ ಇಡೀ ಹಿಂದುಸ್ತಾನದಲ್ಲಿಯ ಮುಖ್ಯ ಮುಖ್ಯ ಕಾಂಗ್ರೆಸ್ ಕಾರ್ಯಕರ್ತರನ್ನು ಸೆರೆ ಹಿಡಿಯುವ ಸತ್ರಕ್ಕೆ ಪ್ರಾರಂಭವಾಯಿತು. ಎಲ್ಲರನ್ನೂ ಎತ್ತಿ ಸೆರೆ ಸೇರಿಸುವ ಕ್ರಮವು ನಡೆಯಿತು. ಆ ದಿನ ರಾತ್ರಿ ಹನ್ನೆರಡುವರೆಗೆಯೆ ಹಲವರನ್ನು ಸೆರೆಹಿಡಿದ ಉದಾಹರಣೆಗಳೂ ಇವೆ.

೧೯೩೨ ರಲ್ಲಿ ಆರ್ಡಿನನ್ಸ್ ಹೊರಡಿಸಿದೊಡನೆ ಗಾಂಧೀಜಿ ಹಾಗೂ ಪಟೇಲ ರನ್ನು ಸರಕಾರದವರು ಹಿಡಿದುಬಿಟ್ಟಿದ್ದರು. ಅದೇ ರೀತಿ ಈಗಲಾದರೂ ಅವರು ಮಾಡುವರೆಂದು ನಾನು ಗ್ರಹಿಸಿದ್ದೆನು. ಅ. ಭಾ. ಕಾಂ. ಕಮೀಟಿ ಸಭೆ ಮುಗಿಸಿ ಆ ರಾತ್ರಿ ನಾನು ಹೊರಟೊಡನೆ ಇದೇ ವಿಚಾರ ನನ್ನ ತಲೆ ಯಲ್ಲಿ ಬಂದಿತು. ಆದರೆ ಅದನೆಲ್ಲ ಮರೆತು ನಾವೆಲ್ಲರೂ ಸುಖದಿಂದ ನಿದ್ರೆ ಮಾಡಿದೆವು.

ಬೆಳಿಗ್ಗೆ ಎದ್ದು ನೋಡಲಾಗಿ ಎಲ್ಲ ಟೆಲಿಫೋನ ಸಂಬಂಧಗಳು ಬಂದಾಗಿ ಬಿಟ್ಟಿದ್ದವು. ಹೊರಬಿದ್ದು ನೋಡಲಾಗಿ ವೃತ್ತಪತ್ರಗಳಲ್ಲಿ ಗಾಂಧೀಜಿಯುವ ರನ್ನು ಹಿಡಿದ ಸುದ್ದಿ ಢಾಳವಾಗಿ ಪ್ರಕಟಿಸಲಾಗಿತ್ತು. ವರ್ಕಿಂಗ ಕಮೀಟಿ ಸಭಾಸದರೆಲ್ಲರು ಹಾಗೂ ಮುಂಬೈ ಕಾಂಗ್ರೆಸ್ಸಿನ ಅನೇಕಾನೇಕ ಪ್ರಮುಖ ಕಾರ್ಯಕರ್ತರು ಸೆರೆಹಿಡಿಯಲಾಗಿದ್ದರು.

ನನಗಂತೂ ಏನು ಮಾಡಬೇಕೆಂಬುದು ತೋಚದಾಯಿತು. ಯಾರಿಗೆ ಭೆಟ್ಟಿಯಾಗಬೇಕು, ಎಲ್ಲಿ ಹೋಗಬೇಕು, ಯಾವುದೂ ಹೊಳೆಯದೆ ಹೋಯಿತು. ಒಂದು ಮಾತನ್ನು ಮಾತ್ರ ನಾನು ಕೂಡಲೆ ನಿಶ್ಚಯಿಸಿದೆನು. ಮುಂಬಯಿಯಲ್ಲಿ ವಾಡಿಕೆಯಾಗಿ ನಾವು ಯಾವ ಮಿತ್ರನಲ್ಲಿ ಇಳಿದುಕೊಳ್ಳು ತಿದ್ದೆವೊ ಅವರ ಮನೆ ಬಿಟ್ಟು ಮತ್ತೊಂದೆಡೆ ಹೋಗುವದನ್ನು ನಿಶ್ಚಯಿಸಿ ದೆನು. ಅದರಂತೆ ಕೂಡಲೆ ನನ್ನಿಬ್ಬರ ಮಿತ್ರರೊಡನೆ ಆ ಮನೆ ಬಿಟ್ಟೆನು. ನಾವು ಸೆರೆಹಿಡಿಯಲ್ಪಡುವಷ್ಟರಲ್ಲಿ ನಮ್ಮ ಊರಿಗಾದರೂ ಮುಟ್ಟಬೇಕು, ಗಾಂಧೀಜಿಯುವರ ಸಂದೇಶವನ್ನಾದರೂ ಜನರಿಗೆ ತಿಳಿಸಬೇಕೆಂಬ ಲವಲವಿಕೆ ನಮ್ಮಲ್ಲಿ ಉಂಟಾಗಿತ್ತು.

ಮುಂದೆ ಆದುದೆಲ್ಲ ಈಗ ನಮ್ಮ ದೇಶದ ಇತಿಹಾಸದ ಒಂದು ಭಾಗವಾಗಿ ಬಿಟ್ಟಿದೆ. ಇನ್ನೂ ಅನೇಕ ವಿವರಗಳು ಅದರಲ್ಲಿ ಸೇರಬೇಕೆಂಬ ಮಾತು ನಿಜ. ಇರಲಿ. ಹಿಡಿದೊಡನೆ ಸೆರೆಹಿಡಿಯುವುದರ ವಿರುದ್ಧವಾಗಿ ಗಾಂಧೀಜಿಯುವರು ಆಮರಣ ಉಪವಾಸ ಹೂಡಬಹುದೆಂದು ಹಲವರು ತಿಳಿದಿದ್ದರು. ಅವರು ವರ್ಧಾದಲ್ಲಿದ್ದಾಗ ಆ ಬಗ್ಗೆ ಮಾತುಕಥೆಗಳಾಗಿದ್ದವು. ಆದರೆ ಯಾವ ನಿರ್ಣ ಯವೂ ಆಗಿರಲಿಲ್ಲ. ಸತ್ಯಾಗ್ರಹಶಿರೋಮಣಿಗಳಾದ ವಿನೋಬಾ ಭಾವೆ ಯುವರು ಗಾಂಧೀಜಿಯುವರ ತರುವಾಯ ಉಪೋಷಣವನ್ನಾರಂಭಿಸಬೇಕೆಂದಿ

ದ್ದರು. ಆದರೆ ತಾವು ಯಾವದೇ ಹೆಜ್ಜೆಯನ್ನು ದುಡುಕಿ ಇಡಲಿಕ್ಕಿಲ್ಲ ಎಂದು ಸೆರೆ ಹಿಡಿದೊಡನೆ ಗಾಂಧೀಜಿಯವರು ಹೇಳಿಟ್ಟಿದ್ದರು. ಅವರನ್ನು ಕಸ್ತೂರಬಾ ಹಾಗೂ ಮಹಾದೇವ ದೇಸಾಯಿ ಇವರೊಡನೆ ಒಯ್ದು ಸರಕಾರದವರು ಆಗಾಖಾನ್ ಅರಮನೆಯಲ್ಲಿ ಸುರಕ್ಷಿತವಾಗಿ ಇಟ್ಟುಬಿಟ್ಟರು. ವರ್ಕಿಂಗ ಕಮೀಟಿಯ ಸಭಾಸದರು ಅಹಮದನಗರದ ಕೋಟೆಗೆ ಸಾಗಿಸಲಾದರು. ಗಾಂಧೀಜಿಯವರ ಸ್ಪೇಶಲ್ ಟ್ರೇನಿನಲ್ಲಿದ್ದ ಇತರರು ಯರವಡಾ ಸೆರೆಮನೆಗೆ ಒಯ್ಯಲಾದರು.

ಈ ಬಗೆಯಾಗಿ ಮುಖಂಡರನ್ನು ಆಕಸ್ಮಿಕ ರೀತಿ ಸೆರೆ ಹಿಡಿದುದರಿಂದ ದೇಶದಲ್ಲಿ ಅತ್ಯಂತ ಕ್ಷೋಭವುಂಟಾಗಿ ಹಲವೆಡೆಗಳಲ್ಲಿ ಹಲವೊಂದು ಕಾಲ ಸರಕಾರವೆ ಇಲ್ಲದಷ್ಟು ಅರಾಜಕತೆಯ ಸ್ಥಿತಿಯುಂಟಾಯಿತು. ಜನರು ದಿಕ್ಕೆಟ್ಟು ಸರಕಾರದ ಪಾಶವೀ ಕೃತ್ಯವನ್ನು ಎದುರಿಸಲು ಸನ್ನದ್ಧರಾದರು.

೧೧. ಭೂಮಿಗತರು

ಆಗಸ್ಟ ೧೯೪೨ ರಿಂದ ಮೇ ೧೯೪೪ರ ವರೆಗೆ ಗಾಂಧೀಜಿಯವರು ಪುಣೆಯಲ್ಲಿಯ ಆಗಾಖಾನ ಅರಮನೆಯಲ್ಲಿ ಸೆರೆಯಾಳಾಗಿ ಕೊಳೆಯುತಿದ್ದರು. ಬಂಧನದ ನಂತರ ಒಂದೇ ವಾರದಲ್ಲಿ ಅವರ ಆಪ್ತಕಾರ್ಯದರ್ಶಿಗಳಾದ ಮಹಾದೇವಭಾಯಿ ದೇಸಾಯಿಯವರ ನಿಧನವಾಯಿತು. ಬಳಿಕ ಹಲವು ತಿಂಗಳ ನಂತರ ಅವರ ಆಜನ್ಮ ಸಹಧರ್ಮಿಣಿಯಾದ ಸತಿ ಕಸ್ತೂರಬಾ ಇವರು ಇಹಲೋಕದ ಯಾತ್ರೆಯನ್ನು ಮುಗಿಸಿ ಅವರನ್ನಗಲಿ ಪರಲೋಕಕ್ಕೆ ತೆರಳಿದರು. ತಮ್ಮ 'ಯಥಾಶಕ್ತಿ ಉಪವಾಸ' ವನ್ನಾದರೂ (capecity fast) ಅವರು ಅಲ್ಲಿಯೆ ಮುಗಿಸಿದರು. ಹದಿನಾರು ದಿವಸಗಳ ನಂತರ ಅವರು ಸೇವಿಸಲಾರಂಭಿಸಿದ ಮೋಸಂಬಿಯ ರಸದ ಮೂಲಕ ಅವರ ಪ್ರಾಣ ಹೇಗೊ ಉಳಿಯಿತು. ಬ್ರಿಟಿಶರು ತಮ್ಮ ದೇಶಕ್ಕೆ ಕೊಡುವ ಅಸಹ್ಯ ಹಿಂಸೆಯನ್ನು ಹಾಗೂ ತಮ್ಮವರು ಮಾಡುವ ಹಲವು ಅಪಕೃತ್ಯಗಳನ್ನು ಅವರು ಅಲ್ಲಿಯೆ ಕೈ ಮುಚ್ಚಿಕೊಂಡು ಕುಳಿತು ಮಿಡುಕುತ್ತ ಮೂಕತನದಿಂದ ಸಹಿಸಬೇಕಾಯಿತು.

೧೯೪೩ ರ ಫೆಬ್ರುವರಿ ತಿಂಗಳಲ್ಲಿ ಅವರು ಉಪವಾಸವನ್ನು ಕೈಕೊಂಡ ಕಾಲದಷ್ಟೊತ್ತಿಗೆ ವಿರೋಧಕ ಚಳವಳಿಯು ಬಹುಶಃ ಕುಗ್ಗಿ ಹೋಗಿತ್ತು. ಕರ್ನಾಟಕ, ಬಂಗಾಲ, ಮಹಾರಾಷ್ಟ್ರ ಹೀಗೆ ಹಲವು ಪ್ರಾಂತಗಳಲ್ಲಿ ಮಾತ್ರ ಅಲ್ಲಿ ಇಲ್ಲಿ ಸ್ವಲ್ಪ ನಡೆದಿತ್ತು. ಕರ್ನಾಟಕದಲ್ಲಿಯ ಚಳವಳಿಯ ವಿಶೇಷವೆಂದರೆ ಅಲ್ಲಿ ಪ್ರಾಣಕ್ಕೆ ಹಾಗೂ ಖಾಸಗಿ ಆಸ್ತಿಗೆ ಯಾವ ಬಗೆಯ ಹಿಂಸೆಯೂ ಕೊಡಲಾಗುತಿರಲಿಲ್ಲ.

ಆಸ್ತಿಗೆ ಸಹ ಹಾನಿ ತಟ್ಟಬಹುದಾದ ಯಾವದೇ ಬಗೆಯ ಚಳವಳಿಗೆ ಗಾಂಧೀಜಿಯವರು ಎಂದೆಂದಿಗೂ ತಮ್ಮ ಸಮ್ಮತಿಯನ್ನು ಕೊಟ್ಟಿರಲಿಲ್ಲ. ಒಮ್ಮೆ ಆ ಬಗೆಯ ಸಮ್ಮತಿ ಕೊಟ್ಟರೆ ಅದು ಜನರನ್ನು ಪ್ರಾಣಹಿಂಸೆಗೆ ಪ್ರವೃತ್ತ ಮಾಡಿಯೆ ಬಿಡುವುದೆಂಬದನ್ನು ಅವರು ಅರಿತಿದ್ದರು. ತಂತಿ ಕಡಿಯುವುದು, ರೈಲುಗಳನ್ನು ಕೀಳುವುದು ಇತ್ಯಾದಿಗಳ ಬಗ್ಗೆ ಚಳವಳಿಯ

ಪೂರ್ವದಲ್ಲಿ ಸೇವಾಗ್ರಾಮದಲ್ಲಿ ಚರ್ಚೆ ಬೇಕಾದಷ್ಟು ನಡೆದಿತ್ತೆಂಬುದೇನೊ ನಿಜ. ಆದರೆ ಯಾವ ನಿರ್ಣಯಕ್ಕೂ ಅವರು ಬಂದಿರಲಿಲ್ಲ. ಯಾವದೇ ಮಾತನ್ನು ಗುಪ್ತರೀತಿ ಮಾಡತಕ್ಕದ್ದಲ್ಲ ಎಂಬುದನ್ನು ಮಾತ್ರ ಅವರು ಘಂಟಾಘೋಷವಾಗಿ ಸಾರಿದ್ದರು.

ಅವರ ಉಪವಾಸಕಾಲದಲ್ಲಿ ನಾನು ಭೂಮಿಗತನಾಗಿ ಹೊರಗೆ ಕೆಲಸ ಮಾಡುತಿದ್ದೆನು. ಆಗ ಒಬ್ಬ ಪ್ರಮುಖರ ಮುಖಾಂತರ ಅವರೊಡನೆ ಸಂಬಂಧ ವನ್ನು ಬೆಳೆಸಿದೆನು. ಕರ್ನಾಟಕದಲ್ಲಿಯ ನಮ್ಮ ಚಟುವಟಿಕೆಗಳ ಇತಿಹಾಸ ವನ್ನು ಅವರಿಗೆ ಅರುಹಿದೆನು. ಈ ವರೆಗೆ ಹಿಂಸೆ ಆಗದೆ ಇದ್ದುದು ಪ್ರಶಂಸ ನೀಯ, ಆದರೆ ಈ ಬಗೆಯ ಚಟುವಟಿಕೆಗಳನ್ನು ಮುಂದೆ ಸಾಗಿಸುವದು ಅಯೋಗ್ಯವೆಂದು ಅವರು ಸ್ಪಷ್ಟವಾಗಿ ಹೇಳಿಕಳುಹಿದರು. ಇಡೀ ಚಳವಳಿಗೆ ಬೇರೆ ಸ್ವರೂಪವನ್ನು ಕೊಡುವದು ಯೋಗ್ಯವಾಗಬಹುದೆಂದು ಅವರ ಅಭಿ-ಪ್ರಾಯವಿತ್ತು. ವ್ಯಕ್ತಿಗಳು ಇಲ್ಲವೆ ಗುಂಪುಗಳು ಇಲ್ಲವೆ ಹಳ್ಳಿಗಳು ತಾವು ಸ್ವತಂತ್ರರೆಂದು ಸಾರಿ ಸೆರೆಮನೆಗೆ ಹೋಗಲು ಇಲ್ಲವೆ ಗುಂಡಿನೇಟಿಗೆ ತುತ್ತಾಗಲು ಸಿದ್ಧರಾಗಬೇಕೆಂದು ಅವರ ಅಭಿಪ್ರಾಯ.

ಗಾಂಧೀಜಿಯವರ ಉಪವಾಸದ ಮುಕ್ತಾಯದ ಬಳಿಕ ಹಲವೇ ದಿನಗಳಲ್ಲಿ 'ಭೂಮಿಗತ' ರಲ್ಲಿ ಎರಡು ಬಣಗಳಾದವು. 'ಸತ್ಯಾಗ್ರಹ ಮಂಡಲ' ಎಂಬುದನ್ನು ಮಾಡಿಕೊಂಡು ನಾವು ಹಲವರು ಜಾಹೀರ ಅಹಿಂಸಾತ್ಮಕ ಬಂಡಾಯವನ್ನು ಹೂಡತಕ್ಕದ್ದೆಂದು ಗೊತ್ತುಮಾಡಿ ಕೆಲಸವನ್ನು ಪ್ರಾರಂಭಿ ಸಿದೆವು. ಅಷ್ಟರಲ್ಲಿ ಉಪವಾಸದ ಮೂಲಕ ಸರಕಾರದವರು ಗಾಂಧೀಜಿ ಯವರೊಡನೆ ಬರಗೊಟ್ಟ ಹೊರಗಿನವರ ಸಂಬಂಧವನ್ನು ನಿಲ್ಲಿಸಿಬಿಟ್ಟರು. ಚಳವಳಿಯು, ಅದು ಜಾಹೀರ ಇರಲಿ, ಇಲ್ಲವೆ ಗುಪ್ತವಿರಲಿ, ಬರಬರುತ್ತ ಇನ್ನೂ ಬಲಗುಂದುತ್ತ ನಡೆಯಿತು.

೧೯೪೪ ರ ಮೇ ತಿಂಗಳಲ್ಲಿ ಗಾಂಧೀಜಿಯವರ ಬಿಡುಗಡೆಯಾಯಿತು. ವಿರಹ ಹಾಗೂ ಅನಾರೋಗ್ಯ ಇವುಗಳ ಮೂಲಕ ಅವರ ದೇಹದ ಮೇಲೆ ಬಹಳ ಪರಿಣಾಮವಾದುದು ಕಂಡು ಬಂದಿತು. ಮಿತ್ರರು ಅವರನ್ನು ಮುಂಬೈ ಹತ್ತರಿರುವ ಜುಹು ಎಂಬಲ್ಲಿ ಶ್ರೀ. ಶಾಂತಿಕುಮಾರರ ಕೊಠಡಿಯಲ್ಲಿರಲು ಹಾಗೂ ವಿಶ್ರಮಿಸಲು ಕರೆದುಕೊಂಡು ಹೋದರು.

ಸ್ವಾಭಾವಿಕವಾಗಿಯೆ ಸತ್ಯಾಗ್ರಹದ ಮಂಡಲದವರಾದ ನಾವು ಅವರನ್ನು ಭೆಟ್ಟಿಯಾಗಬೇಕೆಂದು ಆತುರರಾಗಿದ್ದೆವು. ಅವರ ಸಲಹೆ ಸೂಚನೆಗಳನ್ನು ಪಡೆಯಬೇಕೆಂಬ ಲವಲವಿಕೆ ನಮಗೆ.

ಶ್ರೀ. ರಾಮಚಂದ್ರನ್ನರು ನೇಮಿಸಿದಂತೆ ಶ್ರೀ. ಅನ್ನದಾಬಾಬು ಹಾಗೂ ನಾನು ಹೋಗಿ ಅವರಿಗೆ ಜುಹುದಲ್ಲಿ ಭೆಟ್ಟಿಯಾದೆವು. ಅವರು ರಾಟೆಯನ್ನು ತಿರುವುತ್ತ ನೆಳಲಿನಲ್ಲಿ ಕುಳಿತುಕೊಂಡಿದ್ದರು. ಸೋತಂತೆ ಹಾಗೂ ನಿಸ್ತೇಜ ರಾದಂತೆ ಕಾಣುತಿದ್ದರು. ನಾವು ಮಣಿದು ನಮಸ್ಕಾರ ಮಾಡಿದೊಡನೆ ಅವರು ಕಣ್ಣೆತ್ತಿ ನೋಡಿ ಸ್ಮಿತಹಾಸ್ಯ ಮಾಡಿ, 'ಓ ಭೂಮಿಗತರ ತಂಡೇನು,' ಅಂದರು. ನಾವು ಅಲ್ಲಿ ಅವರೊಡನೆ ಕುಳಿತು ಅರ್ಧ ಗಂಟೆ ಮಾತಾಡಿರಬಹುದು. ನಾವು ಪರಿಸ್ಥಿತಿಯನ್ನು ತಿಳಿಹೇಳಿ ನಮ್ಮ ಪರದಿಯನ್ನು ಒಪ್ಪಿಸಿದೆವು. ಸತ್ಯಾಗ್ರಹದ ಚಟುವಟಿಕೆಗಳು ನಡೆಯಬಹುದೋ ಎಂದು ನಾವು ಅವರನ್ನು ಕೇಳಿದೆವು. ಅದೇ ರೀತಿ ಸತ್ಯಾಗ್ರಹ ಮಂಡಲವು ತನ್ನ ಕೆಲಸವನ್ನು ಮುಂದರಿಸಬೇಕೊ ಎಂದು ಪೃಚ್ಛೆ ಮಾಡಿದೆವು. ಅಹುದು, ನಡೆಯಲಿ, ಎಂದರು. ಆದರೆ ನಾವು ಭೂಮಿಗತರಾಗಿರುವದು ಅವರಿಗೆ ಯಾವದೇ ದೃಷ್ಟಿಯಿಂದ ಒಪ್ಪಿತವಿರಲಿಲ್ಲ. ಆದರೆ ಅದೇ ಕಾಲಕ್ಕೆ 'ನೀವು ಸರಕಾರಕ್ಕೆ ಸ್ವಾಧೀನರಾಗಿರಿ,' ಎಂದು ನಾನು ನಿಮಗೆ ಈಗ ಹುಕುಮು ಕೊಡುವ ಪರಿಸ್ಥಿತಿಯಲ್ಲಿಲ್ಲ ಎಂದರು.

ಆ ಕಾಲಕ್ಕೆ ಗಾಂಧೀಜಿಯವರ ದ್ವಾರಪಾಲಿಕೆಯರಾಗಿದ್ದ ಶ್ರೀ. ಸರೋಜಿನಿ ನಾಯಡು ಅವರನ್ನು ನಾವು ಕಂಡು ಮಾತಾಡಿಸಿದೆವು. ಮುಂದೆ ಶ್ರೀ. ಪ್ಯಾರೇಲಾಲಜೀಯವರೊಡನೆಯೂ ಸಂಭಾಷಣೆ ನಡೆಯಿತು.

೧೯೪೪ರ ಮೇ ತಿಂಗಳು ೧೭ ನೇ ತಾರೀಖಿಗೆ ನಾನು ಗಾಂಧೀಜಿಯವರಿಗೆ ಒಂದು ವಿವರವಾದ ಪತ್ರವನ್ನು ಬರಕೊಂಡೆನು. ನಾನು ಭೂಮಿಗತನಾದುದೇಕೆ, ಯಾವ ಮನೋರಚನೆಯ ಮೂಲಕ ನಾನು ಹಾಗೆ ವರ್ತಿಸಿದೆನು, ಇನ್ನು ಸತ್ಯಾಗ್ರಹ ಮಾಡಿ ಸೆರೆಮನೆ ಸೇರುವದು ಹೇಗೆ ಅವಶ್ಯ, ಈ ಮುಂತಾದ ಮಾತುಗಳನ್ನು ಕುರಿತು ಬರೆದೆನು. ಆದಕ್ಕೆ ಅವರು ಕೂಡಲೆ ಉತ್ತರಕೊಟ್ಟರು. ಅದು ಹೀಗೆ ಇದೆ:—

ನಿಮ್ಮ ಪತ್ರ ಬಹಳ ಚೆನ್ನಾಗಿದೆ. ನಿಮ್ಮ ಮಾತು ಸರಿ, ಅದೇ ರೀತಿ ನನ್ನ ಮಾತೂ ಸರಿ. ನಮ್ಮ ನಮ್ಮ ಪರಿಯಿಂದ

ನಾವು ಸರಿಯಾಗಿಯೆ ಇರುವೆವು. ಆದುದರಿಂದ ನಿಮ್ಮ ಅಂತಃ-ಕರಣಕ್ಕೆ ಸರಿಯೆಂದು ತೋರಿದುದನ್ನೆ ನೀವು ಮಾಡಬೇಕು. ಅಂತಃಕರಣಪೂರ್ವಕ ಮಾಡಲಾದ ಯಾವದೆ ಕೆಲಸಕ್ಕಾಗಿ ಯಾರಿಗೂ ದೋಷ ಕೊಡಕೂಡದೆಂಬ ಪಾಠವನ್ನು ನಾನು ಕಲಿತಿರುವೆ. ನೀವು ಹಾಗೂ ಅನೇಕ ಜೊತೆಗಾರರು ಅಂತಃಕರಣವನ್ನು ಮುಟ್ಟಿ ಕೆಲಸಮಾಡಿರುವಿರಿ. ನನ್ನ ವಿಚಾರ ನಿಮಗೆ ಗೊತ್ತು. ಅದನ್ನು ಸರಿಯಾಗಿ ಯೋಚಿಸಿ ತೂಕಮಾಡಿ ನೋಡಿ ನಿಮ್ಮ ವಿವೇಕಕ್ಕೆ ತೋಚಿದಂತೆ ವರ್ತಿಸಿರಿ. ನನ್ನ ಕಡೆಯಿಂದ ಯಾವದೇ ಹುಕುಮುನ್ನು ಅಪೇಕ್ಷಿಸಬೇಡಿ. ವಿಶೇಷತಃ ನಾನು ಅನಾರೋಗ್ಯದಿಂದಿರುವಾಗ ನನ್ನಿಂದ ಆ ಅಪೇಕ್ಷೆ ಬೇಡ.

ಪ್ರೀತಿ

೧೮—೫—೧೯೪೪ ಬಾಪು

ಈ ಉತ್ತರವನ್ನು ಅವರೊಂದು ಪಾಕೀಟಿನ ಬೆನ್ನುಖರಡಿನ ಮೇಲೆ ಪೆನ್ಸಿಲ್ಲಿನಿಂದ ಬರೆದಿದ್ದರು!

ಮುಂದೆ ಗುಪ್ತತೆಯನ್ನು ಕುರಿತು ಅನ್ನದಾಬಾಬು ಹಾಗೂ ನಾನು ಅವರಿಗೊಂದು ಪತ್ರವನ್ನು ಶ್ರೀ. ಪ್ಯಾರೇಲಾಲಜಿಯವರ ಮುಖಾಂತರ ಬರೆದಿದ್ದೆವು. ಅವರು ಅದಕ್ಕೆ ೯-೬-೪೪ ಕ್ಕೆ ಉತ್ತರ ಬರೆದರು:

ಗೌಪ್ಯ ಅಥವಾ ಗುಪ್ತತೆ ಎಂಬುದು ನನ್ನ ದೃಷ್ಟಿಯಿಂದ ಒಂದು ಪಾಪವು. ಅದು ಹಿಂಸೆಯ ಒಂದು ಲಕ್ಷಣವು. ಆದುದರಿಂದ ಅದು ಸರ್ವಥಾ ತ್ಯಾಜ್ಯವು. ಮೂವತ್ತುಮೂರು ಕೋಟಿ ಮೂಕ ಮಾನವರ ಸ್ವಾತಂತ್ರ್ಯವನ್ನು ನೀವು ಇಚ್ಛಿಸುತಿದ್ದರೆ ಇತ್ತ ವಿಶೇಷ ಲಕ್ಷಗೊಡಲಿಕ್ಕೆ ಬೇಕು. ಆದುದರಿಂದ ಎಲ್ಲ ಬಗೆಯ ಭೂಮಿಗತ ಚಳವಳಿಯು ತ್ಯಾಜ್ಯ ಎಂದು ನನ್ನ ಅಭಿಪ್ರಾಯ. ಆದರೆ ನಾನು ಇಲ್ಲಿ ಒತ್ತಿ ಹೇಳುವುದೇನಂದರೆ, ಆತ್ಯಂತಿಕ ಧ್ಯೇಯವೆಂದಾಗಲಿ, ತಾತ್ಕಾಲಿಕ ಧೋರಣೆಯೆಂದಾಗಲಿ ಹಿಂಸೆ ಅಹಿಂಸೆ ಇವುಗಳ ಅರ್ಥವನ್ನು ಆಯಾ ಸಂದರ್ಭದಲ್ಲಿ ಮಾಡುವ ಹೊಣೆಯು ಪ್ರತಿಯೊಬ್ಬ ವ್ಯಕ್ತಿಯ ಅಂತಃ

ಕರಣ ಹಾಗೂ ಬುದ್ಧಿ ಇವುಗಳ ಮೇಲೆಯೆ ಇದೆ. ಅಂತಃಕರಣ ಹಾಗೂ ಬುದ್ಧಿ ಇವುಗಳಲ್ಲಿ ಮತಭೇದವುಂಟಾದಾಗ ಅಂತಃಕರಣವೆ ಗೆದೆಯುವದು.

ನಾನು ಈಗ ಚಳವಳಿಯ ಮುಖಂಡ ಎಂಬ ಅಧಿಕಾರದಿಂದ ಬರೆಯು ತಿರುವುದಿಲ್ಲ. ನಾನು ಇನ್ನೂ ಕೈದಿಯೆಂದೇ ತಿಳಿಯತಕ್ಕದ್ದು. ಅಭಿಪ್ರಾಯ ಗಳನ್ನು ಕೊಡಲು ಸ್ವತಂತ್ರನೆ ಹೊರತು ಹುಕುಮು ಕೊಡಲು ಅಲ್ಲ.

ಮುಂದೆ ಆಗಸ್ಟ ತಿಂಗಳಲ್ಲಿ ನಾನು ಜಾಹೀರ ಸತ್ಯಾಗ್ರಹ ಮಾಡಲನು ವಾಗಿರುವೆ ಎಂದು ಗಾಂಧೀಜಿಯವರಿಗೆ ತಿಳುಹಿದೆನು.

ಆಗ ಅವರು ಪಂಚಗಣಿಯಲ್ಲಿರುತಿದ್ದರು. ನಾನು ಪಂಚಗಣಿಗೆ ಹೋಗಿ ಅಲ್ಲಿ ಅವರ ಮುಖಾಂತರ ಪೋಲೀಸರಿಗೆ ವಶನಾಗಬೇಕೆಂದು ಚೇಷ್ಟೆಯಿಂದ ಸೂಚಿಸಿದರು. ನನ್ನನ್ನು ಹಿಡಿದವರಿಗೆ ೫೦೦೦ ರೂಪಾಯಿ ಇನಾಮು ಇಡ ಲಾಗಿತ್ತು. ಆ ಇನಾಮನ್ನು ಪಡೆದು ನಾನು ಹರಿಜನ ನಿಧಿಗೆ ಕೊಡುವೆ ಎಂದು ಅವರು ಅಂದರು!

ಅವರು ಹಿಂದಿಯಲ್ಲಿ ಬರೆದ ಎರಡು ಪತ್ರಗಳ ಅನುವಾದವನ್ನು ಇಲ್ಲಿ ಕೊಡುವೆ.

ಮೊದಲನೆ ಪತ್ರ


ಪಂಚಗಣಿ ೧೯—೭—೪೪

ಸಹೋದರ ದಿವಾಕರ,

ನಾನು ಕರ್ನಾಟಕದ ಚಳವಳಿಯ ವರದಿ ಇನ್ನೂ ಪೂರ್ಣ ಓದಿಲ್ಲ. ನಿಮಗೆ ನನ್ನ ಅಭಿಪ್ರಾಯ ಗೊತ್ತು.

ನೀವು (ಕರ್ನಾಟಕದ ಕಾರ್ಯಕರ್ತರೆಲ್ಲ) ಯಾವದೊಂದು ಚಟುವಟಿಕೆಯಲ್ಲಿ ತೊಡಗಿದಾಗ ೯ನೆ ಆಗಸ್ಟದ ವರೆಗೆ ಸೆರೆ ಹಿಡಿಯಲ್ಪಟ್ಟರೆ ಅದು ನನಗೆ ಇಷ್ಟವೇ ಇರುವದು. ಆದರೆ ಅದು ಸತ್ಯಾಗ್ರಹ ಸ್ವರೂಪದ್ದಿರದೆ ಯಾವದೊಂದು ಸಾಮಾನ್ಯ ಕಾಂಗ್ರೆಸ್ ಚಟುವಟಿಕೆ ಇರಬೇಕು. ನಿಮಗೆ ಇವೆರಡರಲ್ಲಿಯ ಅಂತರದ ಅರ್ಥವಾಯಿತಷ್ಟೆ?

ಬಾಪೂನ ಆಶೀರ್ವಾದ


पंचगनी
२०-७-४४

भाई दिवाकर,

೧೯೪೪ ನೇ ಮೇ ೧೮ ಕ್ಕೆ ಈ ಗ್ರಂಥಕರ್ತರಿಗೆ ಬಾಪೂ ಬರೆದ ಪತ್ರ

ಎರಡನೆ ಪತ್ರ

ಪಂಚಗಣಿ ೨೦-೭-೪೪

ಸಹೋದರ ದಿವಾಕರ,

ನಾನು ನಿನ್ನೆ ನಿಮಗೊಂದು ಪತ್ರ ಬರೆದೆ. ಪುಂಡಲೀಕಜಿಯವರು ಇಲ್ಲಿರುವರು. ಆದುದರಿಂದ ನಾನು ಈಗ ನಿಮಗೆ ಇನ್ನೊಂದು ಪತ್ರ ಬರೆಯುತಿರುವೆ. ಈ ವಿಷಯಗಳನ್ನು ಕುರಿತು ನಾನು ಎಷ್ಟು ದೀರ್ಘವಾಗಿ ಯೋಚಿಸುತಿರುವೆ ಎಂಬುದು ಇದರಿಂದ ವ್ಯಕ್ತವಾಗುವದು.

ಭೂಮಿಗತರಿದ್ದವರು ಮೊದಲು ಪ್ರಕಟವಾಗಬೇಕು. ಆ ಬಳಿಕ ಇಷ್ಟವಾದ ಚಟುವಟಿಕೆಗಳಲ್ಲಿ ತೊಡಗಬೇಕೆಂದು ನನಗನಿಸುವದು.

ನಾನು ಹೊರಗಿರುವ ವರೆಗೆ ಯಾರೂ ವಿರೋಧಕ ಚಟುವಟಿಕೆ ಮಾಡದಿರುವದು ಒಳಿತೆಂದು ನನ್ನ ಭಾವನೆ.

ಬಾಪೂನ ಆಶೀರ್ವಾದ.

ನಾನು ಈ ಪತ್ರಗಳ ಪ್ರತಿಗಳನ್ನು ಎಲ್ಲ ಸ್ನೇಹಿತ ಕಾರ್ಯಕರ್ತರಿಗೂ ಕಳಿಸಿದೆನು. ಯಾಕಂದರೆ ಇವುಗಳಲ್ಲಿ ಅವರು ನಮಗೆಲ್ಲರಿಗೂ ಕೊಟ್ಟ ಸಲಹೆ ಅಡಕವಾಗಿತ್ತು.

೧೯೪೪ರ ಆಗಸ್ಟ ೮ನೆ ತಾರೀಖಿನ ದಿನ ರಾತ್ರಿ ನಾನು ಹುಬ್ಬಳ್ಳಿ ರೇಲ್ವೆ ಪ್ಲ್ಯಾಟ್‌ಫಾರ್ಮಿನ ಮೇಲೆ ಇಳಿದೆನು. ಸುಮಾರು ೫೦ ಪೋಲೀಸರು ಅಲ್ಲಿದ್ದರು. ನನ್ನ ಹಾದೀ ಕಾಯುತಿದ್ದರು. ಆದರೆ ಅವರಾರೂ ನನ್ನನ್ನು ಗುರುತಿಸಲಿಲ್ಲ. ನಾನು ಮನೆಗೆ ಹೋಗಿ ನನ್ನ ವೃದ್ಧ ತಾಯಿಯವರನ್ನು ಕಂಡೆನು. ನಾನು ಹುಬ್ಬಳ್ಳಿಗೆ ಹೋದುದೆ ಅದಕಾಗಿಯೆ.

ಮರುದಿನ ಮುಂಜಾನೆ ವಾಡಿಕೆಯಂತೆ ನಾನು ಸಂಯುಕ್ತ ಕರ್ನಾಟಕ ಕಚೇರಿಗೆ ಹೋದೆನು. ಅಲ್ಲಿಂದ ಪೋಲೀಸರಿಗೆ ಸುದ್ದೀ ಕಳಿಸಿದೆನು. ಈ ರೀತಿ ಗಾಂಧೀಜಿಯವರ ಆಜ್ಞೆಯ ಮೇರೆಗೆ ಪ್ರಕಟನಾದೆನು. ಆ ಮೇಲೆ ನನ್ನನ್ನು ಸರಕಾರದವರು ಸುಮಾರು ಒಂದು ವರುಷ ಸೆರೆಯಲ್ಲಿಟ್ಟರು.

೧೨. ಅಧಿಕಾರಾರೂಢ ಕಾಂಗ್ರೆಸ್ಸು

ಚಲೇ ಜಾವ್ ಚಳವಳಿ ಹೂಡಿದ್ದು ತಪ್ಪೆಂದು ಒಪ್ಪಿ, ೧೯೪೨ ರಲ್ಲಿ ನಡೆದ ಅನಾಹುತಗಳ ಹೊಣೆಯನ್ನೆಲ್ಲ ಹೊತ್ತರೆ ಕಾಂಗ್ರೆಸ್ ವರ್ಕಿಂಗ ಕಮೀಟಿ ಸಭಾಸದರನ್ನು ಬಿಟ್ಟುಬಿಡುವೆವು, ಎಂದು ಸರಕಾರದವರು ಯುದ್ಧಾಂತ್ಯ ದಲ್ಲಿ ಕಾಂಗ್ರೆಸ್ ಮುಖಂಡರಿಗೆ ಕರಾರು ಹಾಕಿದಂತೆ ಮಾಡಿದರು. ಈ ಮೂಲಕ ಕಾಂಗ್ರೆಸ್ಸಿನ ಪ್ರತಿಷ್ಠೆಯನ್ನು ಮಣ್ಣುಗೂಡಿಸಬೇಕೆಂದು ಅವರು ಹೊಂಚುಹಾಕಿರಬೇಕು. ಆದರೆ ವರ್ಕಿಂಗ್ ಕಮೀಟಿಯು ತನ್ನ ಸ್ವಾಭಿ-ಮಾನದ ನಿರ್ಧಾರವನ್ನು ಬಿಡಲಿಲ್ಲ. ೧೯೪೪ರ ಮೇ ತಿಂಗಳಷ್ಟೊತ್ತಿಗೆ ಗಾಂಧೀಜಿಯವರಂತೂ ಹೊರಗೆ ಬಂದಿದ್ದರು. ಸರಕಾರದವರು ಕಾಂಗ್ರೆಸ್ಸಿನ ತತ್ವಗಳ ಮಟ್ಟಿಗೆ ಒಪ್ಪಿಗೆ ಕೊಟ್ಟರೆ ತಪಶೀಲಿನ ವಿಷಯದಲ್ಲಿ ಹೊಂದಿಕೊಂಡು ಹೋಗಲು ಗಾಂಧೀಜಿಯವರು ಎಂದಿನಂತೆ ಸಿದ್ಧರಿದ್ದರು. ಕೊನೆಗೆ, ಜನತೆಯ ಬೆಂಬಲವಿಲ್ಲದೆ ಈ ದೇಶವನ್ನಾಳುವದು ಅಶಕ್ಯ ಎಂಬ ಪ್ರತೀತಿ ಬಂದುದರಿಂದ ಸರಕಾರದವರೆ ಬಗ್ಗಬೇಕಾಯಿತು. ವರ್ಕಿಂಗ ಕಮೀಟಿಯು ಸಭಾಸದರನ್ನೆಲ್ಲ ಬಿಟ್ಟುಬಿಡಲಾಯಿತು. ಹಾಗೂ ೧೯೪೫ ರ ಜೂನ ೨೫ನೆ ದಿನ ಗಾಂಧೀಜಿ ಹಾಗೂ ವರ್ಕಿಂಗ ಕಮೀಟಿಯೊಡನೆ ಸಂಧಾನದ ಮಾತು. ಕಥೆ ಪ್ರಾರಂಭವಾದವು.

ಈ ಮಾತುಗಳ ತೊಡಕು ಹಾಗೂ ದುರಾರಾಧ್ಯ ಮುಸ್ಲಿಂ ಲೀಗಿನವರು ಹಿಡಿದ ಹಟ, ಇವುಗಳನ್ನು ಇಲ್ಲಿ ಪೂರ್ಣ ಬಣ್ಣಿಸುವದವಶ್ಯವಿಲ್ಲ. ಇದೆಲ್ಲದರ ಪರಿಣಾಮವಾಗಿ ದೇಶವು ಸ್ವತಂತ್ರವಾದರೂ ಅದು ತುಂಡರಿಸಲಾಯಿತು. ಗಾಂಧೀಜಿಯವರು ಎಂದಿಗೂ ದೇಶವಿಭಜನೆಗೆ ವಿರುದ್ಧರಿದ್ದರು. ಆದುದರಿಂದ ವಿಭಜನೆಯ ನಂತರ ೧೯೪೭ ರಲ್ಲಿ ಜೂನ ತಿಂಗಳಲ್ಲಿ ಮೂರು ದಿನ ಗಾಂಧೀಜಿಯವರು ಒಂದೇ ಸವನೆ ತಮ್ಮ ವಿವ್ಹಲತೆಯನ್ನು ಪ್ರಾರ್ಥನೋತ್ತರ ಭಾಷಣಗಳಲ್ಲಿ ಬಿಸಿಯುಸಿರಿನಿಂದ ವ್ಯಕ್ತಪಡಿಸಿದರು. ತಾವು ಉಪವಾಸವನ್ನು ಕೈಕೊಳ್ಳಬೇಕಾಗುವದೊ ಏನೊ ಎಂಬ ಮಾತನ್ನು ಸಹ ಅವರು

ತಮ್ಮ ಜೂನ ೫ ನೆ ತಾರೀಖಿನ ಪ್ರಾರ್ಥನೋತ್ತರ ಮಾತಿನಲ್ಲಿ ಒಡನುಡಿದರು. 'ಈ ವಿಭಜನೆಯ ವಿರುದ್ಧ ಬಂಡಾಯ ಹೂಡಲು ನಾನು ಜನರಿಗೆ ಕರೆ ಕೊಡಲೊ' ಎಂದು ಸಹ ಅವರು ತಮ್ಮ ಹೃದಯವೇದನೆಯನ್ನು ಎಲ್ಲರ ಮುಂದೆ ಒಮ್ಮೆ ಪ್ರಕಟಿಸಿದರು. ಕೊನೆಗೆ ಅನಿವಾರ್ಯವಾದುದನ್ನು ನುಂಗಿ ಅವರು ಸುಮ್ಮನಾದರು. ಅವರ ಅಭಿಮತಕ್ಕೆ ಬಲವುಂಟಾಗಿ ವಿಭಜನೆ ಆಗದೆ ಹೋಗಿದ್ದರೆ ನೆಟ್ಟಗಾಗುತಿತ್ತು, ಎಂದು ನಾವೆಲ್ಲರೂ ಈಗ ಅಂದುಕೊಳ್ಳ ಬಹುದು. ವಿಭಜನೆ, ತನ್ಮೂಲಕ ಎರಡು ರಾಜ್ಯಗಳ ಜನ್ಮ, ಇದರಿಂದ ಯಾವದೊಂದು ಸಮಸ್ಯೆ ಬಿಡುವದೊತ್ತಟ್ಟಿಗಿರಲಿ, ಅನೇಕ ಹೊಸ ಸಮಸ್ಯೆ ಗಳು ಮಾತ್ರ ಹುಟ್ಟಿವೆ.

ಜಾತೀಯತೆಯ ಬಂಡೆಗಲ್ಲಿನ ಮೇಲೆ ಹಿಂದುಸ್ತಾನದ ಹಡಗವು ಅಪ್ಪಳಿಸಿ ದೇಶದ ಎರಡು ಕೃತ್ರಿಮ ತುಂಡುಗಳಾಗಿ ಬಿಟ್ಟವು. ಈ ಮೂಲಕ ಗಾಂಧೀಜಿ ಯವರಿಗೆ ಆದ ಉದ್ವಿಗ್ನತೆಯನ್ನು ಬಣ್ಣಿಸಲಳವಲ್ಲ. ಈ ದೇಶದಲ್ಲಿ ಸಾರ್ವ ಜನಿಕ ಕೆಲಸದಲ್ಲಿ ಅವರು ಕೈ ಹಾಕಿದಂದಿನಿಂದ ಒಂದೇ ಸವನೆ ಜಾತೀಯ ಏಕತೆಯನ್ನು ಪ್ರತಿಪಾದಿಸುತ್ತ ಬಂದಿದ್ದರು. ಆ ಏಕತೆ ಅವರೆದುರಿಗೆಯೆ ಮಣ್ಣುಪಾಲಾಗುತಿರುವುದನ್ನು ಕಾಣುವ ದುರ್ಧರ ಪ್ರಸಂಗವು ಅವರ ಮೇಲೆ ಅವರ ಕೊನೆಯ ದಿನಗಳಲ್ಲಿ ಬಂದುಬಿಟ್ಟಿತು.

೧೯೨೪ ರ ಸಪ್ತೆಂಬರ ತಿಂಗಳಲ್ಲಿ ಹಿಂದು ಮುಸಲ್ಮಾನರ ಏಕತೆಗಾಗಿ ಅವರು ದಿಲ್ಲಿಯಲ್ಲಿ ಉಪವಾಸವನ್ನು ಕೈಕೊಂಡಿದ್ದರಷ್ಟೆ. ಆದರೆ ಈಗ ದೇಶ ದಲ್ಲಿ ಜಾತೀಯ ದ್ವೇಷದ ಬೇಗೆಯು ಹಬ್ಬುತಿರುವದನ್ನು ಅವರು ಪ್ರತ್ಯಕ್ಷ ಕಂಡರು. ಆದುದರಿಂದ ಅದನ್ನು ತಡೆಯುವ ನಿರ್ಧಾರವನ್ನು ಮಾಡಿದರು. ನೌಖಾಲಿಯಲ್ಲಿಯ ಪಾದಚಾರಿ ಸಂಚಾರ, ಬಿಹಾರದ ಕುಗ್ರಾಮಗಳಲ್ಲಿ ವಾಸ್ತವ್ಯ, ಕಲಕತ್ತೆಯಲ್ಲಿಯ ಉಪವಾಸ, ಜಾನೆವರಿ ೧೩-೧೮ ರ ವರೆಗಿನ ದಿಲ್ಲಿಯಲ್ಲಿ ಕೈಕೊಂಡ ಅವರ ಕೊನೆಯ ಉಪವಾಸ, ಇವೆಲ್ಲ ಜಾತಿದ್ವೇಷ ದಿಂದಾದ ಘನತರ ಗಾಯಗಳನ್ನು ಮಾಯಿಸುವುದಕ್ಕಾಗಿಯೆ ಅವರು ಮಾಡಿದ ಉಪಾಯಗಳು. ಇತ್ತ ನವದಿಲ್ಲಿಯಲ್ಲಿ ಘಟನಾ ಸಮಿತಿಯು ೧೯೪೬ರ ಡಿಸೆಂಬರ ೯ನೇ ತಾರೀಖಿನ ದಿನ ಒಳ್ಳೆ ಸಂಭ್ರಮದಿಂದ ನೆರೆಯುತಿರುವಾಗ ಗಾಂಧೀಜಿ ಯವರು ಅತ್ತ ನೌಖಾಲಿಯಲ್ಲಿ ಕಾಲುದಾರಿಯಿಂದ ಊರೂರಿಗೆ ಹೋಗುತ

ಲಿದ್ದರು. ಧರ್ಮಾಂಧತೆಯ ರಭಸದಲ್ಲಿ ಸುಟ್ಟ ಇಲ್ಲವೆ ನಷ್ಟಗೊಳಿಸಿದ ಮನೆಗಳನ್ನು ಪುನಃ ಕಟ್ಟಿಕೊಡಿರಿ, ಎಂದು ಮುಸಲ್ಮಾನ ಬಾಂಧವರಿಗೆ ಚಾಲುವರೆದು ಅವರು ಹೇಳುತಲಿದ್ದರು. ನಂತರ ಮುಯ್ಯಕ್ಕೆ ಮುಯ್ಯವೆಂದು ಬಿಹಾರ ಹಿಂದುಗಳು ಸುಟ್ಟು ಹಾಕಿದ ಮುಸಲ್ಮಾನರ ಮನೆಗಳನ್ನು ಕಟ್ಟಿಕೊಡಿರಿ, ಎಂದು ಹಿಂದುಗಳಿಗೆ ಹೇಳಲು ಅವರು ಬಿಹಾರ ಯಾತ್ರೆಯನ್ನು ಕೈಕೊಂಡರು. ಕೇವಲ ರಾಜಕೀಯ ಸ್ವರಾಜ್ಯದ ಪ್ರಸ್ಥಾಪನೆಗಿಂತ ಕೋಮಲ ಪ್ರೇಮವೃಕ್ಷದ ಬೀಜವನ್ನು ಬಿತ್ತಲು ಜನರ ಅಂತಃಕರಣಗಳನ್ನು ಶುದ್ಧೀಕರಿಸಿ ಅಣಿಮಾಡುವದು ಹೆಚ್ಚು ಮಹತ್ವದ್ದೆಂದು ಅವರು ಭಾವಿಸಿದ್ದರು.

೧೯೩೮ರಲ್ಲಿ ಗಾಂಧೀ ಸೇವಾ ಸಂಘದ ಒಂದು ಸಭೆಯಲ್ಲಿ ನಡೆದ ಸಂಭಾಷಣವಿಶೇಷವನ್ನು ಇಲ್ಲಿ ನಾನು ಉದಹರಿಸಬಲ್ಲೆನು. ಗಾಂಧೀ ಸೇವಾ ಸಂಘದ ಸಭಾಸದರು ಸರಕಾರದ ಮಂತ್ರಿಗಳಾಗಬಲ್ಲರೊ, ವಿಶೇಷತಃ ನ್ಯಾಯ ಹಾಗೂ ಸುವ್ಯವಸ್ಥೆಯ ವಿಭಾಗಗಳ ಮಂತ್ರಿಯಾಗಬಲ್ಲರೊ, ಎಂದು ಶ್ರೀ ಜಮನಾಲಾಲ ಬಜಾಜರು ಗಾಂಧೀಜಿಯವರನ್ನು ಕೇಳಿದರು. ಆಧುನಿಕ ಕಾಲದಲ್ಲಿ ಇಂಥ ಮಂತ್ರಿಗಳು ಪ್ರಸಂಗವಶಾತ್ ರೊಚ್ಚಿಗೆದ್ದ ಜನಜಂಗುಳಿಯ ಮೇಲೆ ನಾಲ್ಕು ಗುಂಡುಗಳನ್ನು ಹಾರಿಸಿಯಾದರೂ ಸುವ್ಯವಸ್ಥೆಯನ್ನು ರಕ್ಷಿಸಬೇಕಾಗುವದು, ಇದು ಅನಿವಾರ್ಯ, ಎಂದು ನಾನು ಸೂಚಿಸಿದೆನು. ಇಂಥ ಸಂದರ್ಭದಲ್ಲಿ ಸಂಘವನ್ನಾದರೂ ಬಿಡಬೇಕು, ಇಲ್ಲವೆ ಮಂತ್ರಿಪದಕ್ಕಾದರೂ ರಾಜೀನಾಮೆ ಕೊಡಬೇಕು, ಎಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿದರು. ಸಮಾಜದಲ್ಲಿ ಹಿಂಸೆ ಬಲಾತ್ಕಾರಗಳ ಅವಶ್ಯಕತೆ ಉಳಿಯದಂತೆ ಪರಿಸ್ಥಿತಿಯನ್ನು ಪಲ್ಲಟಿಸುವುದೆ ಸಂಘದ ಉದ್ದೇಶವು. ಆ ಉದ್ದೇಶವು ಹಿಂಸೆಯ ಆಚರಣೆಯಿಂದ, ಆ ಹಿಂಸೆ ತೀರ ಕಿಂಚಿತ್ ಇದ್ದರೂ ಸೈ, ಎಂದೂ ಸಾಧಿಸದು, ಎಂಬುದು ಅವರ ಗಟ್ಟಿಯಾದ ಅಭಿಪ್ರಾಯ.

ಘಟನಾಸಮಿತಿಯವರು ಸಿದ್ಧಪಡಿಸುತಿರುವ ಘಟನೆಯಲ್ಲಿ ನೀವು ಅಭಿರುಚಿ ತೋರಿಸುವದಿಲ್ಲವಲ್ಲ, ಎಂದು ಒಮ್ಮೆ ನಾನು ಕೇಳಿದೆನು. ಆಗ ಅವರು ತಮ್ಮ ವಿಶಿಷ್ಟ ರೀತಿಯಿಂದಲೆ ಉತ್ತರ ಕೊಟ್ಟರು. ತಾವು ಬೇರೆ ಕೆಲಸಗಳಲ್ಲಿ ತೊಡಗಿರುವದರಿಂದ ತಮ್ಮನ್ನು ಬೇಕೆಂದು ಘಟನಾಸಮಿತಿಯವರು ಕೇಳಿದ ವಿನಾ ಅದರಲ್ಲಿ ತಾವು ಕೈಹಾಕುವುದಿಲ್ಲ ಎಂದು ಅವರು ಹೇಳಿದರು.

೧೯೪೭ ರಲ್ಲಿ ಆಗಸ್ಟ ೧೫ ನೇ ದಿನ ಸ್ವತಂತ್ರ ಹಿಂದುಸ್ತಾನದಲ್ಲಿ ಕಾಂಗ್ರೆಸ್ ಅಧಿಕಾರಾರೂಢವಾದ ಬಳಿಕ ಅವರ ತಲ್ಲಣ ಮತ್ತಷ್ಟು ಹೆಚ್ಚಿತು. ಜಾತೀಯತೆ, ಲಂಚಗೂಳಿತನ, ಕಳ್ಳಪೇಟೆ ಇವು ಮಿತಿಮೀರಿವೆ ಹಾಗೂ ನಾವು ವಿಕೇಂದ್ರೀಕರಣದ ತತ್ವದಿಂದ ಇನ್ನೂ ದೂರವೆ ಹೋಗುತಿರುವೆವು, ಎಂದು ನಾನು ಅವರಿಗೆ ಹೇಳಿದಾಗ ಅವರು ಗಂಭೀರ ಭಾವದಿಂದ ಅಂದದ್ದು, 'ಅದು ನನಗೆ ಗೊತ್ತು. ಜವಾಹರರೂ ಸರದಾರರೂ ತದ್ವಿರುದ್ಧ ಹೋರಾಡುತಿರುವರು. ಅವರಿಗೆ ನಮ್ಮ ಪೂರ್ಣ ಬೆಂಬಲವನ್ನೂ ಸಹಾನುಭೂತಿಯನ್ನೂ ಕೊಡತಕ್ಕದ್ದು.'

೧೩. ಕೊನೆಯ ದರ್ಶನ

ನನ್ನ ಸೌಭಾಗ್ಯದಿಂದ ಗಾಂಧೀಜಿಯವರ ಕೊನೆಯ ದಿನಗಳಲ್ಲಿ ನಾನು ಅವರಿಗೆ ಹಲವಾರು ಸಾರೆ ಭೆಟ್ಟಿಯಾಗಬೇಕಾಯಿತು. ಮೂರು ವಿಶೇಷ ಮಹತ್ವದ ಪ್ರಸಂಗಗಳನ್ನು ಮಾತ್ರ ಇಲ್ಲಿ ಎತ್ತಿ ಬಣ್ಣಿಸುವೆ.

ಮುಂಬೈಯಲ್ಲಿ ಶ್ರೀ. ಡಿ. ಜಿ. ತೆಂಡೂಲಕರ ಎಂಬವರೊಬ್ಬರು ನನ್ನ ಮಿತ್ರರಿರುವರು. ಅವರು ಗಾಂಧೀಜಿಯವರ ಒಂದು ದೊಡ್ಡ ಜೀವನಚರಿತ್ರೆಯನ್ನು ಬರೆದಿದ್ದಾರೆ. ಒಳ್ಳೆ ಕಾಸೋಶಿಯಿಂದ ಸಂಗತಿಗಳನೆಲ್ಲ ಸಾಧಾರವಾಗಿ ಮಂಡಿಸಲೆತ್ನಿಸಿದ್ದಾರೆ. ಅವರು ಈ ಬಗೆಯ ದೊಡ್ಡ ಹೊತ್ತಿಗೆ ಬರೆಯುವದನ್ನು ಕೈಕೊಳ್ಳಲು ಅಂಶತಃ ನಾನು ಕಾರಣೀಭೂತನಿರುವೆನು. ಆ ಚರಿತ್ರೆಯನ್ನು ಕುರಿತು ಮಾತಾಡಲು ನಾವಿಬ್ಬರೂ ಗಾಂಧೀಜಿಯವರತ್ತ ಹೋದೆವು. ಜಾನೆವರಿ ೨೨ನೇ ತಾರೀಖಿನ ದಿವಸ ನಾವು ಬಿರ್ಲಾಭವನಕ್ಕೆ ಮಧ್ಯಾನ್ಹ ಎರಡು ಗಂಟೆಗೆ ತಲುಪಿದೆವು. ಗಾಂಧೀಜಿಯವರು ಉಪವಾಸದ ಪಾರಣೆ ಮಾಡಿ ಅಯ್ದೇ ದಿನಗಳಾಗಿದ್ದವು. ಅವರು ತಮ್ಮ ವಾಡಿಕೆಯ ಆಸನದ ಮೇಲೆ ಕುಳಿತಿದ್ದರು. ಇನ್ನೂ ಅಶಕ್ತರಿದ್ದಾಗ ತೊಂದರೆ ಕೊಟ್ಟ ಬಗ್ಗೆ ನಾವು ಕ್ಷಮಾಯಾಚನೆ ಮಾಡಿದೆವು. ಅವರು ಅತ್ಯಂತ ಸವಿಶಬ್ದಗಳಿಂದ ನಮ್ಮನ್ನು ಬರಮಾಡಿಕೊಂಡರು. ತೆಂಡೂಲಕರರವರು ಬರೆದ ಚರಿತ್ರೆಯನ್ನು ಕುರಿತು ಅವರು ಬಹಳ ಆಸ್ಥೆವಹಿಸಿ ಮಾತಾಡಿದರು. 'ಹಿಂದ ಸ್ವರಾಜ್ಯ' ಬರೆದ ತಾರೀಖಿನ ಬಗ್ಗೆ ತೆಂಡೂಲಕರರು ಗಾಂಧೀಜಿಯವರನ್ನು ಹಲವು ಮಾತು ಕೇಳಿದರು. ಗಾಂಧೀಜಿಯವರ ಲೇಖಗಳಿಂದ ಅವತರಣಿಕೆಗಳನ್ನು ಕೊಡಲು ಅಪ್ಪಣೆ ಬೇಡಿದರು. ಒಳಿತೆಂದು ಅವರು ಒಪ್ಪಿದರು. ಮಹಾದೇವಭಾಯಿಯವರು ಬರೆದಿಟ್ಟ ದಿನಚರಿಯನ್ನು ಉಪಯೋಗಿಸುವ ಬಗ್ಗೆಯೂ ಕೇಳಿದರು. ತಮ್ಮದೇನೂ ಅಡ್ಡಿಯಿಲ್ಲ, ಆದರೆ ಅದು ಶ್ರೀ. ನರಹರಿಭಾಯಿಯವರ ಕಡೆಗೆ ಇದ್ದುದರಿಂದ ಅವರನ್ನೇ ಕೇಳಬೇಕೆಂದು ಹೇಳಿದರು.

ಇಷ್ಟು ಮಾತು ನಡೆದಾಗ ಶ್ರೀ ಪ್ಯಾರೇಲಾಲರು ಬಂದು ಹತ್ತಿರ ಕುಳಿತರು. ಅವರನ್ನು ಕಂಡೊಡನೆ ಏನೋ ನೆನಪಾದವರಂತೆ ಕೃಷ್ಣ ಹಾಗು ಯಾದವರು ಇವರನ್ನು ಕುರಿತು ಗಾಂಧೀಜಿಯವರು ನನ್ನನ್ನು ಕೇಳಿದರು. ನನಗೆ ಗೊತ್ತಿದ್ದ ಮಟ್ಟಿಗೆ ಆ ಕಥೆಯನ್ನು ನಾನು ಹೇಳಿದೆನು. ಯಾದವರು ಬಹಳ ಮದೋನ್ಮತ್ತರೂ ಗರ್ವಿಷ್ಠರೂ ಆಗಿದ್ದರು. ತಾನು ಪರಂಧಾಮಕ್ಕೆ ತೆರಳುವ ಮೊದಲು ಅವರು ನಷ್ಟವಾಗಿ ಹೋಗದಿದ್ದರೆ ಅವರು ಜಗತ್ತನ್ನೆ ನಷ್ಟಪಡಿಸುವರು ಎಂದು ಕೃಷ್ಣನು ತಿಳಿದಿದ್ದನು. ಅವರು ತಮ್ಮತಮ್ಮೊಳಗೆ ಹೊಡೆದಾಡಿ ಸಾಯುವರು, ಎಂದು ಕುಲಪುರೋಹಿತನಾದ ಗರ್ಗಮುನಿಯು ಅವರಿಗೆ ಶಾಪಕೊಟ್ಟಿದ್ದನು. ಆ ಶಾಪವು ಸತ್ಯವಾಗಿ ಯಾದವರು ಯಾದವೀ ಕಲಹದಿಂದ ನಾಶಹೊಂದಿದರು. ಶ್ರೀಕೃಷ್ಣನ ಅವತಾರಸಮಾಪ್ತಿಯ ಕಾಲವು ಬಂದಿತು. ಧ್ಯಾನಸ್ಥನಾಗಿ ಒಂದು ಮರದಡಿಯಲ್ಲಿ ಕುಳಿತಾಗ ವ್ಯಾಧನೊಬ್ಬನು ಜಿಂಕೆಯೆಂದು ತಿಳಿದು ಅವನ ಮೇಲೆ ಬಾಣವನ್ನೆಸೆದನು. ಅದರಿಂದ ಹತನಾಗಿ ಕೃಷ್ಣನು ನಿರ್ವಾಣವನ್ನೈದಿದನು.

ಗಾಂಧೀಜಿಯವರು ಕಥೆಯನ್ನು ಒಳ್ಳೆ ಲಕ್ಷಗೊಟ್ಟು ಕೇಳಿ 'ಒಹೋ, ಅದು ಹೀಗಾಯಿತೇ?' ಎಂದರು. ತಾವು ಇನ್ನೂ ಜೀವಂತರಿರುವಾಗಲೆ ಕಾಂಗ್ರೆಸ್ಸಿಗರು ತಮ್ಮತಮ್ಮೊಳಗೆ ಹೊಡೆದಾಡುತಿರುವರಲ್ಲ, ಎಂದು ಅವರು ವಿಷಾದಪಡುತಿರುವಂತೆ ತೋರಿತು.

ಎರಡನೆಯ ಮಹತ್ವದ ಭೆಟ್ಟಿಯೆಂದರೆ ೨೪ನೇ ತಾರೀಖಿನ ದಿನ. ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಕಮಿಟಿ ಅಧ್ಯಕ್ಷರೂ ಜೊತೆಕಾರ್ಯಕರ್ತರೂ ಕೂಡಿ ಭಾಷಾನುಗುಣ ಪ್ರಾಂತರಚನೆಯನ್ನು ಕುರಿತು ಒಂದು ಶಿಷ್ಟಮಂಡಳವನ್ನು ಗಾಂಧೀಜಿಯವರ ಕಡೆಗೆ ಒಯ್ದಿದ್ದರು. ಸ್ವಾಭಾವಿಕವಾಗಿ ಆ ಶಿಷ್ಟಮಂಡಲದಲ್ಲಿ ನಾನೂ ಒಬ್ಬನಾಗಿದ್ದೆನು. ಆಂಧ್ರಪ್ರಾಂತ ಮೊದಲು ಆ ಬಳಿಕ ಎರಡನೆಯದು ಈ ಮುಂತಾದ ಪಂಕ್ತಿಪ್ರಪಂಚ ಬೇಡ, ಎಲ್ಲ ಪ್ರಾಂತಗಳೂ ಒಮ್ಮೆಲೆ ಆಗಬೇಕು, ಬೇಗನೆ ಆಗಬೇಕು ಎಂದು ನಾವು ಪ್ರತಿಪಾದಿಸಿದೆವು.

ಗಡಿಗಳನ್ನು ಕುರಿತು ಗಾಂಧೀಜಿಯವರು ಖಂಡಿತವಾಗಿ ಹೇಳಿದ್ದೇನಂದರೆ, ಪರಸ್ಪರ ಸಮ್ಮತಿಯಿಂದಲೆ ನೆರೆ ಪ್ರಾಂತಗಳ ಪ್ರತಿನಿಧಿಗಳು ತಮ್ಮತಮ್ಮೊಳಗೆ

ಅವುಗಳನ್ನು ನಿರ್ಣಯಿಸಿಕೊಳ್ಳಬೇಕು. ' ಹರಿಜನ ' ಪತ್ರಿಕೆಯಲ್ಲಿ ಅವರು ಆ ರೀತಿ ಮೊದಲೇ ಬರೆದು ಬಿಟ್ಟಿದ್ದರು.

ನೀವು ಹೇಳುವ ಮಾತೇನೊ ನಿಜ. ಅದು ಆದರ್ಶರೂಪ. ಆದರೆ ಅದು ಆಗುವಂತೆ ತೋರುವದಿಲ್ಲ. ಒಂದೊಪ್ಪತ್ತು ಒಡಂಬಡಿಕೆ ಆಗದೆ ಹೋದಲ್ಲಿ ಈ ಮಾತನ್ನು ಪಂಚರಿಗೆ ಒಪ್ಪಿಸಲಡ್ಡಿಯಿಲ್ಲ, ಎಂದು ನಾನು ವಾದಿಸಿದೆನು. ಆದರೆ ಅವರು ಈ ಬಗ್ಗೆ ದೃಢಮನಸ್ಕರಾಗಿದ್ದರು. ಅವರು ಒಳ್ಳೆ ಅಂತಃಕರಣದಿಂದ ಅಂದದ್ದು ' ದಿವಾಕರ, ಅದು ಆಗದ ಮಾತು. ನಾನು ನಿಮಗೆ ಹೇಳುವೆ, ಕೇಳಿರಿ.' ಪಂಚರು ಕೊಟ್ಟ ನಿರ್ಣಯವು ಕೂಡ ಹೊರಗಿನವರು ಹೇರಿದ ಮಾತೇ. ಅದನ್ನು ಎರಡೂ ಪಕ್ಷದವರು ಮನಸಾ ಒಪ್ಪುವದು ಕಠಿಣ. ಇಬ್ಬರೂ ನೆರೆ ಪ್ರಾಂತದವರು ಶಾಂತಿಯಿಂದ ಬಾಳಬೇಕೆಂಬ ನಿರ್ಧಾರ ಮಾಡಿದ್ದರೆ ಯಾವುದೇ ಬಗೆಯ ತಿಕ್ಕಾಟವನ್ನು ಬರಗೊಡಲಿಕ್ಕಿಲ್ಲ ಎಂಬ ಸಂಕಲ್ಪವನ್ನು ಇಬ್ಬರೂ ಮಾಡಲಿಕ್ಕೆಬೇಕು. ಇದು ಅವರ ವಿಚಾರಸರಣಿ.

ಮಾರನೆ ದಿನ ನಾವು ಕಾಂಗ್ರೆಸ್ ವರ್ಕಿಂಗ ಕಮಿಟಿಯ ಕಡೆಗೆ ಶಿಷ್ಟಮಂಡಲದವರೆಲ್ಲ ಹೋದೆವು. ಗಾಂಧೀಜಿಯವರು ಅಲ್ಲಿ ಸ್ವಸ್ಥ ಕುಳಿತಿದ್ದರು. ಅವರು ಪಿಟ್ಟೆಂದು ಮಾತಾಡಲಿಲ್ಲ. ಗಾಂಧೀಜಿಯವರಂತೆಯೆ ವರ್ಕಿಂಗ ಕಮಿಟಿಯವರೂ ನಮಗೆ ಉಪದೇಶ ಮಾಡಿದರು. ಪ್ರಾಂತಗಳಲ್ಲಿ ಯಾವ ಪಂಕ್ತಿಪ್ರಪಂಚವನ್ನೂ ಮಾಡುವ ಉದ್ದೇಶವಿಲ್ಲ ಎಂದು ಹೇಳಿದರು.

೨೮ನೆಯ ತಾರೀಖಿನ ದಿನ ಗಾಂಧೀಜಿಯವರೊಡನೆ ನನ್ನ ಕೊನೆಯ ಮಾತಾಯಿತು ಎಂದು ಹೇಳಬಹುದು. ಆ ದಿನ ಮುಂಜಾನೆ ಹತ್ತು ಗಂಟೆಗೆ ಕಾಂಗ್ರೆಸ್ಸಿನ ಹೊಸ ಘಟನೆಯನ್ನು ಕುರಿತು ಚರ್ಚಿಸಲು ನಾವು ಕಾಂಗ್ರೆಸ ಘಟನಾಸಮಿತಿಯವರೆಲ್ಲರು ಅವರ ಕಡೆಗೆ ಹೋಗಿದ್ದೆವು. ಡಾ. ರಾಜೇಂದ್ರಪ್ರಸಾದರೂ ಇದ್ದರು.

೧೯೪೭ ರ ಅಕ್ಟೋಬರ ತಿಂಗಳಲ್ಲಿಯೆ ಗಾಂಧೀಜಿಯವರು ನನ್ನನ್ನು ಆ ಘಟನಾಸಮಿತಿಯಲ್ಲಿ ಸೇರಿಸಿದ್ದರು. ನಾನು ಹಲವಾರು ಸಾರೆ ಅವರೊಡನೆ ಆ ಬಗ್ಗೆ ಚರ್ಚಿಸಿದ್ದೇ ಕಾರಣ. ಆ ವರುಷ ಜುಲೈ ತಿಂಗಳಲ್ಲಿ ನಾನು ಬಿಡುಗಡೆ ಹೊಂದಿದಂದಿನಿಂದ ನಾನು ಅವರೊಡನೆ ಈ ಬಗ್ಗೆ ಬಹಳ ಮಾತಾಡಿದ್ದೆನು.

ಆ ಘಟನಾಸಮಿತಿಯು ತನ್ನ ಕೊನೆಯ ವರದಿಯನ್ನು ೧೯೪೮ರ ಏಪ್ರಿಲ

ದಲ್ಲಿ ಕೊಟ್ಟಿತು. ಆದರೆ ತತ್ಪೂರ್ವದಲ್ಲಿ ಆ ಕಮಿಟಿಯು ಮೂರು ಸಾರೆ ಅದಲುಬದಲಾಯಿತು. ಆ ಮೂರೂ ಕಮಿಟಿಗಳಲ್ಲಿ ನಾನು ಇದ್ದೆನು. ಕೊನೆಗೆ ಅವರ ವರದಿಯು ಏಪ್ರಿಲದಲ್ಲಿ ಸ್ವೀಕೃತವಾಗಿ ಅದೇ ಈಗ ಅಮಲಿನಲ್ಲಿರು ವದು. ನಾವು ಬರೆದ ಕೊನೆಯ ಖರಡೇ ಆ ದಿನ ಅಂದರೆ ೨೮ನೆ ಜಾನೆವರಿ ದಿನ ನಮ್ಮ ಚರ್ಚೆಯ ವಿಷಯವಾಗಿತ್ತು. ಅವರ ನಿಧನದ ಮೊದಲು ಎರಡೇ ದಿನದ ಮಾತಿದು.

ಗಾಂಧೀಜಿಯವರು ಬಿರ್ಲಾ ಭವನದಲ್ಲಿ ತಮ್ಮ ಕೋಣೆಯಲ್ಲಿ ಎಂದಿನಂತೆ ಶುಭ್ರಖಾದಿಯನ್ನು ಧರಿಸಿ ಮುಂದೆ ಒಂದು ಚಿಕ್ಕ ಡೆಸ್ಕನ್ನಿಟ್ಟುಕೊಂಡು ಕುಳಿತಿದ್ದರು. ಆ ದಿನ ಹಾಲು ಹಣ್ಣು ಹಸಿ ಕಾಯಿಪಲ್ಲೆ ಇವುಗಳನ್ನು ಮುಂಜಾವಿನ ಉಪಹಾರವೆಂದು ಅವರು ಸೇವಿಸುತಲಿದ್ದರು. ನಮ್ಮ ಮಾತಿನುದ್ದಕ್ಕೂ ಅವರ ಉಪಹಾರ ಮುಗಿಯಲೆ ಇಲ್ಲ. ಮಾತಿನಲ್ಲಿಯೆ ಅವರು ಮಗ್ನರಾಗಿಬಿಟ್ಟರು. ನಡುವೆ ಒಮ್ಮೆ ದೇವ ಶಂಕರರಾಯರು ಅವರಿಗೆ ನೆನಪುಗೊಟ್ಟರು. ಗಾಂಧೀಜಿಯವರು ಟೊಮಾಟೊಹಣ್ಣು ಹಾಗು ತೊಪ್ಪಲ ವನ್ನು ತಿನ್ನುತ್ತಾ ನಕ್ಕರು. ' ನಾನೊಂದು ದನದಂತೆ ಹಸಿ ಕಾಯಿಪಲ್ಲೆ ತಿನ್ನುತಿರುವೆನಲ್ಲವೆ, ' ಎಂದರು.

ನಮ್ಮ ಕಮಿಟಿಯ ಸಭಾಸದರಲ್ಲೊಬ್ಬರಾದ ಶ್ರೀ. ತಂಡನ್ನರು ಆ ದಿನದ ಚರ್ಚೆಯಲ್ಲಿ ನಮ್ಮೆಲ್ಲರಿಗಿಂತ ಹೆಚ್ಚು ಭಾಗವಹಿಸಿದರು. ರಾಜೇಂದ್ರ ಪ್ರಸಾದರು ಸ್ವಸ್ಥ ಕುಳಿತು ಕೇಳುತಿದ್ದರೆನ್ನಬಹುದು. ದೇವ, ಜುಗಲ ಕಿಶೋರ ಹಾಗೂ ನಾನು ಆ ಮೊದಲೇ ಹಲವು ಸಾರೆ ಗಾಂಧೀಜಿಯವರೊಡನೆ ಆ ಬಗ್ಗೆ ಮಾತನಾಡಿದ್ದರಿಂದ ಅವರ ವೃತ್ತಿ ಒಲವುಗಳನ್ನು ನಾವು ಅರಿತವ ರಾಗಿದ್ದೆವು. ಡಾ|| ಪಟ್ಟಾಭಿಯವರು ಹಾಗು ಶ್ರೀ. ಎಸ್. ಕೆ. ಪಾಟೀಲ ಇವರು ವಿಶೇಷ ಮಾತಾಡಲಿಚ್ಛಿಸಲಿಲ್ಲ. ನಮ್ಮ ಮನಸು ಹಾಗು ಗಾಂಧೀಜಿ ಯವರ ಮನಸು ಬೇರೆ ಬೇರೆ ರೀತಿ ಕೆಲಸ ಮಾಡುತಿದ್ದವೆಂಬುದು ನಮಗೆ ಸ್ಪಷ್ಟ ಕಂಡುಬಂದಿತು. ಸೇವಾಭಾವದಿಂದ ಶುದ್ಧ ವಿಧಾಯಕ ಕಾರ್ಯಕ್ರಮ ಗಳಲ್ಲಿ ಕಾಂಗ್ರೆಸ್ಸು ತೊಡಗಬೇಕು, ರಾಜಕಾರಣವು ತನ್ನ ಪಾಲಿಗೆ ತಾನು ಭದ್ರವಾಗಿರಬಲ್ಲದು, ಎಂಬುದೆ ಅವರ ವಿಚಾರವಿತ್ತು. ಈಚೆಗೆ ಅಧಿಕಾರ ಪ್ರಾಪ್ತಿಯ ನಂತರ ಕಾಂಗ್ರೆಸ್ಸಿನಲ್ಲಿ ಸೇರಿದ ಕೊಳೆ ಹಾಗು ದೋಷಗಳನ್ನು

ಹೋಗಲಾಡಿಸಿ ಅದನ್ನು ಒಂದು ರಾಜಕೀಯ ಸಂಸ್ಥೆಯನ್ನಾಗಿಯೆ ಇಡ ಬೇಕೆಂಬುದು ನಮ್ಮ ಅಭಿಪ್ರಾಯವಿತ್ತು. ಮಾತು ನಡೆದಾಗ ಒಮ್ಮೆ ನಾನು ಅಂದದ್ದು, ‘ ಈಗೊಂದು ನಿರ್ಣಾಯಕ ಕ್ಷಣವು ಬಂದಿದೆ. ಕಾಂಗ್ರೆಸ್ಸು ಒಂದು ರಾಜಕೀಯ ಪಕ್ಷವಾಗಿ ಉಳಿಯಬೇಕು ಅಥವಾ ಪೂರ್ಣವಾಗಿ ವಿಧಾಯಕ ಕಾರ್ಯಗಳಲ್ಲಿ ತೊಡಗಬೇಕು.’ ಗಾಂಧೀಜಿಯವರು ಅದಕ್ಕೆ ಉತ್ತರರೂಪವಾಗಿ, ‘ ವಿಧಾಯಕ ಕಾರ್ಯವನ್ನು ಬಿಟ್ಟುಗೊಟ್ಟರೆ, ಇಲ್ಲವೆ ದುರ್ಲಕ್ಷಿಸಿದರೆ ಕಾಂಗ್ರೆಸ್ಸು ಆತ್ಮಘಾತವನ್ನು ಮಾಡಿಕೊಂಡಂತಾಗುವದು,’ ಎಂದರು.

ಚರ್ಚೆ ಸುಮಾರು ಒಂದು ಗಂಟೆ ನಡೆದ ಬಳಿಕ, ತಾವು ತಮ್ಮ ಖರಡನ್ನು ಸಿದ್ಧಪಡಿಸಿಕೊಟ್ಟರೆ ಒಳಿತಾಗುವದು, ಎಂದು ನಾವು ಅವರಿಗೆ ಬಿನ್ನವಿಸಿ ಕೊಂಡೆವು. ೧೯೪೬ರ ಡಿಸೆಂಬರದಲ್ಲಿ ಕಲಕತ್ತೆಯಲ್ಲಿ ವೊದಲು ಕೇಳಿದಾಗ ನೀವು ಹೇಳುತಿದ್ದುದನ್ನೆ ಈಗಲಾದರೂ ಹೇಳುತಿರುವಿರಿ, ಎಂದು ನಾನು ನೆನಪುಗೊಟ್ಟೆನು. ಆಗಿನ ಚರ್ಚೆ ನಡೆದುಹೋದ ನಂತರ ಒಂದು ಖರಡನ್ನು ಅವರು ನನ್ನ ಕಡೆಗೆ ಕಳುಹಿದ್ದರು. ಅದರ ಪ್ರತಿಯೊಂದನ್ನು ಈಗ ಕಳಿ ಸುವೆ ಎಂದು ನಾನು ಅಂದೆನು. ಕೂಡಲೆ ಆ ಸೂಚನೆಯನ್ನು ಅವರು ಸ್ವಾಗತಿಸಿದರು.

ಅದೇ ದಿನ ಮಧ್ಯಾನ್ಹ ಹುಡುಕಾಡಲಾಗಿ ನನಗೆ ಆ ಮೂಲ ಹಿಂದೀ ಖರಡು ಅದರ ಇಂಗ್ಲೀಶ ಭಾಷಾಂತರ ಇವೆರಡೂ ದೊರೆತವು. ಅವುಗಳನ್ನು ಕೂಡಲೇ ಕಳುಹಿಕೊಟ್ಟೆನು. ಅವುಗಳ ಉಪಯೋಗ ಅವರಿಗೆ ಚೆನ್ನಾಗಿ ಆಯಿತು. ಲೋಕಸೇವಕನ ಗುಣಕರ್ಮಗಳು ಆ ಖರಡಿನಲ್ಲಿದ್ದಂತೆಯೆ ಈ ಹೊಸ ಖರಡಿನಲ್ಲಿಯೂ ಇವೆ. ಅವರು ಹೊಸ ಖರಡನ್ನು ತಮ್ಮ ನಿಧನದ ವೊದಲು ನಾಲ್ಕೇ ತಾಸು ಕಳುಹಿದರು.

ಅದೇ ಅವರು ರಾಷ್ಟ್ರಕ್ಕೆ ಕೊಟ್ಟ ಕೊನೆಯ ಆದೇಶ.

ಕಾಂಗ್ರೆಸ್ಸನ್ನು ರಾಜಕೀಯ ಸಂಸ್ಥೆಯೆಂದು ಇಡದೆ ಅದನ್ನು ವಿಸರ್ಜಿಸಿ ಬಿಡಬೇಕು ಎಂದು ಅವರ ಅಭಿಪ್ರಾಯವಿತ್ತು. ಅವರೆದುರು ಒಂದು ಹೊಸ ಸಂಘಟನೆಯ ಚಿತ್ರವಿತ್ತು. ಸೇವಾಧರ್ಮದಿಂದ ಪ್ರೇರಿತರಾದ ಲಕ್ಷಾಂತರ ಸೇವಕರು ಹಳ್ಳಿಹಳ್ಳಿಗೆ ಹೋಗಿ ವಿಧಾಯಕ ಕಾರ್ಯಕ್ರಮದ ಮೂಲಕ ಸೇವಾ ರತರಾಗಬೇಕು ಎಂಬುದೆ ಅವರ ಉದ್ದೇಶ. ರಾಜಕೀಯ ಪಕ್ಷೋಪಪಕ್ಷಗಳ

ಗೊಂದಲದಲ್ಲಿ ತಾವು ಅಥವಾ ಕಾಂಗ್ರೆಸ್ಸು ಬೀಳುವದು ಬೇಡ ಎಂಬುದು ಅವರ ಮನೀಷೆ. ಸಮಗ್ರ ಗ್ರಾಮಸೇವೆಗೆ ಅವರು ಅತ್ಯಂತ ಮಹತ್ವ ಕೊಡುತಿದ್ದರು. ಗ್ರಾಮಸೇವಕರು ತಮ್ಮ ಸೇವೆಯ ಮೂಲಕ ಪ್ರಚಂಡವಾದ ನೈತಿಕ ಶಕ್ತಿಯನ್ನು ಬೆಳೆಸಿ ರಾಜಕಾರಣ ಹಾಗು ಚುನಾವಣೆ ಇವೆಲ್ಲವುಗಳ ಮೇಲೆ ಸಹ ತಮ್ಮ ಪ್ರಭಾವವನ್ನು ಬೀರಲು ಸಮರ್ಥರಾಗಬೇಕೆಂದು ಅವರ ಹಾರೈಕೆ.

ಕಾಂಗ್ರೆಸ್ಸು ರಾಜಕೀಯ ಸಂಸ್ಥೆಯೆಂದು ಉಳಿಯಬಾರದೆಂದು ಅವರ ಮತವಿದ್ದರೂ ಅವರು ಇನ್ನೂ ಬದುಕಿ ಬಾಳಿದ್ದರೆ ಇತರ ರಾಜಕೀಯ ಪಕ್ಷಗಳು ಅಸ್ತಿತ್ವದಲ್ಲಿ ಬರುವವರೆಗಾದರೂ ಸದ್ಯಕ್ಕೆ ಅದು ಇರಬೇಕು ಎಂಬುದಕ್ಕೆ ಅವರು ಒಪ್ಪಬಹುದಾಗಿತ್ತು. ಇಲ್ಲದೆ ಹೋದರೆ ರಾಜಕೀಯ ಕ್ಷೇತ್ರದಲ್ಲಿ ಶೂನ್ಯಾಕಾರವಾಗಿ ಹೋಗಬಹುದೆಂಬುದನ್ನು ಅವರು ಮನ್ನಿಸುವ ಸಂಭವವಿತ್ತು.

ಗಾಂಧೀಜಿಯವರು ಕ್ರಮೇಣ ಕಾಂಗ್ರೆಸ್ಸನ್ನು ಈಗಿನ ರೂಪಕ್ಕೆ ತಂದಿದ್ದರು. ಅದರ ಘಟನೆಯಲ್ಲಿ ತಿದ್ದುಪಡಿಗಳನ್ನು ಮಾಡಿ ಅದನ್ನು ಪೂರ್ಣ ಪ್ರಜಾತಂತ್ರದ ತತ್ವಗಳಿಗೆ ಹೊಂದುವಂತೆ ಮಾಡಿಬಿಟ್ಟಿದ್ದರು. ೧೯೪೬ರಲ್ಲಿ ಅದರ ಸಭಾಸದ ಸಂಖ್ಯೆ ಒಂದು ಕೋಟಿಗೆ ಹೋಗಿತ್ತು. ವಿಧಾಯಕ ಕಾರ್ಯದ ಬಗ್ಗೆ ಅವರು ಯಾವಾಗಲೂ ಒತ್ತಿ ಹೇಳುತ್ತ ಬಂದಿದ್ದರಿಂದ ಕಾಂಗ್ರೆಸ್ಸಿನ ಪ್ರತ್ಯಕ್ಷ ಸಭಾಸದರಿಲ್ಲದ ಲಕ್ಷಾಂತರ ಹಳ್ಳಿಗರು ಅವರ ವರ್ಚಸ್ಸಿಗೆ ಒಳಗಾಗಿದ್ದರು.

ಆದರೆ ಈ ಮಹಾಮರವು ಈಗ ಹುಳಿತಿದೆ, ಅದರಲ್ಲಿ ರೋಗ ಉಂಟಾಗಿದೆ, ಅದು ಇನ್ನು ತನ್ನ ಕೆಲಸವನ್ನು ಮಾಡಲು ಸಮರ್ಥವಿಲ್ಲ, ಎಂದು ಅವರಿಗೆ ಅನಿಸಿದೊಡನೆ ಅವರು ಅದನ್ನು ಕಡಿದೊಗೆಯಲು ಸಿದ್ಧರಾದರು. ಅದರ ಸ್ಥಳದಲ್ಲಿ ಇನ್ನೊಂದು ಮರದ ಅಗಿಯನ್ನು ಹಚ್ಚಲು ಟೊಂಕ ಕಟ್ಟಿದರು.

ಗಾಂಧೀಜಿಯವರೊಡನೆ ನಿಕಟ ಸಂಬಂಧವುಳ್ಳವರಿಗೆಲ್ಲ ಅವರ ಮನಸು ಯಾವ ರೀತಿ ಕೆಲಸ ಮಾಡುತಿತ್ತೆಂಬುದು ಗೊತ್ತು. ಅನೇಕ ಸಾರೆ ಅವರು ತಮ್ಮ ಅಮೋಘವಾದ ಹುಟ್ಟುಬುದ್ಧಿಯಿಂದಲೇ ಮಾತುಗಳನ್ನು ನಿರ್ಣಯಿಸುತಿದ್ದರು. ಆದುದರಿಂದ ಅಂಥ ಸಂದರ್ಭಗಳಲ್ಲಿ ಅವರ ತರ್ಕವು ಕುಂಟ

ಎನಿಸುತಿತ್ತು. ಈ ಅವರ ಮನಸಿನ ಕಾರ್ಯಪದ್ಧತಿಯನ್ನು ಬಣ್ಣಿಸುವಾಗ ಡಾ. ಪಟ್ಟಾಭಿ ಸೀತಾರಾಮಯ್ಯನವರು ಅವರ ಮನಸನ್ನು ಕಣ್ಣುಕಟ್ಟಿದ ಪಾರಿವಾಳಗಳೊಡನೆ ಹೋಲಿಸುತಿದ್ದರು. ಒಂದು ಊರಿಂದ ಇನ್ನೊಂದೂರಿಗೆ ಅವುಗಳನ್ನು ಒಯ್ದು ಕಣ್ಣುಕಟ್ಟಿ ಆಕಾಶದಲ್ಲಿ ಹಾರಬಿಟ್ಟರೆ ಅವು ಹಲವೊಂದು ಕಾಲ ಅಲ್ಲಿಯೆ ಸುತ್ತುವವು. ಬಳಿಕ ತಪ್ಪದೆ ಒಮ್ಮೆಲೆ ತಮ್ಮ ಮನೆಯಿದ್ದ ಊರಿನ ಹಾದಿಯನ್ನು ಹಿಡಿಯುವವು. ಗಾಂಧೀಜಿಯವರೂ ಹಾಗೆಯೆ. ಯಾವದೊಂದು ತೊಡಕಿನ ಸಮಸ್ಯೆಯ ಬಗ್ಗೆ ಅವರು ತರ್ಕದ ದೃಷ್ಟಿಯಿಂದ ಅತ್ತಿತ್ತ ಸುತ್ತಾಡುತಿದ್ದಂತೆ ಕಂಡರೂ ಅವರ ಸಿರಕಿನ ನಿರ್ಣಯವು ಮಾತ್ರ ತಪ್ಪದೆ ಸತ್ಯ ಅಹಿಂಸೆ ಎಂಬ ತತ್ವಗಳನ್ನು ಹೊಂದಿಕೊಂಡೆ ಇರುತಿತ್ತು. ಸತ್ಯ ಅಹಿಂಸೆಗಳ ಬಗ್ಗೆ ಇದ್ದ ಅವರ ಜಾಗರೂಕತೆ ಅಷ್ಟೊಂದು ಹುಟ್ಟುಬುದ್ಧಿಯಂತೆ ಸ್ವಾಭಾವಿಕವಾಗಿಬಿಟ್ಟಿತ್ತು. ಆದುದರಿಂದಲೆ ಅವರು ಸತ್ಯ ಅಹಿಂಸೆಗಳ ಮೂರ್ತಿ ಎನಿಸುವರು.

Mahatma Gandhi Memorial Library

5, Kumara Park (East), Bangalore-1

BOOK CARD

Author. DIWAKAR (Ranganatha Ramachandra) ( ).

Title Gandhiji nanu Kandante.

Ticket No.	Issue Date	Return Date	Ticket No.	Issue Date	Return Date

SKP